# ಯುಗರಶ್ಮಿ

★ ಪ್ರಕೃತಿಯೂ ದೈವವೂ
★ ವೈದಿಕ ಧರ್ಮ ಮತ್ತು ಬಹುಪತ್ನೀತ್ವ
★ ಯೇಸುಕ್ರಿಸ್ತ ಭಾರತಕ್ಕೆ ಬಂದಿದ್ದ !
★ ಇಸ್ಲಾಂ ಮತ್ತು ವಿಜ್ಞಾನ
★ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ
★ ಅಗ್ರೇಸರ ಪ್ರವಾದಿ
★ ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ
★ **MUHAMMAD- the most successful Prophet**
ಮುಹಮ್ಮದ್– ಅತ್ಯಂತ ವಿಜಯಶಾಲಿ ಪ್ರವಾದಿ

ತ್ರೈಮಾಸಿಕ

ಜನವರಿ 1987

ಬೆಲೆ: ರೂ. 1-00

ಒಬ್ಬ ಮುನ್ನೆಚ್ಚರಿಕೆಯನ್ನೀಯುವವನು ಬಂದಿರದ ಒಂದು ಸಮುದಾಯವಾಗಲಿ ಇಲ್ಲ.

—ಪವಿತ್ರ ಖುರ್‌ಆನ್ (35:24)

# ಯುಗರಶ್ಮಿ ತ್ರೈಮಾಸಿಕ

10–23–1008, ಅನ್ಸಾರಿ ರೋಡ್, ಬಂದರ್, ಮಂಗಳೂರು—575 001

ಬಿಡಿಪ್ರತಿ : ರೂ. 1–00

ವಾರ್ಷಿಕ ಚಂದಾ : ರೂ. 4–00

ಅಂಚೆ ಮೂಲಕ : ರೂ. 5–00

ವಿಷಯ ಸೂಚಿಕೆ :

| | ಪುಟ |
|---|---|
| ★ ಪತ್ರಿಕೆಯ ತಿಳಿಗೇಡಿತನ | 1 |
| ★ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು | 2 |
| ★ ಮೈತ್ರಿ ಹೇಗೆ ಸಾಧ್ಯ? | 2 |
| ★ ಪ್ರಕೃತಿಯೂ ದೈವವೂ | 3 |
| ★ ವೈದಿಕ ಧರ್ಮ ಮತ್ತು ಬಹುಪತ್ನೀತ್ವ | 5 |
| ★ ಯೇಸುಕ್ರಿಸ್ತ ಭಾರತಕ್ಕೆ ಬಂದಿದ್ದ! | 7 |
| ★ ಇಸ್ಲಾಂ ಮತ್ತು ವಿಜ್ಞಾನ | 10 |
| ★ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ–9 | 14 |
| ★ ಅಗ್ರೇಸರ ಪ್ರವಾದಿ | 19 |
| ★ ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ–4 | 26 |
| ★ MUHAMMAD– the most successful prophet<br>ಮುಹಮ್ಮದ್ – ಅತ್ಯಂತ ವಿಜಯಶಾಲಿ ಪ್ರವಾದಿ | 31 |
| ★ ಅಹ್ಮದಿಯಾ ವಾರ್ತೆಗಳು | 35 |
| ★ ಜ। ಎಂ. ಅಬ್ದುಲ್ ರಶೀದ್ ಸಾಹೇಬ್ ನಿಧನ | 39 |

## AHMADIYYA URDU LITERATURE

1. Ahmadiyyath Ka Paigham
2. Aqaide Ahmadiyyath
3. Zuhoore Imam Mahdi
4. Nuzoolul Masih
5. Kya Hazrath Masih Nasree Zinda Hein?
6. Masih Hindustan Mein
7. Hazrath Masih Mashriq Mein
8. Sadaqathe Hazrath Masih Mauwood
9. Khatme Nubuwwath Ki Haqeeqath
10. Khathamunnabiyyeen Aur Buzurgane Ummath

*—: WILL BE SENT FREE :—*

Apply with 30 paise stamp for each book to :

**The Book Secretary,**

**Ahmadiyya Muslim Mission**

10–23–1008 Ansari Road, Bunder, Mangalore–575 001

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

ಸಂಪುಟ: 12 | ಡಿಸೆಂಬರ್ 1986–ಜನವರಿ 1987 / ಫತಹ್ 1365 – ಸುಲ್ಹ್ 1366 | ಸಂಚಿಕೆ: 2

## ಪತ್ರಿಕೆಯ ತಿಳಿಗೇಡಿತನ

ಬೆಂಗಳೂರಿನಿಂದ ಹೊರಡುವ ಇಂಗ್ಲಿಷ್ ದಿನಪತ್ರಿಕೆ Deccan Herald (ಡೆಕ್ಕಾನ್ ಹೆರಾಲ್ಡ್)ನ ಡಿಸೆಂಬರ್ 7ರ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದ Mohammad the Idiot (ತಿಳಿಗೇಡಿ ಮುಹಮ್ಮದ್) ಎಂಬ ಕ್ಷುದ್ರ ಕಿರುಗತೆಯು ಮುಸ್ಲಿಮರ ಆಕ್ರೋಶಕ್ಕೆ ಕಾರಣವಾಯಿತು. ರೊಚ್ಚಿಗೆದ್ದ ಮುಸ್ಲಿಮರು ಪ್ರತಿಭಟನೆಗಿಳಿದಾಗ ಉಂಟಾದ ದಾಂಧಲೆಯಲ್ಲಿ ಪೋಲೀಸು ಗೋಳಿಬಾರಿನಿಂದ ಸುಮಾರು 17 ಅಮೂಲ್ಯ ಮಾನವ ಜೀವಗಳು ಬಲಿಯಾದುವು. ಸ್ಥಾಪಿತ ಹಿತಾಸಕ್ತರ ಪ್ರೇರಣೆಯಿಂದಲೂ ಸಮಾಜ ಘಾತುಕರ ರಂಗಪ್ರವೇಶದಿಂದಲೂ ಪ್ರತಿಭಟನೆಯ ಸ್ವರೂಪವು ನಿಯಂತ್ರಣಾತೀತವಾಗಿ ಧರ್ಮ ಸಾಮರಸ್ಯಕ್ಕೆ ಭಂಗವುಂಟಾಯಿತು. ಸಾರ್ವಜನಿಕರ ಅಪಾರ ಸಂಪತ್ತುಗಳು ಹಾನಿಗೀಡಾದುವು.

ಪಿ. ಕೆ. ಎನ್. ನಂಬೂದಿರಿಯ ಈ ಕಿರುಗತೆ ಮುಹಮ್ಮದ್ ಎಂಬೊಬ್ಬ ವ್ಯಕ್ತಿಯ ಕುರಿತು ಹೆಣೆದದ್ದಾಗಿದೆ. ಕತೆಯಲ್ಲಿ ಬರುವ ಇತರ ಪಾತ್ರಧಾರಿಗಳ ಹೆಸರುಗಳು (ಅಬ್ದುಲ್ಲಾ, ಆಮಿನ, ಫಾತಿಮಾ) ಪ್ರವಾದಿ ಮುಹಮ್ಮದ್ (ಸ) ರವರ ಕುಟುಂಬ ವರ್ಗದವರ ಹೆಸರುಗಳಾಗಿವೆ. ಮಾತ್ರವಲ್ಲದೆ ಕತೆಯ ಕೊನೆಯಲ್ಲಿ ಕಥಾನಾಯಕನ ಬಗ್ಗೆ the mute prophet (ಮೂಗ ಪ್ರವಾದಿ) ಎಂದು ಸಹ ಬರೆಯಲಾಗಿದೆ. ಇವೆಲ್ಲಾ ಮುಹಮ್ಮದ್ ಪೈಗಂಬರರನ್ನು ಪರೋಕ್ಷವಾಗಿ ಅಪಮಾನಿಸಿದಂತೆ ಎಂದು ಮುಸ್ಲಿಮರು ತಿಳಕೊಳ್ಳುವರೆ ಎಡೆಯಾದುದು ಸ್ವಾಭಾವಿಕವೇ.

ಪತ್ರಿಕೆಯ ಸಂಪಾದಕ ಮಂಡಳಿಗೆ ಆ ಕತೆಯನ್ನು ಪ್ರಕಟಿಸಲೇ ಬೇಕೆಂದಿರುತ್ತಿದ್ದರೆ, ಅದರ ಶೀರ್ಷಿಕೆಯನ್ನು ಬದಲಾಯಿಸಬಹುದಾಗಿತ್ತು. ಕತೆಯ ಕೊನೆಯ ವಾಕ್ಯವನ್ನಂತೂ ಕಿತ್ತುಹಾಕಲೇ ಬೇಕಿತ್ತು. ಹಾಗೆ ಮಾಡದೆ ಇದ್ದುದು ಅದರ ತಿಳಿಗೇಡಿತನವೇ ಅಥವಾ ದುರುದ್ದೇಶವೇ ?

ಪತ್ರಿಕೆಗಳು ಶಾಂತಿಭಂಗಕ್ಕೆ ದಾರಿಮಾಡಿಕೊಡುವಂತಹ ಲೇಖನಗಳನ್ನಾಗಲಿ ಕತೆಗಳನ್ನಾಗಲಿ ಪ್ರಕಟಿಸಬಾರದೆಂದು ಈ ಮೇಲಿನ ಘಟನೆ ನಮಗೆ ಪಾಠಕಲಿಸುತ್ತದೆ. ಪತ್ರಿಕೆಗಳು ತಮ್ಮ ಜವಾಬ್ದಾರಿಕೆಗಳನ್ನು ಅರಿತುಕೊಂಡು ವರ್ತಿಸಿದರೆ ಇನ್ನು ಮುಂದೆಯಾದರೂ ಇಂತಹ ಅಹಿತಕರ ಘಟನೆಗಳನ್ನು ತಪ್ಪಿಸಲು ಸಾಧ್ಯವಿದೆ. ಪತ್ರಿಕಾ ಸ್ವಾತಂತ್ರ್ಯವೆಂಬುದು ಸಮಾಜದ ಯಾವುದೇ ವಿಭಾಗದವರ ಮನಸ್ಸನ್ನು ನೋಯಿಸುವ ಸ್ವಾತಂತ್ರ್ಯವಲ್ಲವೆಂದು ಪತ್ರಿಕೆಗಳು ತಿಳಿದಿರಬೇಕು.

—ಸಂಪಾದಕ

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಸುಶಿಕ್ಷಣಕ್ಕಿಂತ ಬೆಲೆಬಾಳುವ ಒಂದು ಪಾರಿತೋಷಕವನ್ನು ಒಬ್ಬ ಪಿತನು ತನ್ನ ಸಂತಾನಕ್ಕೆ ನೀಡಲಿಕ್ಕೆ ಇಲ್ಲ.

2. ತನ್ನನ್ನು ಆಶ್ರಯಿಸಿ ಇರುವವರಿಗೆ ನೀಡುವ ನೆರವನ್ನು ಹಿಂತೆಗೆದುಕೊಳ್ಳುವುದು ಪಾಪವಾಗಿದೆ.

3. ಮಾತಾಪಿತರೊಡನೆ ಔದಾರ್ಯದಿಂದ ವರ್ತಿಸಿರಿ; ನಿಮ್ಮ ಮಕ್ಕಳು ಸಹ ನಿಮ್ಮೊಡನೆ ಉದಾರತೆಯಿಂದ ವರ್ತಿಸುವರು. ನೀವು ಚಾರಿತ್ರ್ಯವನ್ನು ಪಾಲಿಸಿರಿ; ನಿಮ್ಮ ಸ್ತ್ರೀಯರೂ ಚಾರಿತ್ರ್ಯವತಿಗಳಾಗುವರು.

4. ತನ್ನ ತಂದೆಯನ್ನು ಕೋಪದಿಂದ ನೋಡುವವನು ಆತನೊಡನೆ ಔದಾರ್ಯ ತೋರಿಸುವುದರಲ್ಲಿ ಪರಾಜಿತನಾದನು.

5. ದೊಡ್ಡ ಇಬ್ಬರು ಕಪಟಿಗಳು ಇವರಾಗಿದ್ದಾರೆ: ಒಂದು, ಜನತೆಯನ್ನಿಡೀ ಅಪಕೀರ್ತಿಗೆ ಈಡುಮಾಡುವ ಕವಿ. ಎರಡು, ತಂದೆಯನ್ನು ಗೌರವಿಸದ ಮಗ.

6. ಸ್ವರ್ಗವು ತನ್ನ ಮಾತೆಯ ಪಾದದಡಿಯಲ್ಲಿದೆ.

7. ತನ್ನ ತಂದೆಯ ಮಿತ್ರರೊಡನೆ ಸ್ನೇಹಭಾವವನ್ನು ತೋರಿಸುವುದು ಸುಸ್ವಭಾವದ ಒಂದಂಶವಾಗಿದೆ.

(**ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್** ಬರೆದ **Wisdom of the Holy Prophet** ನಿಂದ ಉದ್ಧೃತ)

---

# ಮೈತ್ರಿ ಹೇಗೆ ಸಾಧ್ಯ?

ಒಂದು ಸಮುದಾಯವು ಮತ್ತೊಂದು ಸಮುದಾಯದ ಭಕ್ತ್ಯಾದರಗಳಿಗೆ ಪಾತ್ರರಾದ ಪ್ರವಾದಿಗಳನ್ನೋ ಮಹಾತ್ಮರನ್ನೋ ಅವರ ಪವಿತ್ರ ಗ್ರಂಥವನ್ನೋ ಅವಹೇಳವನ್ನುಂಟು ಮಾಡಲೋ ಅಪಮಾನಿಸಲೋ ಪ್ರೇರಿತರಾಗುವ ರೀತಿಯ ವಿಶ್ವಾಸ, ಅಭಿಪ್ರಾಯ ವ್ಯತ್ಯಾಸಗಳು ಪರಸ್ಪರ ಸೌಹಾರ್ದತೆಗೂ ಮೈತ್ರಿಗೂ ಪ್ರತಿಬಂಧಕಗಳಾಗುತ್ತವೆ..........

ಪ್ರಿಯ ಸಹೃದಯರೇ, ಒಂದು ಸಮುದಾಯವು ಅನ್ಯ ಸಮುದಾಯಗಳ ಪ್ರವಾದಿಗಳನ್ನೂ ಮಹಾತ್ಮರನ್ನೂ ನಿಂದಿಸುವುದೂ ಆಕ್ಷೇಪಿಸುವುದೂ ಕಾಲಾಂತರದಲ್ಲಿ ದೇಹಕ್ಕೆ ಮಾತ್ರವಲ್ಲ ಆತ್ಮಕ್ಕೆ ಸಹ ನಾಶವನ್ನುಂಟುಮಾಡಿ ಮತಪರವೂ ಲೌಕಿಕವೂ ಆದ ಜೀವಿತಕ್ಕೇನೇ ಹಾನಿಯನ್ನುಂಟುಮಾಡುವ ಒಂದು ಭಯಂಕರ ವಿಷವೆಂದು ದೀರ್ಘಕಾಲದ ಅನುಭವಗಳೂ ವಿವಿಧ ಸಂದರ್ಭಗಳಲ್ಲಿ ನಡೆದ ಪರೀಕ್ಷಾ ಸಂಭವಗಳೂ ನಮಗೆ ರುಜುಪಡಿಸಿರುತ್ತವೆ. ಯಾವ ರಾಜ್ಯ ನಿವಾಸಿಗಳು ಅನ್ಯೋನ್ಯ ಮತಾಚಾರ್ಯರನ್ನು ಅವಹೇಳಿಸುತ್ತಾರೋ ಅವರಿಗೆ ಸಮಾಧಾನದ ಜೀವಿತ ಸಾಧ್ಯವಲ್ಲ. ಒಂದು ಸಮುದಾಯವು ಮತ್ತೊಂದು ಸಮುದಾಯದ ಪ್ರವಾದಿಗಳನ್ನು ಅಥವಾ ಎರಡೂ ಸಮುದಾಯಗಳು ಅನ್ಯೋನ್ಯ ಪ್ರವಾದಿಗಳನ್ನೂ ಋಷಿಗಳನ್ನೂ ಅವತಾರ ಪುರುಷರನ್ನೂ ಆಕ್ಷೇಪಿಸುವುದಾದರೆ, ದೂಷಿಸುವುದಾದರೆ ಆ ಸಮುದಾಯಗಳೆಡೆಯಲ್ಲಿ ಎಂದಿಗೂ ಅನ್ಯೋನ್ಯ ಯಥಾರ್ಥ ಐಕ್ಯ ಮತ್ತು ಮೈತ್ರಿಯೇರ್ಪಡಲಾರದು. ತಾನು ನಂಬಿ ಆದರಿಸುವ ಪ್ರವಾದಿಯನ್ನೋ ಮತಾಚಾರ್ಯನನ್ನೋ ಇನ್ನೊಬ್ಬನು ನಿಂದಿಸುವುದನ್ನು ಕೇಳಿದಾಗ ಯಾರಿಗೆ ತಾನೆ ರೋಷವುಂಟಾಗಲಾರದು ? ಮುಸ್ಲಿಮರು ತಮ್ಮ ಪ್ರವಾದಿಯನ್ನು ದೈವವೆಂದೋ ದೈವಪುತ್ರನೆಂದೋ ಭಾವಿಸುವುದಿಲ್ಲವಾದರೂ ಅವರು ಆ ಪುಣ್ಯಾತ್ಮರನ್ನು ಭೂಜಾತರಾದ ಸಕಲರಿಗಿಂತ ಶ್ರೇಷ್ಠನೆಂದು ನಂಬುವ ಕಾರಣ ಆ ಮಹಾತ್ಮರನ್ನು ಸಂಬಂಧಿಸಿ ಮಾತನಾಡುವಾಗ ಗೌರವಾದರಗಳಿಂದ ಕೂಡಿರದ ಪಕ್ಷದಲ್ಲಿ ಒಬ್ಬ ಯಥಾರ್ಥ ಮುಸ್ಲಿಮನೊಡನೆ ಸ್ನೇಹ ಸಂಬಂಧವನ್ನು ಸ್ಥಾಪಿಸಲು ಒಬ್ಬ ಅಮುಸ್ಲಿಮನಿಗೆ ಒಮ್ಮೆಯೂ ಸಾಧ್ಯವಿಲ್ಲ.

ನಾವು ಇತರ ಸಮುದಾಯಗಳ ಪ್ರವಾದಿಗಳನ್ನು ಒಮ್ಮೆಯೂ ನಿಂದಿಸುವುದಿಲ್ಲ. ತದ್ವಿರುದ್ಧವಾಗಿ, ಪ್ರಪಂಚದಲ್ಲಿ ಹಲವು ಕಾಲಘಟ್ಟಗಳಲ್ಲಿ ವಿವಿಧ ಜಾತಿಗಳೆಡೆಯಲ್ಲಿ ಆಗಮಿಸಿದ ಎಲ್ಲಾ ಪ್ರವಾದಿಗಳನ್ನು ನಂಬಿ ಆದರಿಸುತ್ತೇವೆ. ಆ ಮಹಾತ್ಮರನ್ನು ಕೋಟಿಗಟ್ಟಲೆ ಜನರು ನಂಬಿ, ಅವರ ಹೆಸರಿನಲ್ಲಿ ಲೋಕದ ಯಾವುದಾದರೊಂದು ಕಡೆಯಲ್ಲಿರುವ ಒಂದು ಜನವಿಭಾಗ ಅನೇಕ ಯುಗಗಳಿಂದ ಸ್ನೇಹಾದರಗಳನ್ನು ಅರ್ಪಿಸುತ್ತಾ ಬರುತ್ತಿರುವುದೇ ಆ ಮಹಾತ್ಮರ ಸತ್ಯತೆಗೆ ತಕ್ಕುದಾದ ಸಾಕ್ಷ್ಯವಾಗಿದೆ. ಅವರು ದೈವ ನಿಯುಕ್ತರಾದ ಸತ್ಯಪುರುಷರಲ್ಲವಾಗಿದ್ದರೆ ಅವರ ಹೆಸರಿನಲ್ಲಿ ಕೋಟಿಗಟ್ಟಲೆ ಜನರ ಹೃದಯಗಳಲ್ಲಿ ಸ್ಥಾಯಿಯಾದ ಭಕ್ತಿ ವಿಶ್ವಾಸಗಳು ನೆಲೆಗೊಂಡಿರಲು ಸಾಧ್ಯವಿಲ್ಲ. (**ಮೈತ್ರಿ ಸಂದೇಶ**)

—**ಹಝ್ರತ್ ಅಹ್ಮದ್,** ಅಹ್ಮದಿಯಾ ಸಂಘಟನೆಯ ಸ್ಥಾಪಕರು

# ಪ್ರಕೃತಿಯೂ ದೈವವೂ

★ ಮೌಲಾನಾ ಬಿ. ಅಬ್ದುಲ್ಲಾ ಎಚ್. ಎ.

"ಒಂದು ವಸ್ತು ಉಂಟಾಗುವಾಗ ಒಬ್ಬ ಕರ್ತನಿದ್ದಾನೆಂದೂ ಆ ಕರ್ತನೇ ದೈವವೆಂದೂ ಊಹಿಸಿರಿ. ಹಾಗಾದರೆ ಆ ದೈವಕ್ಕೆ ನಿಮ್ಮ ನ್ಯಾಯಪ್ರಕಾರ ಒಬ್ಬ ಕರ್ತನಿರಬೇಕಲ್ಲವೇ? ಆ ಕರ್ತನು ಯಾರು? ಹಾಗಲ್ಲ, ದೇವರಲ್ಲಿ ಸೃಷ್ಟಿಕರ್ತನ ಅವಶ್ಯಕತೆ ಅವಸಾನಗೊಳ್ಳುತ್ತದೆಂದು ನಿಮ್ಮ ವಾದವೆಂದಾದರೆ ಆ ಕೊನೆಗೊಳ್ಳುವಿಕೆ ಈ ಪ್ರಕೃತಿಯೊಂದಿಗೆ ಆಗಬಾರದೇ?" ಎಂಬ ಪ್ರಶ್ನೆಗೆ ನೀಡಿದ ಉತ್ತರ.

ಈ ಪ್ರಪಂಚದ ಕುರಿತು ಚಿಂತನೆ ಮಾಡುವ ಯಾವನೇ ಚಿಂತಕನೂ ಇದು ಅತೀವ ಬುದ್ಧಿಶಾಲಿಯಾದ ಒಬ್ಬನ ಶಕ್ತಿಸಾಮರ್ಥ್ಯವೆಂದು ಒಪ್ಪುವರೆ ನಿರ್ಬಂಧಿತ ನಾಗುತ್ತಾನೆ. ಈ ವಿಶ್ವದ ರಚನೆಯೂ ಅದರ ನಿಯಮ ಗಳೂ ಇದರ ಪ್ರತಿಯೊಂದು ಸಹ ಪ್ರತ್ಯೇಕ ಪ್ರತ್ಯೇಕ ಉದ್ದೇಶದಿಂದ ಪ್ರವರ್ತಿಸುತ್ತಿರುವ ರೀತಿಯೂ ಅದಕ್ಕೆ ಅವಶ್ಯವಿರುವ ಪರಿಸ್ಥಿತಿಗಳೆಲ್ಲಾ, ಇದರ ಪ್ರವರ್ತನೆ ವಿವೇಕಶಕ್ತಿ ಯಾ ಬುದ್ಧಿರಹಿತವಾದ ಪ್ರಕೃತಿಯಿಂದಲ್ಲ, ಅತೀವ ಜ್ಞಾನವೂ ಅತಿ ಸಾಮರ್ಥ್ಯವೂ ಉಳ್ಳ ಓರ್ವ ನಿಂದ ನಡೆಸಲ್ಪಡುತ್ತದೆಂದು ನಮಗೆ ತಿಳಿಸಿಕೊಡುತ್ತದೆ. ಪ್ರಕೃತಿಯೆಂದು ಹೇಳುವುದು ಅಂತಹ ಜ್ಞಾನವೂ ಸಾಮರ್ಥ್ಯವೂ ಉಳ್ಳ ಒಂದು ಶಕ್ತಿಯೆಂದಾದರೆ ಅದೇ ಆಗಿದೆ ದೈವ. ಹಾಗಲ್ಲ, ಪ್ರಕೃತಿಯೆಂಬುದು ಅಂತಹ ಬುದ್ಧಿಯಾಗಲಿ ಸಾಮರ್ಥ್ಯವಾಗಲಿ ಇಲ್ಲದ್ದು ಎಂದಾದರೆ (ಅದರ ಕುರಿತು ನಾಸ್ತಿಕರು ಹೇಳುವುದು ಹಾಗೆಯೇ ಆಗಿದೆ) ಆ ಅಂಥವಾದ ಪ್ರಕೃತಿ ಮನುಷ್ಯಾತೀತವಾದ ಬುದ್ಧಿಸಾಮರ್ಥ್ಯದ ಪ್ರಕಟನವಾದ ಈ ಪ್ರಪಂಚದ ನಿರ್ಮಾತೃ ಆಗಲಾರದು. ಇದಲ್ಲದೆ, ದೈವಾಸ್ತಿತ್ವಕ್ಕೆ ಸಾಕ್ಷ್ಯ ಈ ಪ್ರಪಂಚ ಮಾತ್ರವಲ್ಲ. ಜ್ಞಾತ ಕಾಲದಿಂದ ದೇವರ ಕುರಿತು ಅರಿಯಲಿಕ್ಕೂ ಅವನನ್ನು ಪಡೆಯು ಲಿಕ್ಕೂ ಬೇಕಾಗಿ ಅತಿಯಾಗಿ ಪರಿಶ್ರಮಿಸಿ ಉದ್ದೇಶವನ್ನು ಸಾಧಿಸಿದ ಸಾವಿರಾರು ತ್ಯಾಗಿವರ್ಯರು ಮತ್ತು ಪುಣ್ಯಾತ್ಮರುಗಳ ಅನುಭವ ಸಾಕ್ಷ್ಯಗಳೂ ಅವರ ಮುಖಾಂತರ ದೇವರು ಪ್ರಕಟಪಡಿಸಿದ ಅವನ ಗುಣಮಹಾತ್ಮೆಗಳೂ ಅದಕ್ಕೆ ಸಾಕ್ಷ್ಯಗಳಾಗಿವೆ. ಅದೇ ಪ್ರಕಾರ ಮನುಷ್ಯನ ಸ್ವಭಾವದಲ್ಲೇ ಅಂತರ್ಲೀನವಾಗಿರುವ ದೈವಪ್ರಜ್ಞೆ ಮತ್ತು ಒಳಿತು ಕೆಡುಕುಗಳ ಬಗೆಗಿನ ವಿಚಾರ ದೈವಾಸ್ತಿತ್ವಕ್ಕೆ ಸಾಕ್ಷಿಯಾಗಿದೆ. ಇವುಗಳಲ್ಲಿ ಪ್ರತಿಯೊಂದಕ್ಕೆ ಸಹ ದೀರ್ಘವಾದ ವಿವರಣೆ ಅವಶ್ಯವಿದೆ. ಅದಕ್ಕೆ ಸದ್ಯ ಅವಕಾಶವಿಲ್ಲ.

ಈ ಪ್ರಪಂಚವು ಒಂದು ಕಾರ್ಯಕಾರಣ ಬಂಧಕ್ಕೆ ವಿಧೇಯವಾಗಿ ವರ್ತಿಸುತ್ತಿದೆಂಬುದು ಸರ್ವಸಂವಿದಿತ ವಾಗಿದೆ. ಈ ಕಾರ್ಯಕಾರಣ ಬಂಧಕ್ಕೆ ಒಂದು ಆದಿ ಕಾರಣ ಇರಬೇಕಾಗಿದೆಯಲ್ಲವೇ. ಆ ಆದಿಕಾರಣವನ್ನು ನಾವು ನಿರಾಕರಿಸುವ ಪಕ್ಷದಲ್ಲಿ ಈ ಕಾರ್ಯಕಾರಣ ಬಂಧವನ್ನು ಸಂಪೂರ್ಣವಾಗಿ ನಾವು ಅಲ್ಲಗಳೆಯಬೇಕಾ ಗುವುದಲ್ಲದೆ ಈ ದೃಶ್ಯಾದೃಶ್ಯಗಳಾದ ಸರ್ವವೂ ಮಾತ್ರ ವಲ್ಲ ನಾವು ಸಹ ಇಲ್ಲವೆಂದು ಒಪ್ಪಬೇಕಾದೀತು. ಒಟ್ಟಾರೆ, ಒಂದು ಆದಿಕಾರಣ ಇದೆಯೆಂದು ಒಪ್ಪದೆ ಯಾರಿಗೂ ಗತ್ಯಂತರವಿಲ್ಲ. ಆ ಆದಿಕಾರಣ ಯಾವುದೆಂ ಬುದಾಗಿದೆ ಚಿಂತಾವಿಷಯ. ಪ್ರಪಂಚದಲ್ಲಿ ಪ್ರವರ್ತಿಸು ತ್ತಿರುವ ಆ ಅತೀವ ಬುದ್ಧಿಶಕ್ತಿಯೂ ಸಾಮರ್ಥ್ಯವೂ ಸ್ಪಷ್ಟಪಡಿಸುವುದೇನೆಂದರೆ ಸರ್ವಜ್ಞನೂ ಸರ್ವಸಮರ್ಥನೂ ಆದ ಒಬ್ಬನಾಗಿದ್ದಾನೆ ಆ ಆದಿಕಾರಣನೆಂದು. ಅದು ಅಂತಹ ಗುಣ ಯಾವುದೂ ಇಲ್ಲದ ಕೇವಲ ಪ್ರಕೃತಿ ಆಗಿರಲಿಕ್ಕಿಲ್ಲ.

ನಾವು ಜಗತ್ತಿನಲ್ಲಿ ಏನನ್ನು ಕಾಣುತ್ತೇವೆ? ಸರ್ವ ವಸ್ತುಗಳೂ ಒಂದು ಪರಿಮಿತವಾದ ಸೀಮೆಯೊಳಗೆ ವರ್ತಿಸುತ್ತವೆ. ಒಂದು ಮತ್ತೊಂದನ್ನು ಆಶ್ರಯಿಸಿರುತ್ತದೆ. ಸ್ವಯಂ ನೆಲೆಗೊಳ್ಳುವ ಸ್ಥಿತಿ ಯಾವುದಕ್ಕೂ ಇಲ್ಲ. ಪ್ರತಿಯೊಂದೂ ಮಾರ್ಪಾಟುಗೊಳ್ಳುತ್ತಲೂ ಅಳಿಯುತ್ತಲೂ ಇರುವುದನ್ನು ನಾವು ಕಾಣುತ್ತೇವೆ. ಅದರೊಂದಿಗೆ ಪ್ರತಿಯೊಂದು ಸಹ ಪ್ರತ್ಯೇಕ ಪ್ರತ್ಯೇಕ ಉದ್ದೇಶದಿಂದ ಅನ್ಯೋನ್ಯ ಸಂಘಟಿಸಿ ಪ್ರವರ್ತಿಸುವುದಾಗಿಯೂ ನಾವು ಕಾಣುತ್ತೇವೆ. ಹೀಗೆ ವಿವಿಧ ತರದ ಅಸಂಖ್ಯಾತ ವಿಭಿನ್ನ ಘಟಕಗಳು ಒಂದರೊಂದಿಗೆ ಇನ್ನೊಂದು ಘರ್ಷಿಸದೆ ಅನ್ಯೋನ್ಯ ಸಂಘಟಿಸಿ ಏಕ ಮತಿಯ ಇಚ್ಛಾನುಸಾರ ವರ್ತಿಸುವ ಒಂದು ಸಜೀವ ಯಂತ್ರದಂತೆ ಚಲಿಸುವ ಈ ಪ್ರಪಂಚವನ್ನು ನಿರ್ಮಿಸಿದ್ದು ಪ್ರಕೃತಿಯೆಂದು ಹೇಳಬಹುದೇ? ಒಂದು ಗಡಿಯಾರವನ್ನು ನೋಡಿ ಅದರ ನಿರ್ಮಾತೃ ಲೋಹವೆಂದೂ ಒಂದು ಮನೆಯನ್ನು ನೋಡಿ ಅದನ್ನು ನಿರ್ಮಿಸಿದ್ದು ಕಲ್ಲು ಮತ್ತು ಮರವೆಂದು ಹೇಳುವುದು ಸರಿಯೆನಿಸಿದರೂ ಸಹ ಈ ಪ್ರಪಂಚವನ್ನು ನಿರ್ಮಿಸಿದ್ದು ಕೇವಲ ಅಂಥವಾದ ಪ್ರಕೃತಿಯೆಂದು ಹೇಳುವುದನ್ನು ಯಾವ ಪ್ರಕಾರದಲ್ಲೂ ಸಮರ್ಥಿಸಲು ನಿರ್ವಾಹವಿಲ್ಲ.

ಸರ್ವಜ್ಞನೂ ಸರ್ವಸಮರ್ಥನೂ ಆದ ಒಬ್ಬನು ಈ ಪ್ರಪಂಚವನ್ನು ಸೃಷ್ಟಿಸಿರುವನೆಂದು ಹೇಳುವಾಗ ನಮಗೆ ನಮ್ಮ ಬುದ್ಧಿಯನ್ನೂ ವಿವೇಕವನ್ನೂ ತೊರೆಯಬೇಕಾಗಿ ಬರುವುದಿಲ್ಲ. ಬದಲು, ವಿವೇಕಶೂನ್ಯವಾದ ಪ್ರಕೃತಿಯು ಪ್ರಪಂಚದ ನಿರ್ಮಾತೃ ಎಂದು ಹೇಳುವಾಗ ನಮಗೆ ನಮ್ಮ ವಿವೇಕವನ್ನೇ ಪರಿತ್ಯಜಿಸಬೇಕಾಗುತ್ತದೆ. ಪ್ರಕೃತಿ ಎಂದರೇನು? ಪ್ರಪಂಚದ ಪ್ರವರ್ತನ ರೀತಿ ಹೊರತು ಅದು ಪ್ರತ್ಯೇಕ ವಸ್ತು ಅಲ್ಲವಷ್ಟೇ. ಆ ಸ್ಥಿತಿಯಲ್ಲಿ ಪ್ರಕೃತಿಯಾಗಿದೆ ಪ್ರಪಂಚವನ್ನು ನಿರ್ಮಿಸಿದ್ದೆಂದು ಹೇಳುವುದು ಸಾಧುವಲ್ಲ. ಪ್ರಪಂಚದ ಈ ಪ್ರವರ್ತನರೀತಿ ಅಥವಾ ಪ್ರಕೃತಿ ಒಂದೋ ಪ್ರಪಂಚಕ್ಕೆ ಮುಂಚೆ ಇರಬೇಕಾಗಿದೆ. ಹಾಗಲ್ಲವಾದರೆ ಪ್ರಪಂಚವೂ ಪ್ರಕೃತಿಯೂ ಒಂದುಗೂಡಿ ಇರಬೇಕಾಗಿದೆ. ಒಟ್ಟಾಗಿ ಅಥವಾ ನಂತರ ಉಂಟಾಗಿದ್ದರೆ ಪ್ರಕೃತಿಯು ಪ್ರಪಂಚದ ನಿರ್ಮಾತೃ ಆಗಲಾರದು. ಮುಂಚೆಯುಳ್ಳದ್ದೆಂದು ಹೇಳುವುದಾದರೆ ಅದೊಂದು ವಸ್ತುವೇ ಅಲ್ಲ. ಅದೊಂದು ಪ್ರವರ್ತನ ರೀತಿ ಅಥವಾ ಗುಣ ಮಾತ್ರವಾಗಿದೆ. ಅದು ಪ್ರಪಂಚಕ್ಕೆ ಮುಂಚೆ ಇರಲು ಅಸಾಧ್ಯ. ಅಥವಾ ಇದೆಯೆಂದಾದರೆ ಅದು ಬೇರೊಬ್ಬನ ನಿಯಂತ್ರಣಕ್ಕೆ ಒಳಗಾಗಿರಲಿಕ್ಕೇ ಸಾಧ್ಯ. ಅವನನ್ನೇ ನಾವು ದೈವವೆಂದು ಹೇಳುವುದು. ಒಟ್ಟಿನಲ್ಲಿ, ಈ ಪ್ರಪಂಚದ ಕೊನೆ ಅದರ ಪ್ರಕೃತಿಯಲ್ಲಿ ಆಗಿರಲಿಕ್ಕೆ ಸಾಧ್ಯವಿಲ್ಲ. ಪ್ರಪಂಚ ಮತ್ತು ಪ್ರಕೃತಿಯ ನಿರ್ಮಾತೃ ಆದ ಇನ್ನೊಬ್ಬನಲ್ಲೇ ಆಗಿರಲಿಕ್ಕೆ ಸಾಧ್ಯ. ಅವನನ್ನೇ ದೇವನೆಂದು ನಾವು ಹೆಸರಿಸುತ್ತೇವೆ.

ಈ ಪ್ರಪಂಚಕ್ಕೆ ಆದಿಕಾರಣನೂ ಸೃಷ್ಟಿಕರ್ತನೂ ಆಗಬೇಕಾದವನು ಸರ್ವಜ್ಞನೂ ಸರ್ವಸಮರ್ಥನೂ ಅನನ್ಯಾಶ್ರಿತನೂ ಅನಾದ್ಯಂತನೂ ನಿಸ್ತುಲ್ಯನೂ ಆದ ಏಕನಾಗಿರಬೇಕೆಂದು ಈ ಪ್ರಪಂಚ ಸರ್ವವೂ ಅದರ ಪ್ರವರ್ತನೆಯೂ ಸ್ಪಷ್ಟಪಡಿಸುತ್ತದೆ. ಒಟ್ಟಾರೆ, ಅವನ ಕುರಿತು, ಅವನನ್ನು ಸೃಷ್ಟಿಸಿದ್ದು ಯಾರೆಂಬ ಪ್ರಶ್ನೆಗೆ ಅವಕಾಶವೇ ಇಲ್ಲ. ಪ್ರಪಂಚ ಅಥವಾ ಪ್ರಪಂಚದ ವಸ್ತುಗಳ ಬಗ್ಗೆ ಹೇಳುವಾಗ ಮಾತ್ರ ಒಬ್ಬ ಸೃಷ್ಟಿಕರ್ತನ ಕುರಿತುಳ್ಳ ಪ್ರಶ್ನೆ ಉದ್ಭವಿಸುತ್ತದೆ. ಏಕೆಂದರೆ ಪ್ರಪಂಚದ ಸ್ಥಿತಿಯೇ ಅದಕ್ಕೊಬ್ಬ ನಿರ್ಮಾತೃ ಹಾಗೂ ನಿಯಾಮಕನ ಅವಶ್ಯವಿದೆಯೆಂದು ಕಲಿಸಿಕೊಡುವ ರೀತಿಯಲ್ಲಿದೆ. ಆದಕಾರಣ ಪ್ರಪಂಚದ ಪರಿಣಾಮ ಪ್ರಕೃತಿಯಲ್ಲಾಗಬಾರದೇ? ಎಂಬ ಪ್ರಶ್ನೆ ನ್ಯಾಯರಹಿತವಾಗುತ್ತದೆ. ★

"ಯುಗರಶ್ಮಿ"ಗೆ ಚಂದಾದಾರರಾಗಿರಿ

**ವಾರ್ಷಿಕ ಚಂದಾ ದರ : ಅಂಚೆ ಮೂಲಕ ರೂ. 5-00**

# ವೈದಿಕ ಧರ್ಮ ಮತ್ತು ಬಹುಪತ್ನೀತ್ವ

★ ವೇದಭೂಷಣ್ ನಾಸಿರುದ್ದೀನ್ ಅಬ್ದುಲ್ಲಾ ಎಚ್. ಎ.

ಹಿಂದೂಗಳು ಸಾಮಾನ್ಯವಾಗಿಯೂ ಆರ್ಯ ಸಮಾಜಿಗಳು ಮುಖ್ಯವಾಗಿಯೂ ಇಸ್ಲಾಂ ಧರ್ಮವನ್ನೂ ಮುಹಮ್ಮದ್ ಪೈಗಂಬರರನ್ನೂ ಬಹುಪತ್ನೀತ್ವ ಸಿದ್ಧಾಂತವನ್ನು ಆಧಾರವಾಗಿರಿಸಿ ಆಕ್ಷೇಪಿಸುತ್ತಾರೆ. ಆರ್ಯ ಸಮಾಜ ಸ್ಥಾಪಕ ಸ್ವಾಮಿ ದಯಾನಂದ ಸರಸ್ವತಿ ತನ್ನ ಕೆಲವು ಕೃತಿಗಳಲ್ಲಿ ಇದೇ ಕಾರಣವನ್ನು ಆಸ್ಪದ ಮಾಡಿಕೊಂಡು ಕರ್ಕಶವಾದ ರೀತಿಯಲ್ಲಿ ಪೈಗಂಬರರನ್ನು ಆಕ್ಷೇಪಿಸಿದ್ದಾರೆ. ಮಾತ್ರವಲ್ಲ, ಬಹುಪತ್ನೀತ್ವದ ಅನುಮತಿ ನೀಡಿ ಇಸ್ಲಾಂ ಸ್ತ್ರೀ ವರ್ಗಕ್ಕೆ ಬಹು ಅನ್ಯಾಯವೆಸಗಿ ಅವರ ಹಕ್ಕುಗಳ ಧ್ವಂಸ ಮಾಡಿದೆಯೆಂದು ರುಜುಪಡಿಸಲು ಕೆಲವು ಹಿಂದೂ ಲೇಖಕರು ಶ್ರಮಿಸುವುದನ್ನೂ ಕೆಲವೊಮ್ಮೆ ಕಾಣಬಹುದು. ಹೀಗಿರುವಾಗ, ಹಿಂದೂಧರ್ಮ ಪ್ರಕಾರ ಬಹುಪತ್ನೀತ್ವ ಸಾಧುವೋ ಎಂದು ಪರಿಶೋಧಿಸಿ ನೋಡುವುದು ಉಚಿತವೆಂದು ಭಾವಿಸುತ್ತೇನೆ. ಹಿಂದೂ ಧರ್ಮ ಸಹ ಅದಕ್ಕೆ ಅನುಮತಿ ನೀಡುವುದಾದರೆ ಅದರ ಅನುಯಾಯಿಗಳು ಇದೇ ಸಂಗತಿಯನ್ನು ಆಧಾರವಾಗಿಟ್ಟು ಇಸ್ಲಾಂ ಧರ್ಮವನ್ನಾಗಲಿ ಇತರ ಯಾವ ಧರ್ಮವನ್ನಾಗಲಿ ಆಕ್ಷೇಪಿಸಬಾರದಲ್ಲವೇ.

'ಶ್ರುತಿ' ಮತ್ತು 'ಸ್ಮೃತಿ' ಎಂಬ ಎರಡು ತರದ ಪ್ರಮಾಣಗಳ ಮೇಲೆ ವೈದಿಕಧರ್ಮ ಅಥವಾ ಹಿಂದೂ ಧರ್ಮ ಪ್ರತಿಷ್ಠಾಪಿತವಾಗಿದೆ. ಪ್ರಾಮಾಣ್ಯಕ್ರಮ ಪ್ರಕಾರ 'ಶ್ರುತಿ' ಅಥವಾ 'ವೇದ ಸಂಹಿತೆ' ಬಿಟ್ಟರೆ ಆಧಾರಯೋಗ್ಯವಾದುದು 'ಸ್ಮೃತಿ' ಎಂದು ಕರೆಯಲ್ಪಡುವ ಧರ್ಮಶಾಸ್ತ್ರವಾಗಿದೆ. ಹಿಂದೂಗಳ ಆಚಾರ ಕರ್ಮಾನುಷ್ಠಾನ ಸಂಪ್ರದಾಯಗಳನ್ನು ಕ್ರಮೀಕರಿಸುವ ನಿಯಮಗಳನ್ನೊಳಗೊಂಡ ಧರ್ಮಶಾಸ್ತ್ರಗಳು ಅನೇಕವಿದ್ದರೂ ಎಲ್ಲಕ್ಕಿಂತಲೂ ಪ್ರಧಾನವೂ ಪ್ರಾಮಾಣ್ಯವೂ ಆಗಿ ಪರಿಗಣಿಸಲ್ಪಡುವುದು ಮನುವಿನ ಧರ್ಮಶಾಸ್ತ್ರವಾಗಿದೆ. ಮನುಸ್ಮೃತಿಯ ವಿಧಿಕಟ್ಟಳೆಗಳನ್ನು ಶ್ರೀ ದಯಾನಂದ ಸ್ವಾಮಿ ಸಹ ತನ್ನ ಕೃತಿಗಳಲ್ಲಿ ಹಲವೆಡೆ ಪ್ರಮಾಣಗಳಾಗಿ ಉದ್ಧರಿಸಿದ್ದಾರೆ. ವಾರಣಾಸಿಯಲ್ಲಿ ನಡೆದ ಶಾಸ್ತ್ರಾರ್ಥ ವಾದದಲ್ಲಿ ಸ್ವಾಮಿಜಿ ಅದರ ಪ್ರಾಮಾಣ್ಯ ನೆಲೆಯನ್ನು ಒಪ್ಪಿಕೊಂಡಿದ್ದಾರೆ. ಅದರಲ್ಲಿ ವೈದಿಕ ಧರ್ಮಪ್ರಕಾರವುಳ್ಳ ರಾಜಕೀಯ ಸಿದ್ಧಾಂತಗಳೂ ಧರ್ಮ ನಿಯಮಗಳೂ ವಿವರಿಸಲ್ಪಟ್ಟಿವೆ. ಹಿಂದೂಗಳಿಗೆ ಇಷ್ಟರ ಮಟ್ಟಿಗೆ ಪ್ರಾಧಾನ್ಯವುಳ್ಳ ಈ ಮನುಸ್ಮೃತಿ, ಒಬ್ಬಳು ಪತ್ನಿಯಿರುವಾಗ ಇನ್ನೊಂದು ವಿವಾಹ ಸಹ ಮಾಡಬಹುದೆಂಬ 'ಅಧಿವೇದನ'ದ ಕುರಿತು ಈ ರೀತಿ ಹೇಳಿದೆ:

> ಮದ್ಯಪಾಽ ಸಾಧುವೃತ್ತಾ ಚ ಪ್ರತಿಕೂಲಾ ಚ ಯಾ ಭವೇತ್ ।
> ವ್ಯಾಧಿತಾ ವಾಽಧಿವೇತ್ತವ್ಯಾ ಹಿಂಸ್ರಾರ್ಥಘ್ನೀ ಚ ಸರ್ವದಾ ॥

ಎಂದರೆ, ಹೆಂಡತಿಯು ಮದ್ಯಪಾನಿ, ದುಃಶೀಲೆ, ವಿರುದ್ಧ ವರ್ತನೆಯ, ರೋಗವುಳ್ಳ, ಸೇವಕರನ್ನು ಪೀಡಿಸುವವಳು ಆಗಿದ್ದರೆ ಬೇರೆ ಮದುವೆಯಾಗಬಹುದು. (ಅಧ್ಯಾಯ 9, ಶ್ಲೋಕ 80) ಪುನಃ

> ವಂಧ್ಯಾಷ್ಟಮೇಽಧಿವೇದ್ಯಾಬ್ದೇ ದಶಮೇ ತು ಮೃತಪ್ರಜಾ ।
> ಏಕಾದಶೇ ಸ್ತ್ರೀಜನನೀ ಸದ್ಯಸ್ತ್ವ ಪ್ರಿಯವಾದಿನೀ ॥

ಎಂದರೆ, ಗರ್ಭಿಣಿಯಾಗದವಳನ್ನು ಎಂಟುವರ್ಷ, ಹುಟ್ಟಿ ಸಾಯುವ ಮಕ್ಕಳನ್ನು ಹೆರುವವಳನ್ನು ಹತ್ತುವರ್ಷ, ಹೆಣ್ಣು ಹೆರುವವಳನ್ನು ಹನ್ನೊಂದು ವರ್ಷಗಳ ವರೆಗೆ ಕಾದು ಮತ್ತೆ ಬೇರೆ ಮದುವೆಯಾಗಬೇಕು. ವಿರುದ್ಧ ಮಾತಾಡುವ ಪರುಷ ವಚನದವಳನ್ನು ಕೂಡಲೇ ಬಿಡಬೇಕು. (ಅಧ್ಯಾಯ 9, ಶ್ಲೋಕ 81)

ಈ ಶ್ಲೋಕಗಳಿಂದ. ಒಬ್ಬನು ಒಂದೇ ಕಾಲದಲ್ಲಿ ಒಬ್ಬಳಿಗಿಂತ ಹೆಚ್ಚು ಮಡದಿಯರನ್ನು ವರಿಸಿಕೊಳ್ಳ ಬಹುದೆಂದು ತಿಳಿದುಬರುತ್ತದೆ. ಇದನ್ನೇ ಅಲ್ಲವೇ ಬಹು ಪತ್ನೀತ್ವವೆಂದು ಹೆಸರಿಸುವುದು.

ಈ ಧಾರ್ಮಿಕ ನಿಯಮವನ್ನು ಹೈಂದವ ಮತ ನೇತಾರರಾದ ಗುರುವರ್ಯರುಗಳು ಎಷ್ಟರಮಟ್ಟಿಗೆ ಪ್ರಯೋಗದಲ್ಲಿ ತಂದಿದ್ದಾರೆಂದು ನೋಡುವುದಾದರೆ, ಅವರು ಈ ಧರ್ಮಶಾಸ್ತ್ರ ವಿಧಿಗಳನ್ನು ನಿಷ್ಕರ್ಷೆಯಿಂದ ಆಚರಿಸಿರುವುದಾಗಿ ಕಾಣಬಹುದು. ಮಾತ್ರವಲ್ಲ, ಮೇಲೆ ಹೇಳಿದಂತಹ ಅಸೌಕರ್ಯಗಳೂ ಪ್ರತಿಕೂಲತೆಗಳೂ ಉಂಟಾಗದೆ ಇದ್ದೂ ಮಹಾತ್ಮರುಗಳಾದ ಆಚಾರ್ಯರು ಗಳೂ ಧರ್ಮ ನಾಯಕರುಗಳೂ ಒಂದೇ ಕಾಲದಲ್ಲಿ ಒಬ್ಬಳಿಗಿಂತ ಹೆಚ್ಚು ಮಡದಿಯರನ್ನು ವರಿಸಿ ಪ್ರಸ್ತುತ ನಿಯಮವನ್ನು ಮತ್ತೂ ವಿಸ್ತೃತಗೊಳಿಸಿರುವರು.

ಈ ವಿಚಾರದಲ್ಲಿ ಪ್ರಥಮವಾಗಿ ಮಹಾತ್ಮ ಶ್ರೀಕೃಷ್ಣರ ಜೀವನವನ್ನು ನಾನು ದೃಷ್ಟಾಂತವಾಗಿ ತೆಗೆಯುತ್ತೇನೆ. ಅವರನ್ನು ವೈದಿಕ ಮತಸ್ಥರಾದ ಹಿಂದೂ ಸಹೋದರರು ಮಹಾತ್ಮರುಗಳಾದ ಋಷಿಗಳ ಪೈಕಿ ಓರ್ವನೆಂದು ಮಾತ್ರವಲ್ಲ, ಒಬ್ಬ ಅವತಾರ ಪುರುಷ ನೆಂದು ಸಹ ನಂಬಿ ಆದರಿಸುತ್ತಾರೆ. ಅವರ ವಿವಾಹಗಳ ಕುರಿತು ಶ್ರೀಮದ್ಭಾಗವತದಲ್ಲಿ ವಿವರಿಸಲಾಗಿದೆ. ಆ ಕಾಲದ ಆಚಾರವನ್ನನುಸರಿಸಿ ಆ ಮಹಾಪುರುಷ ಕ್ರಮೇಣ ಎಂಟು ಮಂದಿಯನ್ನು ಪತ್ನಿಯರನ್ನಾಗಿ ವರಿಸಿದುದಾಗಿ ಪ್ರಸ್ತಾಪಿಸಲಾಗಿದೆ. ಅವರ ಹೆಸರುಗಳು : ರುಕ್ಮಿಣಿ, ಸತ್ಯ, ಜಾಂಬವತಿ, ಸತ್ಯಭಾಮ, ಕಾಳಿಂದಿ, ಲಕ್ಷಣ, ಮಿತ್ರವಿಂದಾ ಮತ್ತು ಭದ್ರ. (ಭಾಗವತ, ಸ್ಕಂದ 10, ಅಧ್ಯಾಯ 61)

ಈ ಮಹಿಳಾಮಣಿಗಳನ್ನು ಶ್ರೀಕೃಷ್ಣ ಹೇಗೆ ವರಿಸಿ ದರೆಂಬುದರ ಕುರಿತು ಸಹ ಆ ಗ್ರಂಥದಲ್ಲಿ ಪ್ರತಿಪಾದಿಸ ಲಾಗಿದೆ. ಪಂಚಪಾಂಡವರ ಏಕಪತ್ನಿಯಾದ ದ್ರೌಪದಿ ಒಂದು ದಿನ ಕೃಷ್ಣಪತ್ನಿಯರೊಡನೆ, ಅವರನ್ನು ಶ್ರೀಕೃಷ್ಣ ಪತ್ನಿಯರನ್ನಾಗಿ ವರಿಸಿದ್ದು ಹೇಗೆಂದು ವಿವರಿ ಸುವರೆ ಕೋರಿದಳು. ಆಗ ಅವರಲ್ಲಿ ಪ್ರತಿಯೊಬ್ಬರೂ ತಂತಮ್ಮ ಕಥೆಗಳನ್ನು ದ್ರೌಪದಿಗೆ ಹೇಳಿದರು. (ಭಾಗವತ, ಸ್ಕ. 10, ಅ. 53, ಶ್ಲೋಕ 15)

ಮಿತ್ರವಿಂದಾ ತನ್ನ ವಿವಾಹ ಸಂಭವದ ಕುರಿತು ಹೇಳಿದ್ದು ಹೀಗೆ: "ಓ ದ್ರೌಪದಿ, ನನ್ನ ಚಿತ್ತ ಶ್ರೀಕೃಷ್ಣ ನಲ್ಲಿ ಅನುರಕ್ತವಾಗಿರುವುದೆಂದು ತಿಳಿದು ನನ್ನ ತಂದೆಯೇ ನನ್ನ ಮಾತುಲ ಪುತ್ರನಾದ ಶ್ರೀಕೃಷ್ಣ ಚಂದ್ರನನ್ನು ಕರೆದು ಆತನಿಗೆ ನನ್ನನ್ನು ಸಾಮೋದ ಮದುವೆಮಾಡಿ ಕೊಟ್ಟನು." ಈ ಮಿತ್ರವಿಂದಾಳ ಕುರಿತು 10ನೇ ಸ್ಕಂಧ 53ನೇ ಅಧ್ಯಾಯ, 30ನೇ ಶ್ಲೋಕದಲ್ಲಿ ಹೇಳಲಾ ದುದು "ಮಿತ್ರವಿಂದಾ ಶ್ರೀಕೃಷ್ಣನ ಪಿತೃಸಹೋದರಿಯ ಪುತ್ರಿ" ಎಂದಾಗಿದೆ.

ಭದ್ರಾರಾಣಿಯ ಕುರಿತು 10ನೇ ಸ್ಕ. 58ನೇ ಅ. 56ನೇ ಶ್ಲೋಕದಲ್ಲಿ ಬರೆದುದನ್ನು ನೋಡಿರಿ: "ಆ ವಿವಾಹದ (ಸತ್ಯದೇವಿಯೊಂದಿಗಿನ ವಿವಾಹ) ಬಳಿಕ ಶ್ರೀಕೃಷ್ಣನು ತನ್ನ ಪಿತೃಸಹೋದರಿಯಾದ ಶ್ರುತ ಕೀರ್ತಿಯ ಮಗಳು ಭದ್ರಳನ್ನು ವಿವಾಹವಾದನು". ಇದೇ ಪ್ರಕಾರ, ಇತರ ಪತ್ನಿಯರು ಸಹ ತಮ್ಮ ವಿವಾಹ ವೃತ್ತಾಂತವನ್ನು ದ್ರೌಪದಿಯೊಡನೆ ಹೇಳಿದರು.

ಮೇಲಿನ ಉದ್ಧರಣೆಗಳಿಂದ, ಹಿಂದೂಗಳ ಮಾರ್ಗದರ್ಶಕರಾದ ಮಹಾತ್ಮರುಗಳ ಮಧ್ಯೆ ಬಹು ಪತ್ನೀತ್ವ ವಾಡಿಕೆಯಲ್ಲಿತ್ತೆಂದು ಸುವ್ಯಕ್ತವಾಗುತ್ತದೆ. ಮಾತ್ರವಲ್ಲ, ಶ್ರೀಕೃಷ್ಣರ ಪ್ರಸ್ತುತ ವಿವಾಹ ಕ್ರಮದಿಂದ ಹೈಂದವಾಚಾರ ಪ್ರಕಾರ ನಿಕಟ ಬಂಧುಗಳು ತಮ್ಮೊಳಗೆ ವಿವಾಹವಾಗಬಹುದೆಂದು ಸ್ಪಷ್ಟವಾಗುತ್ತದೆ. ಇಂತಹ ವಿವಾಹವನ್ನು ಇಂದು ಹಿಂದೂಗಳು ಸಾಮಾನ್ಯ ವಾಗಿಯೂ ಆರ್ಯಸಮಾಜದವರು ಮುಖ್ಯವಾಗಿಯೂ ದ್ವೇಷಿಸುತ್ತಾರೆ. ಈ ರೀತಿಯ ವಿವಾಹಕ್ಕೆ ವಿರುದ್ಧವಾಗಿ ದಯಾನಂದ ಸ್ವಾಮೀಜಿ ಕೆಲವು ಬಲಹೀನ ನ್ಯಾಯಗ ಳನ್ನು ಹೊರಡಿಸಿರುವುದು ಇಲ್ಲಿ ಪ್ರಸ್ತಾವನೀಯ.

ಪುರಾತನ ಹಿಂದೂಗಳು ಮತ್ತು ಅವರ ಆಚಾರ್ಯ ರುಗಳ ಮಧ್ಯೆ ಬಹುಪತ್ನೀತ್ವ ವಾಡಿಕೆಯಲ್ಲಿತ್ತೆಂಬುದಕ್ಕೆ ಬೇರೆ ಉದಾಹರಣೆಗಳನ್ನು ಸಹ ಕಾಣಬಹುದು. ಮಹರ್ಷಿ ಯಾಜ್ಞವಲ್ಕ್ಯನಿಗೆ ಮೈತ್ರೇಯಿ ಮತ್ತು

# ಯೇಸುಕ್ರಿಸ್ತ ಭಾರತಕ್ಕೆ ಬಂದಿದ್ದ!*

— ಪಿ. ವಿಜಯ

**ಯೇ**ಸುಕ್ರಿಸ್ತನು ಭಾರತಕ್ಕೆ ಬಂದಿದ್ದನೆಂಬುದಕ್ಕೆ ಅನೇಕ ಸಾಕ್ಷ್ಯಾಧಾರಗಳು ದೊರೆಯತೊಡಗಿವೆ. ಕ್ರಿಸ್ತನು ಎರಡು ಸಲ ಭಾರತಕ್ಕೆ ಆಗಮಿಸಿದ್ದ ಹಾಗೂ ಕೊನೆಯ ಸಲ ಇಲ್ಲಿಯೇ ಉಳಿದು ತನ್ನ ನೂರಿಪ್ಪತ್ತನೆಯ ವಯಸ್ಸಿನಲ್ಲಿ ಇಹಲೀಲೆಯನ್ನೂ ಪೂರೈಸಿದ. ಕಾಶ್ಮೀರದಲ್ಲಿ ಶ್ರೀನಗರಕ್ಕೆ ಸಮೀಪವಿರುವ ಖನ್ಯಾರದ ರೋಜಾಬಲದಲ್ಲಿ ಕ್ರಿಸ್ತನ ಸಮಾಧಿಯಿದೆ. ಜೆರೋಸಲೇಮದಲ್ಲಿಯ ಸಮಾಧಿಯು ಖಾಲಿ. ಆದರಲ್ಲಿ ಏನಿಲ್ಲ. ಈ ವಿಷಯವನ್ನು ಪರೀಕ್ಷಿಸಲೆಂದು ೧೯೮೨ರಲ್ಲಿ ಇಸ್ರೇಲದಿಂದ ಇತಿಹಾಸಜ್ಞರು ವಿದ್ವಾಂಸರ ತಂಡವೊಂದು ಭಾರತಕ್ಕೆ ಬಂದಿತ್ತು. ಅಲ್ಲದೆ ರೋಜಾಬಲದಲ್ಲಿ ತನಿಖೆಯನ್ನೂ ಮಾಡಿತು. ಅವರ ನಿರ್ಣಯದಲ್ಲಿ ಒಮ್ಮತವಿರಲಿಲ್ಲ. ಆದರೆ ಯಾರೂ ಕ್ರಿಸ್ತನು ಅಲ್ಲಿ ಸಮಾಧಿಹೊಂದಿರಬಹುದೆಂಬ ಸಾಧ್ಯತೆಯನ್ನೂ ಅಲ್ಲಗಳೆಯಲಿಲ್ಲ. ಕೆಲವು ವರುಷಗಳ ಹಿಂದೆ ಲಂಡನ್ನಿನಲ್ಲಿ ನಡೆದ ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಕ್ರಿಸ್ತನು ಮರಣ ದಂಡನೆ ತಪ್ಪಿಸಿಕೊಂಡು ೧೨೦ ವರುಷಗಳ ವರೆಗೆ ಕಾಶ್ಮೀರದಲ್ಲಿ ಕಾಲಕಳೆದನು ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟರು.

ಜರ್ಮನಿಯ ವಿದ್ವಾಂಸ ಫೈಬರ್ ಕೈಸರ್‌ನು "ಯೇಸು ಕಾಶ್ಮೀರದಲ್ಲಿ ಮರಣಹೊಂದಿದ" ನೆಂಬ ತನ್ನ ಪುಸ್ತಕದಲ್ಲಿ ಹೀಗೆ ಬರೆದಿದ್ದಾನೆ: ಕ್ರಿಸ್ತನು ಶಿಲುಬೆಯ ಮೇಲೆ ನಿಧನ ಹೊಂದಲಿಲ್ಲ. ತನ್ನ ಗಾಯಗಳು ಮಾಯ್ದ ಮೇಲೆ ಆತನು ತನ್ನ ತಾಯಿ ಮತ್ತು ಮುಖ್ಯ ಶಿಷ್ಯನಾದ ಥಾಮಸ್‌ನೊಂದಿಗೆ ಪ್ಯಾಲೆಸ್ಟೈನ್‌ದ ಉತ್ತರಕ್ಕೆ ಪಯಣ ಬೆಳೆಸಿದ. ಮೇರಿಗೆ ದೀರ್ಘ ಪ್ರವಾಸದ ದಣಿವನ್ನು ತಡೆದುಕೊಳ್ಳುವದಾಗಲಿಲ್ಲ. ಸದ್ಯದ ಭಾರತ ಪಾಕಿಸ್ತಾನಗಳ ಗಡಿಯಲ್ಲಿ ಆಕೆ ಕೊನೆಯುಸಿರೆಳೆದಳು. ಮೇರಿಯ ಸಮಾಧಿಯನ್ನೂ ಕಾಶ್ಮೀರದ ಸಮೀಪದಲ್ಲಿ ನೋಡಬಹುದು. ಅವಳು ಮಡಿದ ದಿನವನ್ನೂ ವರುಷಕ್ಕೊಮ್ಮೆ ಅಲ್ಲಿಯ ಜನ ನೆನಪಿಸಿಕೊಂಡು ಆಕೆಯ ಸಮಾಧಿಯ ಮೇಲೆ ಹೂಗಳನ್ನೇರಿಸುತ್ತಾರೆ. ಥಾಮಸ್‌ನು ಕ್ರಿಸ್ತನ ಸಂದೇಶ ಬೀರಲು ದಕ್ಷಿಣಕ್ಕೆ ಹೊರಟ. ಕ್ರಿಸ್ತನು ಕಾಶ್ಮೀರದಲ್ಲಿಯೇ ಇರತೊಡಗಿದ. ಇಲ್ಲಿರುವಾಗ ಆತನಿಗೆ ಮದುವೆ ಹಾಗೂ ಮಕ್ಕಳಾದವು. ಶ್ರೀನಗರದ ನಿವಾಸಿ ಸಾಹಿಬರಖಾದಾ ಬಶಾರತ ಸಲೀಮ ಕವಿ ಹಾಗೂ ಖ್ಯಾತ ವೈದ್ಯರು ತಾವು ಕ್ರಿಸ್ತನ ವಂಶಜರೆಂದು ಹೇಳಿಕೊಳ್ಳುತ್ತಾರೆ.

---

* ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ 22–12–85

---

ಕಾತ್ಯಾಯಿನಿ ಎಂಬ ಇಬ್ಬರು ಮಡದಿಯರಿದ್ದರೆಂದು ಶತಪಥ ಬ್ರಾಹ್ಮಣ 146ನೇ ಕಾಂಡದಲ್ಲಿ ಹೇಳಲಾಗಿದೆ. ಶ್ರೀರಾಮಚಂದ್ರರ ತಂದೆ ದಶರಥ ರಾಜನಿಗೆ ಕೌಸಲ್ಯ, ಸುಮಿತ್ರ, ಕೈಕೇಯಿ ಎಂಬ ಮೂವರು ಪತ್ನಿಯರಿದ್ದರೆಂಬುದು ಸುವಿದಿತ.

ಈ ಪ್ರಕಾರದಲ್ಲಿ ಹಿಂದೂ ಶಾಸ್ತ್ರಗಳು ಮತ್ತು ಆಚಾರ್ಯರುಗಳ ಅನುಷ್ಠಾನಗಳಿಂದ ಬಹುಪತ್ನೀತ್ವ ಸಮ್ಮತನೀಯವೂ ಆದರಣೀಯವೂ ಎಂದು ಸಾಬೀತಾಗುವ ಸ್ಥಿತಿಯಲ್ಲಿ, ಈ ಕಾಲದ ವೈದಿಕ ಧರ್ಮಿಯರು, ಮುಖ್ಯವಾಗಿ ಆರ್ಯಸಮಾಜಿಗಳು, ಬಹುಪತ್ನೀತ್ವವನ್ನು ಆಧಾರವಾಗಿಟ್ಟು ಇಸ್ಲಾಮನ್ನಾಗಲಿ ಮುಹಮ್ಮದ್ ಪೈಗಂಬರರನ್ನಾಗಲಿ ಟೀಕಿಸುವುದು ಹೇಗೆ ನ್ಯಾಯವಾಗುತ್ತದೆ?

ಇದಕ್ಕಿಂತ ಮೊದಲು ರಶಿಯದ ಇತಿಹಾಸಜ್ಞ ನಿಕೊಲಾಯ್ ನೊಟೋವಿಚ್ ಅವರು ೧೮೮೭ರಲ್ಲಿ ಭಾರತಕ್ಕೆ ಬಂದಿದ್ದರು. ಅವರು ಬರೆದ "ಯೇಸು ಕ್ರಿಸ್ತನ ಅಜ್ಞಾತ ಜೀವನ"ದಲ್ಲಿ ಅವರು ಇದೇ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಲಡಾಕ ಮತ್ತು ಲೇಹಗಳಿಂದ ೨೪ ಮೈಲು ದೂರದಲ್ಲಿ ಹಿಮಾಲಯದಲ್ಲಿರುವ ಗವಿಗಳಲ್ಲಿ ಕಂಡುಬಂದ ವಸ್ತುಗಳೇ ಅವರ ಅಭಿಪ್ರಾಯಕ್ಕೆ ಆಧಾರ. ಲೇಹದಲ್ಲಿಯ ಸನ್ಯಾಸಿ ಮಠದಲ್ಲಿಯ ಲಿಖಿತ ದಾಖಲೆಯೊಂದರಲ್ಲಿ ಕ್ರಿಸ್ತನು ತನ್ನ ಯೌವನದಲ್ಲಿ ಭಾರತಕ್ಕೆ ಬಂದಿದ್ದನೆಂದೂ ಬೌದ್ಧಧರ್ಮವನ್ನು ಅಭ್ಯಸಿಸಿದನೆಂದೂ ಬರೆಯಲಾಗಿದೆ. ರಮೇಶ ಚಂದ್ರ ದತ್ತರು ತಮ್ಮ ಗ್ರಂಥ 'ಪ್ರಾಚೀನ ಭಾರತದ ಇತಿಹಾಸ ಮತ್ತು ಸಂಸ್ಕೃತಿ'ಯ ಇಪ್ಪತ್ತನೆಯ ಪ್ರಕರಣವನ್ನು ಈ ವಿಷಯಕ್ಕಾಗಿಯೇ ಮೀಸಲಾಗಿರಿಸಿದ್ದಾರೆ. ಪಾಶ್ಚಿಮಾತ್ಯ, ಇತಿಹಾಸಜ್ಞ ಆರ್ಥರ್‌ಲಿಲ್ ತನ್ನ ಪುಸ್ತಕದಲ್ಲಿ ಈ ಅಭಿಪ್ರಾಯವನ್ನು ಸಮರ್ಥಿಸಿದ್ದಾನೆ.

ಕ್ರಿಸ್ತನು ಐತಿಹಾಸಿಕ ದಾಖಲೆಗಳ ಮೇರೆಗೆ ಇಸ್ರೇಲದಲ್ಲಿ ಹುಟ್ಟಿದನೆಂದು ತಿಳಿಯುತ್ತದೆ. ಅವನ ತಂದೆ ತಾಯಿಗಳು ಬಡವರಾಗಿದ್ದರು. ಅವರ ಮಗ ಯೇಸುವಿಗೆ ಹದಿಮೂರು ವರುಷವಾದಾಗ ಅವನಿಗೆ ಲಗ್ನವಾಗಬೇಕಿತ್ತು. ಆ ಸಂಪ್ರದಾಯವು ಇಸ್ರೇಲದಲ್ಲಿತ್ತು. ಆದರೆ ಯೇಸು ಓಡಿ ಭಾರತಕ್ಕೆ ಬಂದ. ಜೆರೋಸಲೇಮದಿಂದ ಸಿಂಧಕ್ಕೆ ಹಾಗೂ ಅಲ್ಲಿಂದ ಪಂಜಾಬಕ್ಕೆ ಆತನು ಆಗಮಿಸಿದ್ದನು ಎಂದು ರಶಿಯದ ಇತಿಹಾಸಜ್ಞ ನಿಕೊಲಾಯ್ ನೊಟೋವಿಚ್ ಅಭಿಪ್ರಾಯಪಟ್ಟಿದ್ದಾರೆ.

ಇಲ್ಲೊಂದು ಗಮನಾರ್ಹ ವಿಷಯವಿದೆ. ಬೈಬಲ್‌ನಲ್ಲಿ ಹಾಗೂ ಕ್ರಿಸ್ತನ ಚರಿತ್ರೆಗಳಲ್ಲಿ ಅವನ ೧೩ರಿಂದ ೨೯ ವರುಷಗಳೊಳಗಿನ ಜೀವನದ ಬಗ್ಗೆ ಏನೂ ಹೇಳಿಲ್ಲ. ಈ ಅವಧಿಯಲ್ಲಿ ಕ್ರಿಸ್ತನು ಭಾರತದಲ್ಲಿ ಇದ್ದನೆಂಬುದು ತಿಳಿದಾಗಲೇ ಈ ತಪ್ಪಿದ ಕೊಂಡಿಯ ಸುಳಿವು ಸಿಕ್ಕಂತೆ. ಕ್ರಿಸ್ತನು ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಪಂಜಾಬನ್ನು ಬಿಟ್ಟು ಜಗನ್ನಾಥಪುರಿಗೆ ಬಂದನು. ಅವನು ಸಂದರ್ಶಿಸಿದ ದೇವಮಂದಿರದಲ್ಲಿ ವ್ಯಾಸ ಹಾಗೂ ಕೃಷ್ಣರ ಗ್ರಂಥಗಳನ್ನು ಇರಿಸಿದ್ದರು. ಅಲ್ಲಿ ಬ್ರಾಹ್ಮಣ ಗುರುಗಳಲ್ಲಿ ಆತನು ವೇದ ಉಪನಿಷತ್ತುಗಳನ್ನು ಅಭ್ಯಸಿಸಿದನು. ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ೬ ವರುಷ ವಾರಣಾಸಿ, ರಾಜಗೃಹ ಮೊದಲಾದೆಡೆ ಪ್ರವಾಸ ಮಾಡಿದನು. ಆಗ ಅವನಿಗೆ ಅನೇಕ ಜನ ಶೂದ್ರ ಶಿಷ್ಯರು ದೊರೆತರು. ಅವರಿಗೆ ವೇದ ಉಪನಿಷತ್ತುಗಳನ್ನು ಉಪದೇಶಿಸತೊಡಗಿದ. ಇದರಿಂದ ಬ್ರಾಹ್ಮಣರು ಸಿಟ್ಟಿಗೆದ್ದರು. ಬ್ರಾಹ್ಮಣರ ವಿರೋಧದಿಂದಾಗಿ ಕ್ರಿಸ್ತನು ನೇಪಾಳಕ್ಕೆ ತೆರಳಿದ. ಅಲ್ಲಿ ಆತನು ಪಾಲಿಭಾಷೆಯನ್ನೂ ಬೌದ್ಧ ತತ್ತ್ವಗಳನ್ನೂ ಆರು ವರ್ಷ ಅಭ್ಯಸಿಸಿದ. ಅನಂತರ ಆತನು ಭಾರತದಿಂದ ಹೊರ ಹೊರಟು ಇರಾಣಕ್ಕೆ ನಡೆದನು. ಅಲ್ಲಿಯ ಧರ್ಮಾಂಧರು ಅವನಿಗೆ ಧರ್ಮ ಪ್ರಚಾರಕ್ಕೆ ಅವಕಾಶ ಕೊಡಲಿಲ್ಲ. ಕ್ರಿಸ್ತನು ಆಗ ಲೆಬನಾನಕ್ಕೆ ಪಯಣಿಸಿದ. ಅನಂತರದ ಅವನ ಜೀವನವನ್ನು ಬೈಬಲ್ಲಿನಲ್ಲಿ ಕೊಟ್ಟಿದೆ.

ಬೈಬಲ್ಲಿನಲ್ಲಿ ಕ್ರಿಸ್ತನು ಶಿಲುಬೆಯ ಮೇಲೆ ಮರಣ ಹೊಂದಿದನೆಂದು ಕೊಟ್ಟುದು ಸರಿಯಲ್ಲ. ಶಿಲುಬೆಯಿಂದ ಇಳಿಸಿದ ನಂತರ ಅವನ ದೇಹವನ್ನು ಗವಿಯಲ್ಲಿಟ್ಟಿದ್ದರು. ಆಗ ಆತನು ಮರಣ ಹೊಂದಿರಲಿಲ್ಲ. ಆದುದರಿಂದ ಉಪಚಾರದ ನಂತರ ಥಾಮಸ್ ಹಾಗೂ ಮೇರಿಯ ಸಹಾಯದೊಂದಿಗೆ ಗವಿಯಿಂದ ಹೊರಬಂದ. ಈ ಸಂದರ್ಭದಲ್ಲಿ ೧೩ ಅಡಿ ಉದ್ದ ಮತ್ತು ೨೨ ಅಡಿ ಅಗಲದ ಬಟ್ಟೆಯು ಮಹತ್ವದ್ದಾಗಿದೆ. ಕ್ರಿಸ್ತನನ್ನು ಶಿಲುಬೆಯಿಂದ ಕೆಳಗಿಳಿಸಿದ ಮೇಲೆ ಈ ಬಟ್ಟೆಯನ್ನು ಅವನಿಗೆ ಸುತ್ತಿದ್ದರು. ಅದನ್ನೀಗ ಇಟಲಿಯ ಟುರಿನ್‌ನಲ್ಲಿ ಕಾಯ್ದಿಡಲಾಗಿದೆ. ಕ್ರಿಸ್ತನನ್ನು ಈ ಬಟ್ಟೆಯಲ್ಲಿ ಸುತ್ತಿದ್ದಾಗ ಆತನು ಮರಣ ಹೊಂದಿರಲಿಲ್ಲವೆಂದು ಆಧುನಿಕ ವೈಜ್ಞಾನಿಕ ತಂತ್ರಗಳಿಂದ ಸಿದ್ಧವಾಗಿದೆ. ಗುಹೆಯಿಂದ ಹೊರಬಂದ ಕ್ರಿಸ್ತನು ತನ್ನ ತಂದೆತಾಯಿಗಳೊಂದಿಗೆ ಬೇರೆ ಜನಾಂಗದವರನ್ನು ಹುಡುಕುತ್ತ ಇಸ್ರೇಲದಾಚೆ ನಡೆದ. ಆ ಶಿಷ್ಯರನ್ನು ಹುಡುಕುತ್ತ ಅವರು ಭಾರತವನ್ನು ತಲುಪಿದರು. ಕ್ರಿಸ್ತನು ತನ್ನ ಕೊನೆಗಾಲದವರೆಗೆ ಕಾಶ್ಮೀರದಲ್ಲಿದ್ದ. ಅವನು ಮರಣ ಹೊಂದಿದ ನಂತರ ಆತನನ್ನು ರೋಜಾಬಲದ ಮಕಬರಾದಲ್ಲಿ

ಸಮಾಧಿಗೊಳಿಸಿದರು. ಇಂದಿಗೂ ದೂರ ದೂರದಿಂದ ಜನರು ಇಲ್ಲಿಗೆ ಗೌರವ ಸಲ್ಲಿಸಲು ಬರುತ್ತಾರೆ.

ಜಫರುಲ್ಲಾಖಾನರು ೧೯೬೭ ರಲ್ಲಿ ಅಂತಾ ರಾಷ್ಟ್ರೀಯ ನ್ಯಾಯಾಲಯದಲ್ಲಿ ಕ್ರಿಸ್ತನು ಶಿಲುಬೆಯ ಮೇಲೆ ಸಾಯಲಿಲ್ಲ; ಆತನು ಆಗ ಎಚ್ಚರದಪ್ಪಿದ್ದ; ಅನಂತರ ಪ್ಯಾಲೆಸ್ಟೈನದಿಂದ ಕಾಶ್ಮೀರಕ್ಕೆ ಬಂದನೆಂದು ಹೇಳಿದ್ದರು. ಕ್ರಿಸ್ತನ ತಾಯಿಯು ದಾರಿಯಲ್ಲಿ ಪಿಂಡಿಯ ಬಳಿ ಅಸುನೀಗಿದಳು. ಅಲ್ಲಿ ಅವಳ ಸಮಾಧಿ ಇದೆ. ಕ್ರಿಸ್ತನು ತೋಟಿಗನಾಗಿ ಕಾಶ್ಮೀರದಲ್ಲಿದ್ದ. ಕ್ರಿಸ್ತನ ಸಮಾಧಿಯು ಅಲ್ಲಿದೆ.

"ಮಧ್ಯವಲಯ, ಕಾಶ್ಮೀರ, ಲಡಾಕ, ತಿಬೇಟ ಮತ್ತು ಇವುಗಳ ಉತ್ತರಪ್ರದೇಶದಲ್ಲೂ ಯೇಸುಕ್ರಿಸ್ತನು ಸಂಚರಿಸಿರಬಹುದೆಂದು ಈ ಪ್ರದೇಶಗಳ ಜನರು ಇಂದಿಗೂ ನಂಬಿದ್ದಾರೆ. ಇದರಲ್ಲಿ ಅಸಾಧ್ಯವಾದುದಿಲ್ಲ ವೆಂದು ನನಗೆನಿಸುತ್ತದೆ" ಎಂದು ಪಂಡಿತ ಜವಾಹರ ಲಾಲ ನೆಹರೂ ತಮ್ಮ "ಜಾಗತಿಕ ಇತಿಹಾಸ ದರ್ಶನ" ವೆಂಬ ಪುಸ್ತಕದಲ್ಲಿ ಹೇಳಿದಾ ರೆ.

ಈ ಪ್ರದೇಶದಲ್ಲಿ ಆತನು ಯೇಸು, ಯುಜಾ, ಯಾತ್ರಾ, ಅಸಫಇಸಾ, ಇಸಾನಾ, ಈಶ ಎಂದು ಪ್ರಸಿದ್ಧ ನಾಗಿದ್ದಾನೆ. ಅರಬ್ಬಿಯಲ್ಲಿ ಅವನ ಹೆಸರು ಈಸಾ. ಕಾಶ್ಮೀರದಲ್ಲಿ ಇದು ತುಂಬಾ ಪ್ರಚಲಿತವಿದೆ. ಅಲ್ಲದೆ ಕಾಶ್ಮೀರದಲ್ಲಿಯ ಅನೇಕ ಹೆಸರುಗಳು ಬೈಬಲ್ಲಿನಲ್ಲಿ ಉಲ್ಲೇಖಿತವಾಗಿವೆ. ರಶಿಯನ್ ವಿದ್ವಾಂಸ ನಿಕೇಲಾಯ್ ರೊರಿನ್ ತಾನು ಬರೆದ ಪುಸ್ತಕವೊಂದರಲ್ಲಿ ಕ್ರಿಸ್ತನು ಶ್ರೀನಗರದ ಕೊಳದ ಬಳಿ ಉಪದೇಶಮಾಡಿದ್ದನೆಂದು ತನಗೆ ಹೇಳಿದ ವಿಷಯವನ್ನೂ ವಿವರಿಸಿರುವನು.......

ಅಹ್ಮದಿಯಾ ಪಂಗಡದ ಗುಲಾಮ ಅಹ್ಮದ್ ಕಾದಿಯಾನಿ (೧೮೩೫ ರಿಂದ ೧೯೦೮) ತನ್ನ ಗ್ರಂಥದಲ್ಲಿ ಕ್ರಿಸ್ತನು ಕಾಶ್ಮೀರದಲ್ಲಿ ಮರಣ ಹೊಂದಿದ ನೆಂದು ಬರೆದಿದ್ದಾರೆ.

ಮುಫ್ತಿ ಸಾದಿಕ್ ೧೯೩೬ರಲ್ಲಿ ಬರೆದ "ಕ್ರಿಸ್ತನ ಸಮಾಧಿ" ಪುಸ್ತಕದಲ್ಲಿ, ಖ್ವಾಜಾ ನರ್ಝೀರ ಅಹ್ಮದ್ ಬರೆದ 'ಭೂಮಿಯ ಮೇಲೆ ಸ್ವರ್ಗ' (೧೯೫೧) ಹಾಗೂ ೧೯೫೬ ರಲ್ಲಿ ಜಲಾಲುದ್ದೀನ ಬರೆದ "ಕ್ರಿಸ್ತನೆಲ್ಲಿ ಮರಣ ಹೊಂದಿದ ?" ಮೊದಲಾದವೆಲ್ಲ ಇದೇ ಬಗೆಯ ಅಭಿ ಪ್ರಾಯವನ್ನು ವ್ಯಕ್ತಮಾಡುತ್ತಿವೆ.

ಈಶಾ ಹಿಂಸೆಯಿಂದ ತಪ್ಪಿಸಿಕೊಳ್ಳಲು ಕಾಶ್ಮೀರಕ್ಕೆ ಓಡಿ ಬಂದಿದ್ದನೆಂದೂ ಬಂಡಿಪುರದಲ್ಲಿಮರಣಹೊಂದಿದನೆಂದೂ ಕಾಶ್ಮೀರದ ಇತಿಹಾಸಜ್ಞ ಹಾಗೂ ಪ್ರಾಚ್ಯವಸ್ತುಗಳ ನಿರ್ದೇಶಕ ಫಿದಾ ಮಹಮ್ಮದ್ ಹುಸೇನ ಸಿದ್ಧ ಮಾಡಿ ದ್ದಾರೆ. ಕಾಶ್ಮೀರ ಕೊಳ್ಳವು ಬಂಡಿಪುರದಲ್ಲಿ ಪ್ರಾರಂಭ ವಾಗುತ್ತದೆ. ಝೇಲಂ ನದಿಯು ಇಲ್ಲಿಂದ ಹರಿಯುತ್ತ ಉಲರ್ ಸರೋವರವನ್ನು ಪ್ರವೇಶಿಸುತ್ತದೆ. ಫಿದಾ ಹುಸೇನ ತಮ್ಮ ಹೇಳಿಕೆಯ ಸಮರ್ಥನೆಗಾಗಿ ಬೈಬಲ್ಲಿನ ಹಳೆಯ ಒಡಂಬಡಿಕೆಯನ್ನು ಉಲ್ಲೇಖಿಸುತ್ತಾರೆ.......

ಇಂದಿಗೂ ಅಲ್ಲಿರುವ ಚಿಕ್ಕಜನಾಂಗವೊಂದು ಈ ಸಮಾಧಿಯನ್ನು ನೋಡಿಕೊಳ್ಳುತ್ತಿದೆಯಲ್ಲದೆ, ತಾವು ಪ್ರವಾದಿ ಮೂಸಾನ ಅನುಯಾಯಿಗಳೆಂದು ಹೇಳಿ ಕೊಳ್ಳುತ್ತಾರೆ. ಈ ಸಮಾಧಿ ಮೇಲ್ವಿಚಾರಕನಾದ ೮೦ ವರುಷದ ವೃದ್ಧ ಮೌಲ್ವಿಯು ತನ್ನ ಪೂರ್ವಜರು ಇಸ್ರೇಲದಿಂದ ಬಂದಿರುವರೆನ್ನುತ್ತಾರೆ. ಪ್ರಾಯಶಃ ಅವರು ಕ್ರಿಸ್ತನೊಂದಿಗೆ ಇಲ್ಲಿಗೆ ಬಂದು ಅನಂತರ ಮುಸ್ಲಿಮ ಪ್ರಭಾವಕ್ಕೆ ಒಳಗಾಗಿರಬೇಕು. ಇಂದಿಗೂ ಅವರು ತಮ್ಮನ್ನು ಬನಿ ಇಸ್ರೆಲಿ (ಇಸ್ರೇಲದ ಮಕ್ಕಳು) ಎಂದು ಕರೆದುಕೊಳ್ಳುತ್ತಾರೆ.

ಪ್ರಾ. ಹುಸೈನರಿಗೆ ಜರ್ಮನ್ ಪಾದ್ರಿ ಡಾ। ಮಾಕರ ವ್ಹಿ. ಬ್ಯಾಂಕೆಯ ಡೈರಿಗಳ ನಲ್ವತ್ತು ಭಾಗ ಗಳು ಲೇಹದ ಮಂದಿರದಲ್ಲಿ ದೊರೆತಿವೆ. ಸ್ಥಳೀಯ ವಸ್ತುಸಂಗ್ರಹಾಲಯದಲ್ಲಿ ಡೇರಿನ್ ನಕ್ಷತ್ರದ ಚಿತ್ರವಿದೆ. ಕಾಶ್ಮೀರದಲ್ಲಿಯ ಎರಡು ಸ್ಥಳಗಳಲ್ಲಿ ಕೆಲವು ಕಲ್ಲುಗಳಿವೆ. ಅವೆಲ್ಲ ಕ್ರಿಸ್ತ ಹಾಗೂ ಅವನ ಅನುಯಾಯಿಗಳಿಗೆ ಸೇರಿದವುಗಳಾಗಿವೆ. ಕಾಶ್ಮೀರಿಗಳು ಜ್ಯೂ ಜನರಂತೆ ಇರುವುದು, ಕ್ರಿಸ್ತನು ಅಲ್ಲಿ ಮರಣ ಹೊಂದಿದನೆಂದು ಫ್ರೇಂಚ ಇತಿಹಾಸಜ್ಞ ಬರ್ನ್ಯೆರನು ೧೭ನೇ ಶತಮಾನ ದಲ್ಲಿ ಔರಂಗಜೇಬನ ಕಾಲದಲ್ಲಿ ಬಂದಾಗ ಬರೆದಿದ್ದು ದನ್ನು ಪ್ರಾ. ಫಿದಾ ಹುಸೇನ ಉಲ್ಲೇಖಿಸಿದ್ದಾರೆ.

# ಇಸ್ಲಾಂ ಮತ್ತು ವಿಜ್ಞಾನ*

—ಡಾ। ಅಬ್ದುಸ್ಸಲಾಂ

**ಶತಾಬ್ದಗಳಿಗೆ ಮುಂಚೆ, ಜಗತ್ತಿನ ಹೆಚ್ಚಿನ ಕಡೆಗಳಲ್ಲಿ ನಾಗರಿಕತೆ ಸುಳಿಯುದ ಕಾಲದಲ್ಲಿ, ವಿಜ್ಞಾನದ ಉದಯಕ್ಕೂ ಬೆಳವಣಿಗೆಗೂ ಇಸ್ಲಾಂ ಮಹತ್ತರ ಕೊಡುಗೆಯನ್ನು ನೀಡಿತ್ತು. ಆದರೆ, ಚರಿತ್ರೆಯ ದಶಾಸಂಧಿಗಳಲ್ಲಿ ಎಲ್ಲೋ, ವಿಜ್ಞಾನ ಮತ್ತು ಇಸ್ಲಾಂ ಪರಸ್ಪರ ಅಗಲಿದುವು. ಇಂದು ಸಹ ವಿಜ್ಞಾನವು ಇಸ್ಲಾಮಿನಿಂದ ಅಗಲಿ ನಿಂತಿರುವುದಲ್ಲವೇ ? ಇದಕ್ಕೆ ಕಾರಣಗಳೇನು ? ಇಸ್ಲಾಂ ಮತ್ತು ವಿಜ್ಞಾನದೊಳಗಿನ ಬಿಟ್ಟುಹೋದ ಬಂಧವನ್ನು ಪುನಃ ಜೋಡಿಸಲು ಮಾರ್ಗಗಳು ಯಾವುವು ? ವಿಜ್ಞಾನ ಮತ್ತು ವಿಶ್ವಾಸ ತನ್ಮೊಳಗಿನ ಪರಸ್ಪರ ಪೂರಕತ್ವದಲ್ಲಿ ನಂಬುವ ಖ್ಯಾತ ಪಾಕಿಸ್ತಾನಿ ಭೌತಶಾಸ್ತ್ರ ವಿಜ್ಞಾನಿ ಡಾ। ಅಬ್ದುಸ್ಸಲಾಂ ಅವರ ಲೇಖನ ಇದಕ್ಕೆ ಉತ್ತರ ಹೇಳಲು ಶ್ರಮಿಸುತ್ತದೆ. ಪಾಕಿಸ್ತಾನದ ಇಂಟೆರ್‌ನೇಷನಲ್ ಸೆಂಟರ್ ಫೋರ್ ಥಿಯರಿಟಿಕಲ್ ಫಿಸಿಕ್ಸಿನ ಸ್ಥಾಪಕರಾದ ಡಾ। ಸಲಾಂರಿಗೆ ಭೌತಶಾಸ್ತ್ರದಲ್ಲಿ ನೋಬಲ್ ಬಹುಮಾನ ಲಭಿಸಿದೆ.**

ಆರಂಭದಲ್ಲೇ ನಾನೊಂದು ವಿಚಾರವನ್ನು ಹೇಳಿ ಕೊಳ್ಳುತ್ತೇನೆ: ನಾನು ದೈವವಿಶ್ವಾಸಿ. ಧರ್ಮಾಚಾರಗಳನ್ನು ಅನುಷ್ಠಿಸುವ ಮುಸ್ಲಿಂ ಸಹ ಆಗಿದ್ದೇನೆ. ಪವಿತ್ರ ಖುರ್‌ಆನಿನ ಸಂದೇಶದಲ್ಲಿ ವಿಶ್ವಾಸವುಳ್ಳವನಾಗಿರುವುದರಿಂದ ನಾನೊಬ್ಬ ಮುಸ್ಲಿಂ ಆಗಿದ್ದೇನೆಂದು ಹೇಳಿದ್ದು. ಒಬ್ಬ ವಿಜ್ಞಾನಿಯೊಡನೆಂಬ ಸ್ಥಿತಿಯಲ್ಲೂ ನನ್ನೊಡನೆ ಖುರ್‌ಆನ್ ಸಂವಾದಿಸುತ್ತದೆ. ಕಾರಣ, ಪ್ರಕೃತಿ ನಿಯಮಗಳ ಸಾಂಗತ್ಯವನ್ನು ಖುರ್‌ಆನ್ ಒತ್ತಿ ಹೇಳುತ್ತದೆ. ಪ್ರಪಂಚವಿಜ್ಞಾನ, ಭೌತಶಾಸ್ತ್ರ, ಜೀವಶಾಸ್ತ್ರ, ವೈದ್ಯಶಾಸ್ತ್ರ ಎಂಬಿವುಗಳಿಂದಿರುವ ಉದಾಹರಣೆಗಳಿಂದ ಖುರ್‌ಆನ್ ಇದನ್ನು ಮಾಡುತ್ತದೆ. ಮಾನವರಾಶಿಗೆಲ್ಲಾ ಈ ಪ್ರಕೃತಿ ನಿಯಮಗಳು ಅನ್ವಯಿಸುತ್ತವೆಂದು ಸಹ ಖುರ್‌ಆನ್ ಬೊಟ್ಟುಮಾಡುತ್ತದೆ.

ಖುರ್‌ಆನ್ ಹೇಳುತ್ತದೆ :

ಮೇಘಗಳು ಹೇಗೆ ಸೃಷ್ಟಿಸಲ್ಪಟ್ಟಿರುವುವೆಂದು ತಿಳಿಯಲು ಅವರು ಆಕಾಶದೆಡೆಗೆ ನೋಡುವುದಿಲ್ಲವೇ? ಆಕಾಶವು ಹೇಗೆ ಎತ್ತರದ ಸ್ಥಿತಿಯಲ್ಲಿರುವುದೆಂದು ತಿಳಿಯಲು ಅವರು ಮೇಲಕ್ಕೆ ದೃಷ್ಟಿ ಹರಿಸುವುದಿಲ್ಲವೇ ? ಭೂಮಿಯಲ್ಲಿ ಹೇಗೆ ಅವು ಸ್ಥಿರವಾಗಿ ನಿಂತಿವೆಯೆಂದು ಅರಿಯಲು ಅವರು ಪರ್ವತಗಳೆಡೆ ನೋಡುವುದಿಲ್ಲವೇ ? ಭೂಮಿ ಹೇಗೆ ವಿಸ್ತಾರವಾಗಿದೆಯೆಂದು ಸಹ ಅವರು ನೋಡುವುದಿಲ್ಲವೇ? (88:18-21)

ಖುರ್‌ಆನ್ ಪುನಃ :

"ಆಕಾಶ ಮತ್ತು ಭೂಮಿಯ ಸೃಷ್ಟಿಯಲ್ಲೂ ರಾತ್ರಿ - ಹಗಲುಗಳು ಬದಲಾಗಿ ಬರುವುದರಲ್ಲಿಯೂ ಖಂಡಿತವಾಗಿಯೂ ಬುದ್ಧಿವಂತನು ತಿಳಿದುಕೊಳ್ಳಲು ಹಲವು ಸೂಚನೆಗಳಿವೆ. (3:191)

ಖುರ್‌ಆನಿನ 750 ವಚನಗಳು (ಗ್ರಂಥದ ಎಂಟನೆಯ ಒಂದು ಅಂಶ) ಪ್ರಕೃತಿಯ ಕುರಿತು ಕಲಿಯಲು ವಿಶ್ವಾಸಿಗಳನ್ನು ಆಹ್ವಾನಿಸುತ್ತದೆ. ಯಥಾರ್ಥ ಸತ್ಯವೇನೆಂಬ ಅನ್ವೇಷಣೆಯಲ್ಲಿ ತೊಡಗಲಿಕ್ಕೂ ವಿವೇಕವನ್ನು ಉಪಯೋಗಿಸಲಿಕ್ಕೂ ರೂಢಿಯಲ್ಲಿರುವ ವಿಜ್ಞಾನವನ್ನು ಸಾಕಷ್ಟು ಆಶ್ರಯಿಸಲಿಕ್ಕೂ ವೈಜ್ಞಾನಿಕ ಶಕ್ತಿಗಳನು

★ "ಮಾತೃಭೂಮಿ", ಮೇ 14–18, 1986

ಸಾಮೂಹಿಕ ಜೀವನದ ಅಂಶವನ್ನಾಗಿ ಮಾಡಲಿಕ್ಕೂ ಖುರ್‌ಆನಿನ ಈ ವಚನಗಳು ವಿಶ್ವಾಸಿಗಳಿಗೆ ಬೋಧಿಸುತ್ತವೆ.

ವಿಜ್ಞಾನ ಮತ್ತು ಶಾಸ್ತ್ರದ ಮೇಲಿನ ಅಭಿವಾಂಛೆ ಎಲ್ಲಾ ಮುಸ್ಲಿಮರಿಗೆ ಸಹ ಕಡ್ಡಾಯವಾಗಿಯೂ ಇರಬೇಕಾಗಿದೆಯೆಂದು ಮುಹಮ್ಮದ್ ಪೈಗಂಬರರು ಒತ್ತಿ ಹೇಳಿದರು.

ಇದಾಗಿರಬೇಕು ಇಸ್ಲಾಮಿನ ಕುರಿತಿರುವ ಪಠನದಲ್ಲಿ ವಿಜ್ಞಾನದ ಕುರಿತು ಉಂಟಾಗಿರಬೇಕಾದ ಪ್ರಥಮವಾದ ಮೂಲ ಪ್ರಮಾಣ. "ಬೈಬಲ್, ಖುರ್‌ಆನ್ ಮತ್ತು ವಿಜ್ಞಾನ" ಎಂಬ ತನ್ನ ಪ್ರಬಂಧದಲ್ಲಿ ಮೊರಿಸ್ ಬುಕೆ ಸೂಚಿಸಿದ ಆ ವಸ್ತುಸ್ಥಿತಿಯಾಗಿರಬೇಕು ಎರಡನೆಯ ಆಧಾರ. ಪ್ರಕೃತಿಯ ಒಂದು ಘಟನೆಯ ಕುರಿತು ವೈಜ್ಞಾನಿಕ ಸತ್ಯಗಳಿಂದಲೂ ಸಂಶೋಧನೆಗಳಿಂದಲೂ ನಮಗೆ ವ್ಯಕ್ತಗೊಂಡಿರುವ ವಸ್ತುಸ್ಥಿತಿಗಳಿಗೆ ವಿರುದ್ಧವಾಗಿ ಒಂದೇ ಒಂದು ವಚನವಾದರೂ ಖುರ್‌ಆನಿನಲ್ಲಿ ಇಲ್ಲವೆಂಬ ಸತ್ಯಾಂಶವನ್ನು ಬುಕೆ ಬೊಟ್ಟು ಮಾಡಿದ್ದಾರೆ.

**ಪಾಶ್ಚಾತ್ಯ ವಿಜ್ಞಾನ :**
**ಗ್ರೀಕ್ – ಇಸ್ಲಾಮಿಕ್ ಪೈತೃಕ**

ಹಳೆಯಕಾಲದ ಮುಸ್ಲಿಮರು ಪವಿತ್ರ ಖುರ್‌ಆನ್ ಮತ್ತು ಮುಹಮ್ಮದ್ ಪೈಗಂಬರರ ಆಜ್ಞೆಗಳನ್ನು ಎಷ್ಟು ಪ್ರಾಧಾನ್ಯತೆಯಿಂದ ಸ್ವೀಕರಿಸಿದರು ?

ಪೈಗಂಬರರ ಮರಣಾನಂತರ ಸುಮಾರು ನೂರು ವರ್ಷಗಳೊಳಗೆಯೇ ಆ ಕಾಲದಲ್ಲಿ ಜ್ಞಾತ ಶಾಸ್ತ್ರಗಳನ್ನೆಲ್ಲಾ ಸಂಪೂರ್ಣವಾಗಿ ಕಲಿತುಕೊಳ್ಳುವುದು ತಮ್ಮ ಕರ್ತವ್ಯವೆಂದು ಮುಸ್ಲಿಮರು ಮನಗಂಡಿದ್ದರು. ಗಹನವಾದ ಶಾಸ್ತ್ರಗಳನ್ನು ಕಲಿಸುವ ಸಂಸ್ಥೆಗಳು (ಬೈತುಲ್ ಹಿಕಮ್) ಇತ್ಯಾದಿಗಳನ್ನು ಆರಂಭಿಸಿದ ಮುಸ್ಲಿಂ ಸಮುದಾಯ ಅನಂತರ 350 ವರ್ಷಗಳಲ್ಲಿ ವಿಜ್ಞಾನದಲ್ಲಿ ಸಂಪೂರ್ಣ ಮೇಧಾವಿತ್ವವನ್ನೇ ಗಳಿಸಿತು.

ಇಸ್ಲಾಮಿಕ ರಾಷ್ಟ್ರಸಮೂಹ ವಿಜ್ಞಾನಕ್ಕೆ ನೀಡಿದ ಸಂಪೂರ್ಣ ಪ್ರೋತ್ಸಾಹ ಅಂದು ಶಾಸ್ತ್ರಗಳಿಗೆ ಇಸ್ಲಾಂ ನೀಡಿದ್ದ ಆದರಣೀಯ ಸ್ಥಾನದ ಉದಾಹರಣೆಯಾಗಿದೆ.

ಸಾಹಿತ್ಯದ ಕುರಿತು ಎಚ್. ಎ. ಆರ್. ಗಿಬ್ಬ್ ಹೀಗೆ ಹೇಳಿದ್ದಾರೆ: "ಇಸ್ಲಾಮಿನಲ್ಲಿ ವಿಜ್ಞಾನಕ್ಕೆ ಉಂಟಾದ ವಸಂತ ಬೇರೆಲ್ಲಿಗಿಂತಲೂ ಸೋಪಾಧಿಕವಾಗಿತ್ತು...... ಉನ್ನತ ಸ್ಥಾನೀಯರ ಪ್ರೋತ್ಸಾಹದಲ್ಲೂ ಸಹಕಾರದಲ್ಲೂ ಆಶ್ರಿತವಾಗಿತ್ತು ಅದು. ಯಾವ ರಾಷ್ಟ್ರದ ರಾಜಧಾನಿಯಲ್ಲಿ ಅಲ್ಲಿಯ ರಾಜಕುಮಾರರೂ ಮಂತ್ರಿಗಳೂ ವಿಜ್ಞಾನವನ್ನು ಪ್ರೋತ್ಸಾಹಿಸುವುದು ಆಹ್ಲಾದಕರವಾಗಿ ಅಥವಾ ಲಾಭಕರವಾಗಿ ಯಾ ತಮಗೆ ಹೆಗ್ಗಳಿಕೆಯಾಗಿ ತಿಳಿದುಕೊಂಡಿದ್ದರೋ, ಅಲ್ಲೆಲ್ಲಾ ವಿಜ್ಞಾನದ ಜ್ಯೋತಿ ಜ್ವಲಿಸುತ್ತಲೇ ಬಾಕಿಯಾಯಿತು...... ಕ್ರಿಸ್ತಶಕ 1000ದ ಸುಮಾರಿಗೆ ಇಸ್ಲಾಮಿನಲ್ಲಿ ವಿಜ್ಞಾನದ ಸುವರ್ಣಕಾಲವಾಗಿತ್ತು.

ಮಧ್ಯಕಾಲದ ಕೊನೆಯ ಪ್ರತಿಭೆ ಇಬ್ನುಸಿನ (ಅವಿಸೆನ್ನಾ) ಮತ್ತು ಅವರ ಸಮಕಾಲೀನರೂ ಮೊದಲಿನ ಆಧುನಿಕ ಚಿಂತಕರೂ ಆದ ಇಬ್ನುಲ್ ಹೈತಾಂ ಮತ್ತು ಅಲ್‌ಬರೂನಿಯ ಕಾಲವಾಗಿತ್ತು ಅದು.

ಮನುಷ್ಯಚರಿತ್ರೆಯಲ್ಲಿ ಅತ್ಯಂತ ಪ್ರತಿಭಾಶಾಲಿಗಳಾದ ಭೌತಿಕ ವಿಜ್ಞಾನಿಗಳ ಪೈಕಿ ಒಬ್ಬರಾಗಿದ್ದರು ಇಬ್ನುಲ್ ಹೈತಾಂ. (ಅಲ್‌ಹಾಝೆನ್, ಕ್ರಿ. ಶ. 965–1039). ಪ್ರಕಾಶಶಾಸ್ತ್ರದ ಅತ್ಯಂತ ಉನ್ನತ ಸೀಮೆಗಳಿಗೆ ಅವರು ಪರೀಕ್ಷಣಾತ್ಮಕ ಕೊಡುಗೆಗಳನ್ನು ನೀಡಿದರು. "ಒಂದು ಮಾಧ್ಯಮದ ಮೂಲಕ ದಾಟಿ ಹೋಗುವ ಪ್ರಕಾಶರಶ್ಮಿ ಅತ್ಯಂತ ಅನಾಯಾಸಕರವೂ ಹ್ರಸ್ವವೂ ಆದ ದಾರಿಯನ್ನು ಆಯ್ಕೆ ಮಾಡುತ್ತದೆ" ಎಂದು ಅವರು ಮೊತ್ತಮೊದಲಿಗೆ ಸೂಚಿಸಿದರು. ಈ ಸಂಶೋಧನೆ ಮೂಲಕ ಹೈತಾಂ ತಲಪಿದ್ದು ಶತಮಾನ ನಂತರ ಫೆರ್ಮಾಟ್ ರೂಪೀಕರಿಸಿದ ಸಮಯಸಿದ್ಧಾಂತದ ಬೀಜಗಳನ್ನಾಗಿತ್ತು. ನ್ಯೂಟನ್ ನಿರೂಪಿಸಿದ ಒಂದನೆಯ ಚಲನ ನಿಯಮದ ಆದಿರೂಪವಾದ ನಿಶ್ಚೇಷ್ಟತಾ ನಿಯಮ ಶತಮಾನಗಳಿಗೆ ಮುಂಚೆಯೇ ಇಬ್ನು ಹೈತಾಂ ಕಂಡುಹಿಡಿದಿದ್ದರು. ರೋಜರ್ ಬೇಕನಿನ 'ಓಪ್ಸ್ ಮೊಜಸಿ'ನ ಐದನೆಯ ಅಧ್ಯಾಯ ಹೆಚ್ಚುಕಮ್ಮಿ ಸಂಪೂರ್ಣವಾಗಿಯೂ ಹೈತಾಂ ಅವರ ಪ್ರಕಾಶ ಶಾಸ್ತ್ರದ ಪುನರಾವರ್ತನೆಯಾಗಿದೆ.

ಇಬ್ನುಸಿನ ಅವರ ಎರಡನೆಯ ಸಮಕಾಲಿಕನಾದ ಮಹಾನ್ ಅಲ್‌ಬರೂನಿ (ಕ್ರಿ. ಶ. 973–1048) ಇಂದು ಅಫಘಾನಿಸ್ತಾನದಲ್ಲಿರುವ ಪ್ರದೇಶವನ್ನು ತನ್ನ ಪ್ರವರ್ತನ ಕೇಂದ್ರವನ್ನಾಗಿ ಮಾಡಿದ್ದರು. ಇಬ್ನುಲ್ ಹೈತಾಮ್‌ರಂತೆ, ಅವರು ಸಹ ಪ್ರಯೋಗಸಿದ್ಧ ಶಾಸ್ತ್ರಜ್ಞರಾಗಿದ್ದರು. ಆರುನೂರು ವರ್ಷಗಳ ಬಳಿಕ ಬಂದ ಗಲೀಲಿಯೋನಂತೆ ಆಧುನಿಕನೂ ಮಧ್ಯಯುಗ ವಿರುದ್ಧನೂ ಆಗಿದ್ದರು ಬರೂನಿ.

ಪಾಶ್ಚಾತ್ಯ ವಿಜ್ಞಾನ ಗ್ರೀಕ್ ಮತ್ತು ಇಸ್ಲಾಮಿನ ಸಂಯುಕ್ತ ಪೈತೃಕವೆಂಬುದರಲ್ಲಿ ಏನೂ ಸಂಶಯವಿಲ್ಲ. ಆದರೆ ಇಸ್ಲಾಮಿಕ ಶಾಸ್ತ್ರ ಬೇರೆ ಯಾವುದೋ ಶಾಸ್ತ್ರದಿಂದ ರೂಪಾಂತರಗೊಂಡದ್ದೆಂದೂ ಮುಸ್ಲಿಂ ಶಾಸ್ತ್ರಜ್ಞರು ಅಂಧವಾಗಿ ಗ್ರೀಕ್ ವಿಜ್ಞಾನಿಗಳನ್ನು ಅನುಕರಿಸುತ್ತಿದ್ದರೆಂದೂ ವೈಜ್ಞಾನಿಕ ಅನ್ವೇಷಣ ಮಾರ್ಗಕ್ಕೆ ಅವರು ಯಾವುದೇ ಮೌಲಿಕ ಕೊಡುಗೆಯನ್ನು ನೀಡಿಲ್ಲವೆಂದೂ ಇತ್ಯಾದಿಯಾಗಿ ಆಪಾದಿಸಲಾಗುತ್ತದೆ.

ಆದರೆ ಈ ಆಪಾದನೆ ಸಂಪೂರ್ಣ ನಿರಾಧಾರವಾದುದು. ಆಲ್‌ಬರೂನಿ ಅರಿಸ್ಟಾಟಲನ ಕುರಿತು ಹೇಳುವುದನ್ನು ನೋಡಿರಿ:

"ಅರಿಸ್ಟಾಟಲನ ಅಭಿಪ್ರಾಯಗಳಿಗೆ ಅಮಿತವಾದ ಬೆಲೆಕೊಡುವುದು ಹೆಚ್ಚಿನವರಿಗುಂಟಾದ ಪ್ರಮಾದವಾಗಿದೆ. ಅವರ ಅಭಿಪ್ರಾಯಗಳಲ್ಲಿ ತಪ್ಪು ಉಂಟಾಗುವ ಸಾಧ್ಯತೆಯಿಲ್ಲವೆಂದು ಅವರು ಭಾವಿಸುತ್ತಾರೆ. ಅರಿಸ್ಟಾಟಲ್ ತನ್ನಿಂದ ಸಾಧ್ಯವಾಗುವಷ್ಟರ ಮಟ್ಟಿಗಿನ ಪ್ರಯೋಗಗಳನ್ನು ಮಾತ್ರವೇ ನಡೆಸಿದ್ದೆಂದು ಪೂರ್ಣ ಪ್ರಜ್ಞೆ ಇದ್ದೂ ಇವರು ಹೀಗೆ ಭಾವಿಸುತ್ತಾರೆ."

ನಿಶಿತ ನಿರೀಕ್ಷಣೆಯ ಕುರಿತು ಆಸಕ್ತಿಯುಳ್ಳ ಅಲ್‌ಬರೂನಿ ಭೂಗರ್ಭ ಶಾಸ್ತ್ರದ ಕುರಿತು ಹೀಗೆ ಹೇಳುತ್ತಾರೆ:

"ನಿಮ್ಮ ಸ್ವಂತ ಕಣ್ಣುಗಳಿಂದ ಇಂಡಿಯಾದ ಮಣ್ಣನ್ನು ಪರೀಕ್ಷೆಗೆ ಗುರಿಪಡಿಸಿ ಅದರ ಗುಣಗಳ ಕುರಿತು ಗಾಢವಾಗಿ ಆಲೋಚಿಸಿರಿ. ಎಷ್ಟು ಆಳಕ್ಕೆ ಅಗೆದರೂ ಸಿಗುವ ಉರುಟುರುಟಾದ ಕಲ್ಲುಗಳು; ಪರ್ವತಗಳ ಮತ್ತು ಅತಿಶಕ್ತವಾದ ಪ್ರವಾಹವುಳ್ಳ ನದಿಗಳ ಸಮೀಪ ಗೋಚರಿಸುವ ಮಹಾ ಬಂಡೆಗಳು; ಪರ್ವತಗಳಿಂದ ಬಹಳ ದೂರದಲ್ಲಿರುವ ಮಂದಗತಿಯಲ್ಲಿ ಹರಿಯುವ ನದಿಗಳ ಸಮೀಪದಲ್ಲಿ ದೊರೆಯುವ ಸಣ್ಣ ಸಣ್ಣ ಕಲ್ಲುಗಳು; ನದೀ ಮುಖಗಳಲ್ಲೂ ನದಿಗಳು ಸಮುದ್ರದೊಂದಿಗೆ ಸೇರುವೆಡೆಗಳು ತೊಡಗಿ ಪ್ರವಾಹ ತೀರಾ ಇಲ್ಲದಾಗುವಲ್ಲಿಯೂ ಗೋಚರಿಸುವ ಮಣ್ಣಿನಂತೆ ಪುಡಿಯಾದ ಬಂಡೆಗಳು; ಇವನ್ನೆಲ್ಲಾ ನೋಡಿ ಅಧ್ಯಯನ ಮಾಡುವಾಗ, ಇಂಡಿಯಾ ಒಂದು ಕಾಲದಲ್ಲಿ ಸಮುದ್ರವಾಗಿತ್ತೆಂದೇ ಮನವರಿಕೆಯಾಗುತ್ತದೆ. ನದಿ ಇತ್ಯಾದಿಗಳಲ್ಲಿ ಹರಿದು ಬಂದ ಕೊಳೆಕೊಚ್ಚೆಗಳು ಸಂಗ್ರಹವಾಗಿ ಈ ಸಮುದ್ರದ ಆಳವು ಭರ್ತಿಯಾಯಿತು."

ಬ್ರಿಫಾಲ್ಟ್ ಅವರ ಮಾತುಗಳನ್ನು ಗಮನಿಸಿರಿ:

ಗ್ರೀಕ್ ಶಾಸ್ತ್ರಜ್ಞರು ಕ್ರಮಬದ್ಧವಾಗಿಯೂ ಸರಳೀಕೃತವಾಗಿಯೂ ಸಿದ್ಧಾಂತಿಸಿದರು. ಆದರೆ ಬಹಳ ತಾಳ್ಮೆಯಿಂದ ಮಾಡಬೇಕಾದ ದೀರ್ಘವಾದ ನಿರೀಕ್ಷಣೆ, ಪರೀಕ್ಷಣಾತ್ಮಕವಾದ ಅನ್ವೇಷಣೆ ಎಂಬಿವು ಗ್ರೀಕರ ಸ್ವಭಾವಕ್ಕೆ ಸಂಪೂರ್ಣ ಭಿನ್ನವಾಗಿತ್ತು...... ನಾವು ಅರಿತಿರುವ ಶಾಸ್ತ್ರವಾದರೋ, ಶಿಕ್ಷಣ, ನಿರೀಕ್ಷಣ ಮತ್ತು ಮಾನ ನಿರೀಕ್ಷಣದ ಹೊಸ ರೀತಿಗಳ ಫಲವಾಗಿ ರೂಪುಗೊಂಡಿದೆ. ಇವಾದರೋ ಯುರೋಪಿಗೆ ಅರಬಿಯರು ನೀಡಿದ ಕೊಡುಗೆಯಾಗಿದೆ. (ಆಧುನಿಕ)ಶಾಸ್ತ್ರವು ಇಸ್ಲಾಮಿಕ ನಾಗರಿಕತೆಯ ಅತಿ ಪ್ರಧಾನವಾದ ಕೊಡುಗೆಯಾಗಿದೆ......"

ಆದರೆ, ವಿಜ್ಞಾನದ ಈ ಆಧುನಿಕ ಚೈತನ್ಯೋದಯ ಮಧ್ಯದಲ್ಲಿ ತಡೆಯಲ್ಪಟ್ಟಿತೆಂಬುದು ಚರಿತ್ರೆಯ ಮಹಾದುರಂತವಾಗಿದೆ. ವಿಜ್ಞಾನದ ಅನ್ವೇಷಣೆಯ ದಿಶೆಯಲ್ಲೇ ಸುಸ್ಥಿರವಾದೊಂದು ವ್ಯತಿಕ್ರಮ ಸೃಷ್ಟಿಸುವುದರಲ್ಲಿ ಪರಾಜಯವುಂಟಾಯಿತು. ಆಲ್‌ಬರೂನಿ ಮತ್ತು ಇಬ್ನುಲ್ ಹೈತಾಂ ಅವರ ನಂತರ ನೂರು ವರ್ಷಗಳೊಳಗೆಯೇ ಇಸ್ಲಾಮಿನಲ್ಲಿ ವಿಜ್ಞಾನದ ಬೆಳವಣಿಗೆ ಸ್ತಬ್ಧವಾಯಿತು. ಮತ್ತೊಮ್ಮೆ ವಿಜ್ಞಾನ ಲೋಕದಲ್ಲಿ ಪಕ್ವತೆ ಮತ್ತು ನಿರೀಕ್ಷಣೆ ಪರೀಕ್ಷಣೆಗಳ ಪ್ರಾಧಾನ್ಯ ಪುನಃ ಕರಗತವಾಗಲು ಮಾನವರಾಶಿ ನಂತರ 500 ವರ್ಷಗಳ ಕಾಲ ಕಾಯಬೇಕಾಯಿತು.

## ಇಸ್ಲಾಮಿನಲ್ಲಿ ವಿಜ್ಞಾನದ ಬೆಳವಣಿಗೆ

ಇಸ್ಲಾಮಿಕ ನಾಗರಿಕತೆಯಲ್ಲಿ ಸೃಜನಾತ್ಮಕಶಾಸ್ತ್ರ ಸಾಯಲಿಕ್ಕೆ ಕಾರಣವೇನು? ಕ್ರಿಸ್ತಶಕ 1100 ರಿಂದ ಆರಂಭಿಸಿದ ವಿಜ್ಞಾನದ ಕುಸಿತ 250 ವರ್ಷಗಳೊಳಗೆ ಹೆಚ್ಚು ಕಮ್ಮಿ ಪೂರ್ಣಗೊಂಡಿತು.

ಆದರೆ ಈ ಕುಸಿತ ಮತ್ತು ಅಧಃಪತನದ ವ್ಯಕ್ತವಾದ ಕಾರಣಗಳು ಯಾರಿಗೂ ಸರಿಯಾಗಿ ತಿಳಿದಿಲ್ಲ. ಖಂಡಿತವಾಗಿಯೂ ಮಂಗೋಲಿಯನ್ ಆಕ್ರಮಣದ ನಂತರದ ನಾಶ ಮೊದಲಾದ ಬಾಹ್ಯಕಾರಣಗಳು ಇದಕ್ಕೆ ದಾರಿಮಾಡಿಕೊಟ್ಟುವು. ಆದರೆ ನನ್ನ ಅಭಿಪ್ರಾಯದಲ್ಲಿ, ಇಸ್ಲಾಮಿಕ ರಾಷ್ಟ್ರ ಸಮೂಹದಲ್ಲಿ ವಿಜ್ಞಾನದ ಮರಣ ಮಂಗೋಲಿಯನ್ ಆಕ್ರಮಣ ಇತ್ಯಾದಿಗಳಿಗೆ ಮೊದಲೇ ತೊಡಗಿತ್ತು. ಪ್ರಧಾನವಾಗಿ ಆಂತರಿಕ ಕಾರಣಗಳೇ ಈ ಕುಸಿತಕ್ಕೆ ದಾರಿಮಾಡಿಕೊಟ್ಟುವು. ಇಸ್ಲಾಮಿಕ ರಾಷ್ಟ್ರಗಳ ವೈಜ್ಞಾನಿಕ ರಂಗ ಅಂತರ್ಮುಖವಾದುದು ಮತ್ತು ಒಂಟಿಯಾಗಿದ್ದುದು ಒಂದನೆಯ ಕಾರಣವಾಗಿದೆ· ಎರಡನೆಯ ಕಾರಣ ಆಡಳಿತಾಧಿಕಾರಿಗಳು ವಿಜ್ಞಾನ ಕ್ಷೇತ್ರದ ಹೊಸ ಸಂಶೋಧನೆಗಳನ್ನು ಬಹಳವಾಗಿ ನಿರುತ್ಸಾಹಪಡಿಸಿದುದಾಗಿದೆ. ಹೆಚ್ಚು ಪ್ರಧಾನವಾದ ಕಾರಣ ಸಹ ಇದೇ ಆಗಿದೆ. ಇಸ್ಲಾಮಿನ 11ನೆಯ ಶತಮಾನದ ಅಂತ್ಯಭಾಗ ಮತ್ತು 12ನೇ ಶತಾಬ್ದದ ಆದಿಭಾಗ (ವಿಜ್ಞಾನದ ಬೆಳವಣಿಗೆ ಕುಂಠಿತಗೊಂಡ ಕಾಲ) ರಾಷ್ಟ್ರೀಯ ಪ್ರೇರಿತವಾದ ಸಂಕುಚಿತ ತತ್ವದ ಧಾರ್ಮಿಕ ಸಂಘರ್ಷದ ಕಾಲಘಟ್ಟವಾಗಿತ್ತು. ಕ್ರಿ. ಶ. 1100ನೇ ವರ್ಷದಲ್ಲಿ ಇಮಾಂ ಗಝಾಲಿ ಹೀಗೆ ಬರೆದರು:

"ಗಣಿತ ಶಾಸ್ತ್ರಗಳ ನಿರೋಧನೆ ಮೂಲಕ ಇಸ್ಲಾಮನ್ನು ಸಂರಕ್ಷಿಸಬೇಕೆಂದು ಭಾವಿಸುವ ಒಬ್ಬ ವ್ಯಕ್ತಿ ಧರ್ಮದ ವಿರುದ್ಧ ಅತಿ ಭೀಕರವಾದ ಪ್ರಮಾದವೆಸಗಿದ್ದಾನೆ. ಧರ್ಮದ ಸತ್ಯದಾಚೆ ಈ ಶಾಸ್ತ್ರಗಳಿಗೆ ಏನೂ ನೀಡಲಿಕ್ಕಿಲ್ಲವೆಂದು ಆತ ಭಾವಿಸಿದ......"

ಆ ಕಾಲದ ಭಾವನೆಯು ಸೃಷ್ಟ್ಯಾತ್ಮಕ ವಿಜ್ಞಾನದ ವಿರುದ್ಧ ಮುಖ ತಿರುಗಿಸಿತು. ಬದಲು, ಭೌತಿಕ ಪ್ರಪಂಚದ ಆಚೆಗಿರುವ ಇನ್ನೊಂದು ಲೋಕ ಮತ್ತು ಕೇಂದ್ರವಾಗಿರುವ ಸೂಫಿಸಮನ್ನೂ ಪರೀಕ್ಷಣೆಗಳೊಡನೆ ಅಸಹಿಷ್ಣುತೆಯನ್ನು ತೋರಿಸುವ ಕಠಿಣ ಧರ್ಮಯಾಥಾಸ್ಥಿತಿತ್ವವನ್ನೂ ಎಲ್ಲಾ ವೈಜ್ಞಾನಿಕ ಕ್ಷೇತ್ರಗಳಲ್ಲೂ ಸರ್ವ ಪ್ರಾಧಾನ್ಯದಿಂದ ಪ್ರತಿಷ್ಠಾಪಿಸಿತು.

ಈ ಪರಿಸ್ಥಿತಿ ಇಂದು ಸಹ ಮುಂದುವರಿಯುತ್ತಿದೆಯೇ? ವೈಜ್ಞಾನಿಕ ಸಂಶೋಧನೆಗಳನ್ನೂ ಅನ್ವೇಷಣೆಗಳನ್ನೂ ನಾವಿಂದು ಪ್ರೋತ್ಸಾಹಿಸುತ್ತಿದ್ದೇವೆಯೇ?

**(ಸಶೇಷ)**


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ

ಪುಟಗಳು : 48 ಬೆಲೆ : **ಒಂದು ರೂಪಾಯಿ** ಅಂಚೆ ವೆಚ್ಚ : **ಉಚಿತ**

ಬರೆಯಿರಿ : Secretary, Ahmadiyya Muslim Mission,
10-23-1008, Ansari Road, Bunder, Mangalore–575 001.

ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ – 9

# ದಿವ್ಯ ಬೋಧನೆಗಳೂ ದೃಷ್ಟಾಂತಗಳೂ

★ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಆ ವೇಳೆಯಲ್ಲಿ ಕೈಸರ್ ಮತ್ತು ಕಿಸ್ರಾ* ಚಕ್ರವರ್ತಿಗಳೊಳಗೆ ಭಯಂಕರವಾದೊಂದು ಯುದ್ಧವುಂಟಾಯಿತು. ಕಿಸ್ರಾ ಚಕ್ರವರ್ತಿಗೆ ಈ ಯುದ್ಧದಲ್ಲಿ ಜಯವಾಯಿತು. ಇರಾನ್ ಸೇನೆಯು ಸಿರಿಯಾ ಮತ್ತು ಪೆಲಸ್ತೀನಿನೊಳಗೆ ಮುನ್ನುಗ್ಗಿ ಜೆರುಸಲೇಮನ್ನು ಧ್ವಂಸಗೊಳಿಸಿ ಈಜಿಪ್ಟ್ ಮತ್ತು ಏಶ್ಯಾಮೈನರ್ ವರೆಗೂ ತಲಪಿತು. ಬಾಸ್‌ಫಿರಸಿನ ಸಮೀಪ ಕೊನ್‌ಸ್ಟಾಂಟಿನೋಪ್ಲ್‌ಗೆ ಕೇವಲ 10 ಮೈಲು ದೂರದಲ್ಲಿ ಇರಾನ್ ಸೇನೆಯು ಡೇರೆ ಹೊಡೆಯಿತು. ಇರಾನಿಗೆ ದೊರಕಿದ ಈ ವಿಜಯದಿಂದ ಮಕ್ಕಾ ನಿವಾಸಿಗಳು ಸಂತುಷ್ಟರಾಗಿದ್ದರು. ಆಹ್ಲಾದಭರಿತರಾಗಿ ವಿಜಯವನ್ನು ಕೊಂಡಾಡುತ್ತಾ ಅವರು ಈ ಯುದ್ಧದ ಫಲಿತಾಂಶವನ್ನು ದೈವೇಚ್ಛೆ ಎಂದು ವ್ಯಾಖ್ಯಾನಿಸಿದರು. ಈಗ ದೇವರು ತನ್ನ ತೀರ್ಮಾನವನ್ನು ನೀಡಿರುತ್ತಾನೆ. ವಿಗ್ರಹಾರಾಧಕರಾದ ಇರಾನಿಯರು ಗ್ರಂಥಾನುಸಾರಿಗಳಾದ ಕ್ರೈಸ್ತ ಜನರ ಮೇಲೆ ವಿಜಯವನ್ನು ಸಾಧಿಸಿದ್ದಾರೆ ಎಂಬುದು ಅವರ ವಾದವಾಗಿತ್ತು.

ಆಗ ಹಝ್ರತ್ ಮುಹಮ್ಮದ್ ಪೈಗಂಬರರಿಗೆ ಈ ರೀತಿ ದೈವವಾಣಿಯುಂಟಾಯಿತು:

ಅರೇಬಿಯಾದ ಸಮೀಪ ರಾಜ್ಯದಲ್ಲಿ ರೋಂ ಸೈನಿಕರು ಪರಾಜಿತರಾಗಿದ್ದಾರೆ. ಆದರೆ ಈ ಪರಾಭವದ ನಂತರ ಕೆಲವೇ ವರ್ಷಗಳೊಳಗೆ ಪುನಃ ಅವರು ವಿಜಯಿಗಳಾಗುವರು. ಭೂಮಿಯ ಮೇಲೆ ಮೊದಲು ಕೂಡ ಅಲ್ಲಾಹನ ಅಧಿಕಾರ ಜಾರಿಯಲ್ಲಿತ್ತು; ಮುಂದೆಯೂ ಅವನದೇ ಅಧಿಕಾರವಿರುವುದು. ಆ ವಿಜಯದ ದಿನಗಳು ಅಲ್ಲಾಹನ ಸಹಾಯದಿಂದ ವಿಶ್ವಾಸಿಗಳಿಗೆ ಹರ್ಷದಾಯಕವಾಗಲಿವೆ. ಅಲ್ಲಾಹನು ತಾನಿಚ್ಛಿಸುವವರಿಗೆ ಸಹಾಯ ನೀಡುತ್ತಾನೆ. ಆವನು ಪ್ರತಾಪವಂತನೂ ದಯಾಸಾಗರನೂ ಆಗಿರುವನು. ಇದು ಅಲ್ಲಾಹನ ವಾಗ್ದಾನವಾಗಿದೆ. ಅವನು ಎಂದೂ ವಾಗ್ದಾನ ಭಂಗ ಮಾಡುವವನಲ್ಲ. ಆದರೆ, ಜನರಲ್ಲಿ ಹೆಚ್ಚಿನವರೂ ಅಲ್ಲಾಹನ ಸರ್ವಶಕ್ತಿಯ ಬಗ್ಗೆ ಅಜ್ಞಾನಿಗಳಾಗಿರುವರು" (ಪವಿತ್ರ ಖುರ್‌ಆನ್ 30 : 3-7)

ಕೇವಲ ಕೆಲವೇ ವರ್ಷಗಳಲ್ಲಿ ಈ ಭವಿಷ್ಯವಾಣಿಯು ಪೂರ್ತಿಯಾಯಿತು. ರೋಮನರು ಇರಾನಿಯರನ್ನು ಸೋಲಿಸಿ ತಮ್ಮ ನಾಡನ್ನು ಮುಕ್ತಗೊಳಿಸಿದರು. "ಆ ದಿನಗಳು ಅಲ್ಲಾಹನ ಸಹಾಯದಿಂದ ವಿಶ್ವಾಸಿಗಳಿಗೆ ಹರ್ಷದಾಯಕವಾಗಲಿವೆ" ಎಂಬ ಭವಿಷ್ಯವಾಣಿಯ ಮಾತು ಸಹ ಪೂರ್ತಿಯಾಯಿತು. ಇಸ್ಲಾಮಿನ ಸಂದೇಶವು ಮಕ್ಕಾದಲ್ಲೆಲ್ಲಾ ಹರಡಲಿಕ್ಕೂ ಆದರಿಸಲ್ಪಡಲಿಕ್ಕೂ ಪ್ರಾರಂಭವಾಯಿತು. ಮುಸ್ಲಿಮರನ್ನು ಅಲಕ್ಷಿಸಬೇಕೆಂದೂ ಅವರ ಪ್ರಬೋಧನೆಗಳಿಗೆ ಕಿವಿಗೊಡಬಾರದೆಂದೂ ಬದಲಾಗಿ ಅವರ ವಿರುದ್ಧ ಹಿಂಸಾಚಾರ ಕೈಗೊಳ್ಳಬೇಕೆಂದೂ ಜನರನ್ನು ಪ್ರೇರೇಪಿಸುತ್ತಾ ತಾವು ಇಸ್ಲಾಮನ್ನು ಮುಗಿಸಿಬಿಟ್ಟಿದ್ದೇವೆಂದು ಮಕ್ಕಾದ ವಿರೋಧಿ ಜನರು ಕನಸುಕಾಣುತ್ತಿದ್ದ ಅದೇ ವೇಳೆಯಲ್ಲೇ ಅಲ್ಲಾಹನ ವಚನಗಳು ಮುಸ್ಲಿಮರ ವಿಜಯದ ಕುರಿತು ಮೇಲಿಂದ ಮೇಲೆ ಶುಭವಾರ್ತೆಗಳನ್ನು ನೀಡುತ್ತಿದ್ದುವು. ಮಕ್ಕಾದವರ ನಾಶವೂ ಸನ್ನಿಹಿತವಾಗಿದೆಯೆಂದು ಪೈಗಂಬರರಿಗೆ ದೈವವಾಣಿಯುಂಟಾಯಿತು. ಹಝ್ರತ್ ಮುಹಮ್ಮದ್ ಪೈಗಂಬರರು ಈ ದಿವ್ಯವಾಣಿಯನ್ನು ಶಕ್ತಿಯುತವಾಗಿ ಘೋಷಿಸಿದರು:

* ಕೈಸರ್–ರೋಂ ಸಾಮ್ರಾಜ್ಯದ ರಾಜ
ಕಿಸ್ರಾ–ಇರಾನ್ ಸಾಮ್ರಾಜ್ಯದ ರಾಜ

"ಮಕ್ಕಾ ನಿವಾಸಿಗಳು ಹೇಳುತ್ತಾರೆ : 'ಈ ಪ್ರವಾದಿ (ಅಂದರೆ ಮುಹಮ್ಮದ್) ದೇವನ ಬಳಿಯಿಂದ ನಮಗಾಗಿ ಒಂದು ದೃಷ್ಟಾಂತವನ್ನೇಕೆ ತರುವುದಿಲ್ಲ?' ಎಂದು. ಏನು, ಪೂರ್ವ ಪ್ರವಾದಿಗಳು ಇವರ ಕುರಿತು ನೀಡಿರುವ ಭವಿಷ್ಯವಾಣಿಗಳು (ಪೂರ್ವಿಕ ಮತ ಗ್ರಂಥಗಳಲ್ಲಿ ಈ ಪೈಗಂಬರರ ಕುರಿತು ಉಲ್ಲೇಖವಿರುವ ಪ್ರವಾದನಗಳು) ಇವರಿಗೆ ಪರ್ಯಾಪ್ತವಾದ ದೃಷ್ಟಾಂತಗಳಲ್ಲವೇ ? ಈ ಪ್ರವಾದಿ ಬಂದು ದಿವ್ಯ ಸಂದೇಶವನ್ನು ಸಾರುವುದಕ್ಕೆ ಮೊದಲೇ ನಾವು ಮಕ್ಕಾದ ಜನರಿಗೆ ಶಿಕ್ಷೆ ನೀಡಿ ಅವರನ್ನು ನಾಶಗೊಳಿಸಿದ್ದರೆ, ಅವರು ಹೇಳುತ್ತಿದ್ದರು: "ಹೇ ನಮ್ಮ ರಕ್ಷಕನೇ, ನಾವು ಈ ರೀತಿ ಅಪಮಾನಿತರಾಗಿ ನಾಶವಾಗುವ ಮೊದಲೇ ನಿನ್ನ ಆಜ್ಞೆಗಳನ್ನು ಅನುಸರಿಸಲು ಒಂದು ಅವಕಾಶವನ್ನು ಕಲ್ಪಿಸಿಕೊಟ್ಟು ನಮ್ಮ ಬಳಿ ಒಬ್ಬ ಪ್ರವಾದಿಯನ್ನೇಕೆ ಕಳುಹಿಸಿಕೊಡಲಿಲ್ಲ' ಎಂದು. ಅವರೊಡನೆ ಹೇಳಿರಿ – ಪ್ರತಿಯೊಬ್ಬರಿಗೂ ಅವರವರ ಸಮಯವನ್ನು ಕಾಯಲೇಬೇಕಾಗುತ್ತದೆ. ನೀವು ಕೂಡ ನಿಮ್ಮ ವಿಧಿದಿನವನ್ನು ಕಾಯುತ್ತಿರಿ; ದೇವರಿಂದ ಮಾರ್ಗದರ್ಶನ ಪಡೆದವರೂ ಸತ್ಯಪಥದಲ್ಲಿ ಚಲಿಸುವವರೂ ಯಾರೆಂಬುದು ಆಗ ನಿಮಗೆ ಮನವರಿಕೆಯಾಗುವುದು."

(20 : 134–136)

ಇವರು ದೇವನಿಯೋಗಿತ ಪ್ರವಾದಿಯಾಗಿದ್ದರೆ ತನ್ನ ಸತ್ಯತೆಗೆ ನಿದರ್ಶನಗಳನ್ನು (ಪವಾಡಗಳನ್ನು) ಯಾಕೆ ತೋರಿಸುವುದಿಲ್ಲ ಎಂಬುದು ಮಕ್ಕಾ ನಿವಾಸಿಗಳ ಪ್ರಶ್ನೆಯಾಗಿತ್ತು. ಪೂರ್ವ ಮತಗ್ರಂಥಗಳಲ್ಲಿ ಇಸ್ಲಾಮಿನ ಕುರಿತು ಹಾಗೂ ಮುಹಮ್ಮದ್ ಪೈಗಂಬರರ ಕುರಿತು ಸಾಕಷ್ಟು ಪ್ರವಾದನಗಳಿವೆಯೆಂದೂ ಅವು ಮುಹಮ್ಮದ್ ಪೈಗಂಬರರ ಸತ್ಯತೆಗೆ ಪರ್ಯಾಪ್ತವಾದ ನಿದರ್ಶನಗಳೆಂದೂ ಅವರಿಗೆ ಮೇಲಿನ ವಚನಗಳಲ್ಲಿ ಉತ್ತರ ನೀಡಲಾಗಿದೆ. ಇಸ್ಲಾಮಿನ ಸಂದೇಶವನ್ನು ವಿವರಿಸಿ ಕೊಡುವ ಮೊದಲೇ ಮಕ್ಕಾ ನಿವಾಸಿಗಳನ್ನು ಶಿಕ್ಷಿಸುವುದಾದರೆ, ದಿವ್ಯದೃಷ್ಟಾಂತಗಳ ಕುರಿತು ಪರ್ಯಾಲೋಚಿಸಲು ತಮಗೆ ಅವಕಾಶ ನೀಡಲಾಗಿಲ್ಲವೆಂದು ಅವರು ಆಕ್ಷೇಪಿಸುವಂತಾಗುತ್ತಿತ್ತು. ಆದುದರಿಂದ ಮಕ್ಕಾ ನಿವಾಸಿಗಳು ತಮ್ಮ ಮೇಲೆ ನ್ಯಾಯ ಪೂರ್ತಿಯಾಗುವ ವರೆಗೆ ಸ್ವಲ್ಪ ಕಾಯಬೇಕು !

## ನಿದರ್ಶನಗಳು ಪುನಃ

ಪೈಗಂಬರರಿಗೆ ಪ್ರತಿದಿನವೂ ದಿವ್ಯ ಬೋಧನೆಗಳು ಲಭಿಸುತ್ತಿದ್ದವು. ಇಸ್ಲಾಮಿನ ಅಭಿವೃದ್ಧಿಯನ್ನೂ ವಿರೋಧಿಗಳ ಪರಾಭವವನ್ನೂ ಕುರಿತು ಪರಮಾತ್ಮನು ಅವರಿಗೆ ನಿರಂತರವಾಗಿ ತಿಳಿಸುತ್ತಿದ್ದನು. ಮಕ್ಕಾ ನಿವಾಸಿಗಳಾದರೆ, ಒಂದೆಡೆ ತಮ್ಮ ಅಧಿಕಾರಬಲವನ್ನೂ ಸಾಮರ್ಥ್ಯವನ್ನೂ ನೋಡುತ್ತಿದ್ದರು; ಇನ್ನೊಂದೆಡೆ ಪೈಗಂಬರರ ಮತ್ತು ಅವರ ಅನುಯಾಯಿಗಳ ಬಲಹೀನತೆಯನ್ನೂ ದರಿದ್ರಾವಸ್ಥೆಯನ್ನೂ ಕಾಣುತ್ತಿದ್ದರು. ಸನ್ನಿವೇಶ ಹೀಗಿರುತ್ತಾ ಮುಹಮ್ಮದ್ ಪೈಗಂಬರರಿಗೆ ದೇವರಿಂದ ದಿನಂಪ್ರತಿ ಲಭಿಸುತ್ತಿದ್ದ ದಿವ್ಯವಾಣಿಗಳಲ್ಲಿ ದಿವ್ಯಸಹಾಯದ ಕುರಿತೂ ಇಸ್ಲಾಮಿನ ವಿಜಯದ ಕುರಿತೂ ವಾಗ್ದಾನಗಳು ಅಡಕವಾಗಿರುವುದು ಅವರನ್ನು ವಿಸ್ಮಯಗೊಳಿಸದಿರಲಿಲ್ಲ. ಇದು ಹೇಗೆ ಸಂಭವಿಸೀತು ? ಒಂದೋ ನಾವು ಹುಚ್ಚರು; ಇಲ್ಲವೇ ಮುಹಮ್ಮದನಿಗೆ ಹುಚ್ಚು ಹಿಡಿದಿದೆ. ನಮ್ಮ ಅಕ್ರಮಕ್ಕೂ ದಬ್ಬಾಳಿಕೆಗೂ ಸೋತು ನಿರಾಶರಾಗಿ ಬೆರಳೆಣಿಕೆಯ ಈ ನವ ವಿಶ್ವಾಸಿಗಳು ತಮ್ಮ ವಿಶ್ವಾಸದಿಂದ ಹಿಂದಿರುಗುವರೆಂದು ವಿರೋಧಿಗಳು ಲೆಕ್ಕಹಾಕುತ್ತಿದ್ದರು. ಪೈಗಂಬರರಿಗೂ ಅವರ ನಿಕಟ ಶಿಷ್ಯರಿಗೂ ಕೂಡ ಈ ಭವಿಷ್ಯವಾಣಿಗಳ ಬಗ್ಗೆ ಸಂದೇಹ ತಲೆದೋರಬಹುದೆಂದು ಅವರು ನಿರೀಕ್ಷಿಸುತ್ತಿದ್ದರು. ಆದರೆ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಅಲ್ಲಾಹನ ವಚನಗಳನ್ನು ಈ ರೀತಿ ಘೋಷಿಸುತ್ತಾರೆ:

"ಎಲೈ ಮಕ್ಕಾ ನಿವಾಸಿಗಳೇ, ನಿಮ್ಮದು ತಪ್ಪು ಗ್ರಹಿಕೆಯಾಗಿದೆ. ನಿಮಗೆ ಪ್ರತ್ಯಕ್ಷ ಗೋಚರಿಸುತ್ತಿರುವುದನ್ನೂ ಹಾಗೂ ಇನ್ನೂ ನಿಮ್ಮ ದೃಷ್ಟಿಯಿಂದ ಅಗೋಚರವಾಗಿರುವುದನ್ನೂ ಆಣೆಯಿಟ್ಟು ನಾನು ಹೇಳುತ್ತೇನೆ– ನಿಸ್ಸಂದೇಹವಾಗಿಯೂ ಈ ಖುರ್‌ಆನ್ ವಚನಗಳನ್ನು ಒಬ್ಬ ಪ್ರತಿಷ್ಠಿತ ಸಂದೇಶವಾಹಕನ ಮಾತುಗಳ ಮೂಲಕವಾಗಿ ನಿಮಗೆ ಕೇಳಿಸಲಾಗುತ್ತಿದೆ.

ಇದು ಒಬ್ಬ ಕವಿಯ ಮಾತುಗಳಲ್ಲ. ನಿಮ್ಮ ಹೃದಯಗಳಲ್ಲಿ ಬಹಳ ಕಡಿಮೆ ವಿಶ್ವಾಸವಿದೆ. ಇದು ಯಾವನೇ ಕಣಿಗಾರನ ಊಹಾಪೋಹ ವಿಚಾರಗಳೂ ಅಲ್ಲ. ಆದರೂ ಕೂಡ ನೀವು ಬಹಳ ಸ್ವಲ್ಪವೇ ಗ್ರಹಿಸಿಕೊಳ್ಳುವವರಾಗಿದ್ದೀರಿ. ಇದು (ಅಂದರೆ ಪವಿತ್ರ ಖುರ್‌ಆನ್) ಸರ್ವಜಗತ್ತಿನ ಸೃಷ್ಟಿಕರ್ತನಾದ ಪರಮಾತ್ಮನ ಕಡೆಯಿಂದ ಅವತೀರ್ಣಗೊಳಿಸಲ್ಪಟ್ಟಿದ್ದಾಗಿದೆ. ಸರ್ವಲೋಕಗಳ ಪ್ರಭುವಾದ ನಾವು ನಿಮ್ಮೊಡನೆ ಹೇಳುವುದೇನೆಂದರೆ– ಈತನು (ಮುಹಮ್ಮದ್ ಪೈಗಂಬರ್) ಒಂದೇ ಒಂದು ವಚನವನ್ನಾದರೂ ನಮ್ಮಿಂದ ಅಧಿಕಾರಹೊಂದದೆ ಸುಳ್ಳು ಸುಳ್ಳಾಗಿ ನಮ್ಮ ಮೇಲೆ ಆರೋಪಿಸುತ್ತಿದ್ದರೆ (ಅಂದರೆ ತನಗೆ ದಿವ್ಯಬೋಧನೆಗಳು ಲಭಿಸುತ್ತಿರುವುದಾಗಿ ಪೈಗಂಬರರು ಹೇಳುವ ಮಾತುಗಳು ಸುಳ್ಳಾಗಿರುತ್ತಿದ್ದರೆ) ಇವನನ್ನು ನಾವು ಬಲಗೈಯಿಂದ ಹಿಡಿದು ಈತನ ಜೀವನಾಡಿಯನ್ನು ಕತ್ತರಿಸಿಬಿಡುತ್ತಿದ್ದೆವು. ಆಗ ನೀವೆಲ್ಲರೂ ಒಟ್ಟು ಸೇರಿ ಇವನನ್ನು ಉಳಿಸಲು ಪ್ರಯತ್ನಿಸಿದರೂ ನಮ್ಮಿಂದ ಈತನನ್ನು ಪಾರುಮಾಡಲು ನಿಮಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ತಿಳಿದುಕೊಳ್ಳಿರಿ, ಈ ಖುರ್‌ಆನ್ ದೇವಭಯವಿರುವವರಿಗೆ ಒಂದು ಉಪದೇಶ ಗ್ರಂಥವಾಗಿದೆ. ಈ ಸಂದೇಶವನ್ನು ಸುಳ್ಳೆಂದು ತಿಳಿಯುವವರು ಕೂಡ ನಿಮ್ಮೆಡೆಯಲ್ಲಿದ್ದಾರೆಂಬುದನ್ನು ನಾವು ಬಲ್ಲೆವು. ಆದರೆ. ಸುಳ್ಳಾಗಿಸುವವರ ಮನದಲ್ಲಿ ಈ ಪವಿತ್ರ ವಚನಗಳು ನಿರಾಶೆಯನ್ನುಂಟು ಮಾಡುತ್ತಿವೆಯೆಂಬುದನ್ನೂ 'ಈ ದಿವ್ಯ ಗ್ರಂಥವು ನಮ್ಮದಾಗುತ್ತಿದ್ದರೆ' ಎಂದು ಅವರು ಆಶೆಪಡುತ್ತಿರುವುದಾಗಿಯೂ ಕೂಡ ನಾವು ತಿಳಿದಿದ್ದೇವೆ. ತಿಳಿದುಕೊಳ್ಳಿರಿ, ಇದು ಪರಮಾತ್ಮನ ಕಡೆಯಿಂದಿರುವ ಸತ್ಯ ಸಂದೇಶವಾಗಿದೆ. ಈ ಖುರ್‌ಆನಿನಲ್ಲಿ ಏನೇನು ಹೇಳಲ್ಪಟ್ಟಿರುವುದೋ ಅವೆಲ್ಲವೂ ಅಕ್ಷರಶಃ ಈಡೇರಲಿವೆ. ಆದುದರಿಂದ ಎಲೈ ಮುಹಮ್ಮದ್. ಈ ಜನರ ವಿರೋಧವನ್ನು ಪರಿಗಣಿಸಬೇಡ. ಮಹಿಮಾವಂತನಾದ ನಿನ್ನ ಪ್ರಭುವಿನ ಸ್ತುತಿ ಕೀರ್ತನೆಗಳನ್ನು ಮಾಡುತ್ತಾ ಮುಂದುವರಿ."

(68 : 38-53)

ಅವಿಶ್ವಾಸಿಗಳ ಸಕಲ ವ್ಯಾಮೋಹಗಳನ್ನೂ ಧ್ವಂಸಗೊಳಿಸಲಾಗುವುದೆಂದು ಮೇಲಿನ ವಚನಗಳಲ್ಲಿ ಮುನ್ನೆಚ್ಚರಿಕೆ ನೀಡಲಾಗಿದೆ. ಪೈಗಂಬರರು ಓರ್ವ ಕವಿಯಲ್ಲ. ಜ್ಯೋತಿಷಿಯೂ ಅಲ್ಲ. ಕಪಟವಾದಿಯೂ ಅಲ್ಲ. ಅವರು ಪರಮಾತ್ಮನ ಸತ್ಯ ಸಂದೇಶವಾಹಕರಾಗಿದ್ದಾರೆ. ಪವಿತ್ರ ಖುರ್‌ಆನ್ ಭಯಭಕ್ತಿಯಿರುವವರಿಗೆ ಮಾರ್ಗದರ್ಶನ ನೀಡುವ ಒಂದು ದಿವ್ಯಗ್ರಂಥ. ಇದನ್ನು ನಿರಾಕರಿಸುವವರೂ ಇದ್ದಾರೆಂಬುದು ನಿಜ. ಅಂತೆಯೇ ರಹಸ್ಯವಾಗಿ ಅದನ್ನು ಆದರಿಸುವವರೂ ಇದ್ದಾರೆ. ಅಂತಹವರು ಅದರ ತತ್ತೋಪದೇಶಗಳಲ್ಲೂ ಅದರ ಸತ್ಯತೆಯಲ್ಲೂ ವಿಶ್ವಾಸವುಳ್ಳವರಾಗಿರುವರು. ಖುರ್‌ಆನಿನಲ್ಲಿ ಅಡಕವಾಗಿರುವ ಎಲ್ಲಾ ಭವಿಷ್ಯವಾಣಿಗಳೂ ಪೂರ್ತಿಯಾಗಿಯೇ ತೀರುವುವು. ಎಲ್ಲಾ ವಿರೋಧಗಳನ್ನೂ ಬಹಿಷ್ಕಾರವನ್ನೂ ಅವಗಣಿಸಿ ಮಹಾಮಹಿಮನಾದ ಅಲ್ಲಾಹನ ಮಹತ್ವವನ್ನು ಉದ್ಘೋಷಿಸಲು ಪೈಗಂಬರರು ಮೇಲಿನ ವಚನಗಳ ಮೂಲಕ ನಿರ್ದೇಶಿಸಲ್ಪಟ್ಟಿದ್ದಾರೆ.

ಹೀಗಿರಲಾಗಿ ಮೂರನೆಯ ಹಜ್ ವೇಳೆಯೂ ಸಮೀಪಿಸಿತು. ಮದೀನದಿಂದ ಬಂದ ಯಾತ್ರಾರ್ಥಿಗಳಲ್ಲಿ ದೊಡ್ಡದೊಂದು ಭಾಗವು ಮುಸ್ಲಿಮರದಾಗಿತ್ತು. ಮಕ್ಕಾದಲ್ಲಿ ಬಂದಿಳಿದ ಈ ಮುಸ್ಲಿಮರು ಅಲ್ಲಿನವರ ವಿರೋಧದ ಕಾರಣದಿಂದ ಪೈಗಂಬರರನ್ನು ರಹಸ್ಯವಾಗಿ ಭೇಟಿಯಾಗಲು ಬಯಸಿದರು. ಈಗಾಗಲೇ ಹಝ್ರತ್ ಮುಹಮ್ಮದ್ ಪೈಗಂಬರರ ಮನಸ್ಸಿನಲ್ಲಿ ಮದೀನಕ್ಕೆ 'ಹಿಜ್ರತ್' ಹೋಗಬೇಕೆಂಬುದೇ ದೈವೇಚ್ಛೆ ಇರಬೇಕೆಂದು ಬಲವಾದ ಅಭಿಪ್ರಾಯಮೂಡಿತ್ತು. ಅವರು ತನ್ನ ಈ ಉದ್ದೇಶವನ್ನು ಕೆಲವು ನಿಕಟ ಸಂಬಂಧಿಕರೊಡನೆ ಹೇಳಿದರು. ಆದರೆ, ಅವರಾರೂ ಪೈಗಂಬರರ ಈ ಆಲೋಚನೆಯನ್ನು ಒಪ್ಪಲಿಲ್ಲ. ಮಕ್ಕಾದಲ್ಲಿ ಕಠಿಣವಾದ ವಿರೋಧವಿದೆಯೆಂಬುದಂತೂ ನಿಜ. ಆದರೆ ಇಲ್ಲಿ ಪೈಗಂಬರರ ರಕ್ತಸಂಬಂಧಿಗಳಾದ ಅನೇಕ ಪ್ರಭಾವಶಾಲಿ ವ್ಯಕ್ತಿಗಳಿದ್ದಾರೆ. ದೂರದ ಮದೀನದಲ್ಲಿ ಏನು ಸಂಭವಿಸಲಿದೆಯೆಂದು ಯಾರು ಬಲ್ಲರು ? ಒಂದು ವೇಳೆ ಮಕ್ಕಾದಲ್ಲಿರುವಂತೆಯೇ ಅಲ್ಲಿ ಕೂಡ ವಿರೋಧದ ಅಲೆಯೇ

ಎದ್ದರೆ ಇಲ್ಲಿರುವ ನಿಮ್ಮ ಬಂಧುಗಳು ನಿಮ್ಮ ಸಹಾಯಕ್ಕೆ ಬರಲು ಸಾಧ್ಯವಿದೆಯೇ ? ಎಂಬುದು ಅವರ ಸಂದೇಹ ವಾಗಿತ್ತು. ಆದರೆ, ಮದೀನದಲ್ಲಿ ಆಶ್ರಯ ಪಡೆಯ ಬೇಕಾದುದು ದೈವವಿಧಿಯೆಂದು ತಿಳಿದಿದ್ದ ಪೈಗಂಬರರು ಅವರ ಮಾತುಗಳನ್ನು ಸ್ವೀಕರಿಸಲಿಲ್ಲ. ಮದೀನಕ್ಕೆ ಹೋಗಿ ನೆಲೆಸುವುದೆಂದೇ ತೀರ್ಮಾನಿಸಿದರು.

## ಅಖಬದ ಪ್ರತಿಜ್ಞೆ

ಮಧ್ಯರಾತ್ರಿಯ ನಂತರ 'ಅಖಬ' ಕಣಿವೆ ಯಲ್ಲಿ ಪೈಗಂಬರರು ಮತ್ತು ಮದೀನದ ನವಮುಸ್ಲಿಂ ಯಾತ್ರಿಕರು ಪುನಃ ಭೇಟಿಯಾದರು. ಆಗ ಪೈಗಂಬರರ ಜತೆ ಅವರ ಚಿಕ್ಕಪ್ಪ ಅಬ್ಬಾಸ್ ಎಂಬವರೂ ಇದ್ದರು. ಮದೀನದಿಂದ ಬಂದಿದ್ದ ಮುಸ್ಲಿಂ ವಿಶ್ವಾಸಿ ಗಳ ಸಂಖ್ಯೆ 73 ಆಗಿತ್ತು.* ಅವರಲ್ಲಿ 62 ಮಂದಿ ಖಸ್‌ರಜ್ ಗೋತ್ರದವರೂ 11 ಔಸ್ ಗೋತ್ರದವರೂ ಆಗಿದ್ದರು. ಆ ತಂಡದಲ್ಲಿದ್ದ ಇಬ್ಬರು ಸ್ತ್ರೀಯರಲ್ಲಿ 'ಬನೂ ನಜ್ಜಾರ್' ಪಂಗಡದ ಉಮ್ಮು ಅಮ್ಮಾರ ಒಬ್ಬರು. ಮುಸ್‌ಅಬ್‌ರವರ ಧರ್ಮಪ್ರಚಾರದ ಮೂಲಕ ಈ ಗೋತ್ರದ ವರೆಗೂ ಇಸ್ಲಾಮಿನ ಸಂದೇ ಶವು ಆಗಲೇ ತಲಪಿತ್ತು. ಈ ಜನರ ಸತ್ಯವಿಶ್ವಾಸವು ಸುದೃಢವೂ ಅಚಂಚಲವೂ ಆಗಿತ್ತು. ಇವರು ಇಸ್ಲಾಂ ಧರ್ಮದ ಆಧಾರ ಸ್ತಂಭಗಳಂತೆ ಶೋಭಿಸಿದರೆಂದು ನಂತರದ ಸಂಭವಗಳು ಸಾಬೀತುಪಡಿಸಿವೆ. ಪೈಗಂಬರರ ಸನ್ನಿಧಿಯಲ್ಲಿ ಆ ಯಾತ್ರಿಕ ಸಂಘದೊಡನೆ ಆಗ ಹಾಜ ರಿದ್ದ ಉಮ್ಮು ಅಮ್ಮಾರ ಎಂಬ ಮಹಿಳಾಮಣಿಯು ತನ್ನ ಸಂತತಿಗಳಿಗೆ ಇಸ್ಲಾಂ ಧರ್ಮದ ಬಗ್ಗೆ ಎಷ್ಟೊಂದು ಪ್ರೀತಿ ವಾತ್ಸಲ್ಯದ ಶಿಕ್ಷಣವನ್ನು ನೀಡಿದ್ದರೆಂದರೆ, ಅವರ ಮಗ ಹಬೀಬ್‌ರ ಕುರಿತಾದ ಒಂದು ಚಾರಿತ್ರಿಕ ಘಟನೆ ಈ ರೀತಿಯಿದೆ: ಪೈಗಂಬರರ ಮರಣಾನಂತರ ಮುಸೈಲಿಮ ಕದ್ದಾಬ್‌ನೊಡನೆ ಘಟಿಸಿದ ಒಂದು ಯುದ್ಧದಲ್ಲಿ ಹಬೀಬ್ ಅವರು ಸೆರೆಹಿಡಿಯಲ್ಪಟ್ಟರು. ಅವರನ್ನು ಬಂಧಿಸಿ ಕಪಟವಾದಿ ಮುಸೈಲಿಮನ ಸನ್ನಿಧಿ ಯಲ್ಲಿ ಹಾಜರು ಪಡಿಸಲಾಯಿತು. ಹಬೀಬರನ್ನು ಸತ್ಯ ವಿಶ್ವಾಸದಿಂದ ಬೇರ್ಪಡಿಸಲು ಮುಸೈಲಿಮ ಪ್ರಯತ್ನಿಸಿದ.

* ಇಬ್ನು ಹಿಶಾಂ ಭಾಗ-1; ಪುಟ-154

"ಮುಹಮ್ಮದ್ ಅಲ್ಲಾಹನ ಸಂದೇಶವಾಹಕ ರೆಂದು ನೀನು ಸಾಕ್ಷಿ ಹೇಳುವೆಯಾ ?" ಹಬೀಬ್‌ರೊಡನೆ ಮುಸೈಲಿಮನ ಪ್ರಶ್ನೆ.

"ಹೌದು" ಹಬೀಬ್ ಉತ್ತರಿಸಿದರು.

"ನಾನೂಒಬ್ಬ ಸಂದೇಶವಾಹನೆಂದು ನಂಬುವೆಯಾ?"

"ಇಲ್ಲ" ಹಬೀಬ್ ದೃಢವಾಗಿ ಉತ್ತರಿಸಿದರು.

ಅವರ ಒಂದು ಕಾಲನ್ನು ತುಂಡರಿಸಿ ಬಿಡಲು ಮುಸೈಲಿಮನ ಆಜ್ಞೆಯಾಯಿತು. ಪುನಃ ಮುಸೈಲಿಮ ಪ್ರಶ್ನಿಸಿದ:

"ಮುಹಮ್ಮದ್ ಅಲ್ಲಾಹನ ಪ್ರವಾದಿಯೆಂದು ಈಗಲೂ ನಂಬುವೆಯಾ ?"

"ಹೌದು !" ಮತ್ತೆ ಅದೇ ಉತ್ತರ.

"ನಾನೊಬ್ಬ ಪ್ರವಾದಿಯೆಂದು ನಂಬುವೆಯಾ ?"

"ಸರ್ವಥಾ ಇಲ್ಲ"

ಅವರ ಮತ್ತೊಂದು ಕಾಲನ್ನೂ ಕತ್ತರಿಸಿಹಾಕಲು ಮುಸೈಲಿಮ ಆಜ್ಞಾಪಿಸಿದ. ಹಝ್ರತ್ ಹಬೀಬ್ (ರ) ಅವರ ಶರೀರದಿಂದ ಹೀಗೆ ಒಂದೊಂದು ಅಂಗಾಂಗ ಗಳನ್ನೂ ಕಡಿದು ಬೇರ್ಪಡಿಸಲಾಯಿತು. ಪ್ರತಿಯೊಂದು ಅಂಗವನ್ನು ಕತ್ತರಿಸುವಾಗಲೂ ಮೇಲಿನ ಪ್ರಶ್ನೆಗಳನ್ನು ಮುಸೈಲಿಮ ಅವರೊಡನೆ ಕೇಳುತ್ತಿದ್ದ. ಆ ಧೀರ ವಿಶ್ವಾಸಿಯ ಉತ್ತರದಲ್ಲಿ ಯಾವುದೇ ಬದಲಾವಣೆಯಿರ ಲಿಲ್ಲ. ಈ ರೀತಿ ತುಂಡುತುಂಡಾಗಿ ಕಡಿಯಲ್ಪಟ್ಟು ಹಬೀಬ್ (ರ) ತನ್ನ ದೃಢವಿಶ್ವಾಸವನ್ನು ಘೋಷಿಸುತ್ತಾ ದೈವಾಧೀನರಾದರು ! ಅದರೊಂದಿಗೆ ಉಜ್ವಲವಾದ ಧಾರ್ಮಿಕ ವಿಶ್ವಾಸವೀರ್ಯದ ಹಾಗೂ ಮಹತ್ವಪೂರ್ಣ ತ್ಯಾಗಶೀಲತೆಯ ಒಂದು ಅವಿಸ್ಮರಣೀಯ ಮಾದರಿ ಕೂಡ ಮುಂದಿನ ಪೀಳಿಗೆಗಾಗಿ ಸಂಭಾವನೆ ನೀಡಲ್ಪ ಟ್ಟಿತು.

ಸ್ವತಃ ಉಮ್ಮು ಅಮ್ಮಾರ ಕೂಡ ಪೈಗಂಬರರ ಜತೆ ಹಲವು ಯುದ್ಧಗಳಲ್ಲಿ ಭಾಗವಹಿಸಿದ್ದರು.

ಒಟ್ಟಿನಲ್ಲಿ, ಮದೀನಾ ಮುಸ್ಲಿಮರ ಈ ಕಿರು ಸಂಘವು ಅನನ್ಯವಾದ ನಿಷ್ಠೆ ಮತ್ತು ವಿಶ್ವಾಸದಿಂದ ಕೂಡಿತ್ತು. ಆ ಜನರು ಮುಹಮ್ಮದ್ ಪೈಗಂಬರರಿಂದ

ಧನ- ಹೊನ್ನು- ಐಶ್ವರ್ಯಗಳನ್ನು ಪಡೆಯಲು ಬಂದವರಾಗಿರಲಿಲ್ಲ. ಬದಲಾಗಿ ಕೇವಲ ಸತ್ಯವಿಶ್ವಾಸವನ್ನು ಅರಸಿ ಬಂದವರಾಗಿದ್ದರು. ಅವರಿಗೆ ಅದು ಲಭ್ಯವಾಯಿತು. ಆ ವಿಶ್ವಾಸಿಗಳ ತಂಡದೊಡನೆ ಪೈಗಂಬರರ ಚಿಕ್ಕಪ್ಪ ಅಬ್ಬಾಸ್ ಈ ರೀತಿ ಹೇಳಿದರು:

"ಎಲೈ ಖಸ್‌ರಜ್ ಗೋತ್ರದವರೇ, ನನ್ನ ಈ ಪ್ರಿಯಬಂಧು ಆತನ ಸಂಬಂಧಿಕರೆಡೆಯಲ್ಲಿ ಬಹಳ ಪ್ರತಿಷ್ಠೆಯುಳ್ಳವನೂ ಮಾನ್ಯನೂ ಆಗಿರುವನು. ಈತನ ಬಂಧುಗಳು, ಅವರೆಲ್ಲರೂ ಮುಸ್ಲಿಮರಲ್ಲದಿದ್ದರೂ ಕೂಡ ಇವನಿಗೆ ಸಂರಕ್ಷಣೆ ನೀಡುತ್ತಿದ್ದರು. ಈಗ ಇವನು ನಮ್ಮನ್ನು ಬಿಟ್ಟು ನಿಮ್ಮೊಡನೆ ಬರುವ ತೀರ್ಮಾನ ಮಾಡಿರುತ್ತಾನೆ. ಎಲೈ ಖಸ್‌ರಜ್ ಗೋತ್ರದ ಜನರೇ, ಈತನು ನಿಮ್ಮ ಬಳಿ ಬಂದರೆ ಏನು ಸಂಭವಿಸೀತೆಂದು ನಿಮಗೆ ತಿಳಿದಿದೆಯಾ? ಸಂಪೂರ್ಣ ಅರಬ್ ದೇಶವು ನಿಮ್ಮ ಶತ್ರುಗಳಾಗಿ ಮಾರ್ಪಡುವುದು. ಈತನನ್ನು ಸ್ವೀಕರಿಸಿಕೊಳ್ಳುವ ಮೂಲಕ ಹಾಗೂ ಇವನ ಧರ್ಮವನ್ನು ರಕ್ಷಣೆ ಮಾಡುವಾಗ ನಿಮಗೆ ವಹಿಸಬೇಕಾಗಿ ಬರುವ ಜವಾಬ್ದಾರಿಕೆಯ ಗಂಭೀರತೆಯನ್ನೂ ಅಪಾಯವನ್ನೂ ನೀವು ಚೆನ್ನಾಗಿ ತಿಳಿದಿದ್ದರೆ ಮತ್ತು ನೀವು ಅದಕ್ಕೆ ತಯಾರಿದ್ದರೆ ಸಂತೋಷದಿಂದ ಈತನನ್ನು ಸ್ವೀಕರಿಸಿಕೊಳ್ಳಿರಿ. ಅಲ್ಲವಾದರೆ, ನೀವು ಈ ಯೋಚನೆಯನ್ನು ಕೈಬಿಡುವುದೊಳ್ಳೆಯದು.

ಆ ಮುಸ್ಲಿಂ ತಂಡದ ಮುಖಂಡ ಅಲ್‌ಬರಾಅ್ ಉತ್ತರಿಸಿದರು:

"ನಿಮ್ಮ ಮಾತುಗಳನ್ನು ನಾವು ಕೇಳಿದೆವು. ನಾವು ನಮ್ಮ ತೀರ್ಮಾನದಲ್ಲಿ ದೃಢಚಿತ್ತರಾಗಿದ್ದೇವೆ. ನಮ್ಮ ಪ್ರಾಣಗಳನ್ನೇ ನಾವು ಪೈಗಂಬರರ ಪಾದ ಚರಣಗಳಲ್ಲಿ ಅರ್ಪಿಸುವೆವು. ನಮ್ಮ ತೀರ್ಮಾನದಿಂದ ನಾವು ಹಿಂದೆ ಸರಿಯುವ ಪ್ರಶ್ನೆಯಿಲ್ಲ. ಅವರ ಇಂಗಿತ ಏನೆಂದರಿಯಲು ಕಾಯುತ್ತಿದ್ದೇವೆ. ಯಾಕೆಂದರೆ ನಾವು ಅವರ ಎಲ್ಲಾ ತೀರ್ಮಾನಗಳನ್ನೂ ಮಾನಿಸಲು ಬದ್ಧರು"

ಪೈಗಂಬರರು ಅವರಿಗೆ ಇಸ್ಲಾಮಿನ ತತ್ತ್ವೋಪದೇಶಗಳನ್ನು ಮತ್ತೊಮ್ಮೆ ವಿವರಿಸಿಕೊಟ್ಟರು. ದೇವನ ಏಕತ್ವದ ಕುರಿತು ಬೋಧಿಸಿದರು. ನಂತರ ಅವರೊಡನೆ ಈ ರೀತಿ ಹೇಳಿದರು:

"ನೀವು ಇಸ್ಲಾಂ ಧರ್ಮವನ್ನು ನಿಮ್ಮ ಮಡದಿ ಮಕ್ಕಳನ್ನು ಸಂರಕ್ಷಿಸುವಂತೆ ವಚನ ನೀಡುವಿರಾದರೆ ಮಾತ್ರ ನಾನು ನಿಮ್ಮೊಡನೆ ಬರಲು ತಯಾರಿದ್ದೇನೆ." ಪೈಗಂಬರರು ತನ್ನ ಈ ಮಾತನ್ನು ಮುಗಿಸುವ ಮೊದಲೇ ಆ 73 ಭಕ್ತಜನರ ಕಂಠಗಳೂ ಏಕಸ್ವರದಲ್ಲಿ "ನಾವು ತಯಾರಿದ್ದೇವೆ" ಎಂದು ಜೋರಾಗಿ ಹೇಳುತ್ತಾ ಪೈಗಂಬರರ ಮಾತನ್ನು ಸ್ವೀಕರಿಸಿದರು. ಆ ವೇಳೆಯಲ್ಲಿ ಅವರು ಎಷ್ಟು ಆವೇಶಭರಿತರಾಗಿದ್ದರೆಂದರೆ, ತಮ್ಮ ಆರ್ಭಟವು ಮಕ್ಕಾದ ವಿರೋಧಿಗಳಿಗೆ ಕೇಳಿಸಬಹುದೆಂಬುದನ್ನು ಕೂಡ ಅವರು ಮರೆತಿದ್ದರು. ಹಝ್ರತ್ ಅಬ್ಬಾಸ್ (ರ) ಅವರನ್ನು ಎಚ್ಚರಿಸುತ್ತಾ ಮಕ್ಕಾ ನಿವಾಸಿಗಳಿಗೆ ಕೇಳಿಸದಂತೆ ಮೆಲ್ಲನೆ ಮಾತನಾಡಲು ತಿಳಿಸಿದರು. ಆದರೆ, ಆ ವೇಳೆಗಾಗಲೇ ಅವರೆಲ್ಲಾ ನಿಷ್ಠಾವಂತ ವಿಶ್ವಾಸಿಗಳಾಗಿ ಮಾರ್ಪಟ್ಟಿದ್ದರು. ಮರಣದ ಬಗ್ಗೆ ಅವರಿಗೆ ಯಾವ ಚಿಂತೆಯೂ ಇರಲಿಲ್ಲ. ಅಬ್ಬಾಸ್‌ರವರ ಮಾತನ್ನು ಕೇಳಿ ಅವರಲ್ಲೊಬ್ಬರು ಈ ರೀತಿ ನುಡಿದರು: "ಓ ಅಲ್ಲಾಹನ ಪ್ರವಾದಿಯವರೇ, ನಾವು ಹೆದರಲಾರೆವು. ತಾವು ನಮಗೆ ಅನುಮತಿ ನೀಡುವುದಾದಲ್ಲಿ ಈಗಲೇ ಮಕ್ಕಾದವರೊಡನೆ ಕಾದಾಡಿ ಅವರು ತಮಗೆ ಏನೇನು ಕಷ್ಟ ತೊಂದರೆಗಳನ್ನು ನೀಡಿರುವರೋ ಅದರ ಎಲ್ಲಾ ಪ್ರತೀಕಾರವನ್ನೂ ತೀರಿಸಲು ನಾವು ತಯಾರಿದ್ದೇವೆ." ಹಝ್ರತ್ ಮುಹಮ್ಮದ್ ಪೈಗಂಬರರು, ಯುದ್ಧಮಾಡಲು ತನಗೆ ಅಲ್ಲಾಹನಿಂದ ಅನುಮತಿ ಲಭಿಸಲಿಲ್ಲವೆಂದು ಹೇಳುತ್ತಾ ಅವರನ್ನು ಸಮಾಧಾನಗೊಳಿಸಿದರು.

ಕೊನೆಗೆ ಅವರು ಒಬ್ಬೊಬ್ಬರಾಗಿ ಹಝ್ರತ್ ಪೈಗಂಬರರಲ್ಲಿ "ಬೈಅತ್" (ಅನುಸರಣೆಯ ಪ್ರಮಾಣ ವಚನ) ಮಾಡಿ ನಂತರ ಹೊರಟುಹೋದರು.

ಈ ಸಂಭವದ ಸುದ್ದಿ ಮಕ್ಕಾದ ಜನರ ಕಿವಿಯನ್ನು ಮುಟ್ಟದಿರಲಿಲ್ಲ. ಅವರು ಮದೀನದ ಯಾತ್ರಾರ್ಥಿಗಳ ನೇತಾರರನ್ನು ಇದರ ಬಗ್ಗೆ ವಿಚಾರಿಸಿದರು. ಮದೀನದ ಯಾತ್ರಾತಂಡದ ಮುಖ್ಯ ನಾಯಕ ಅಬ್ದುಲ್ಲ ಬಿನ್ ಉಬಯ್ಯ್ ಬಿನ್ ಸಲೂಲ್ ಎಂಬವರಿಗೆ ಈ ಸಂಭವದ ಕುರಿತು ಏನೂ ತಿಳಿದಿರಲಿಲ್ಲ. ಅವರು ಮಕ್ಕಾದ ಮುಖಂಡರನ್ನು ಸಾಂತ್ವನಗೊಳಿಸುತ್ತಾ ಆ ರೀತಿ ಏನೂ

# ಅಗ್ರೇಸರ ಪ್ರವಾದಿ

★ ಎ. ಅಬ್ದುಲ್ ಹಕ್

ಕ್ರಿಸ್ತಶಕ 571ರಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಜನ್ಮತಾಳಿದರು. ಅವರ ಜನನ ಕಾಲದಲ್ಲಿ ಅರಬ್ ರಾಜ್ಯವು ಬಹಳ ನಿಕೃಷ್ಟವಾದ ಅವಸ್ಥೆಯಲ್ಲಿತ್ತು. ಏಕದೇವಾರಾಧನೆಗೆ ಪ್ರವಾದಿ ಹಝ್ರತ್ ಇಬ್ರಾಹೀಂ (ಅ) ಅವರಿಂದ ಸ್ಥಾಪಿತವಾದ 'ಕಅಬಾ' ವಿಗ್ರಹಗಳಿಂದ ತುಂಬಿಕೊಂಡಿತ್ತು. ಮನುಷ್ಯ ಮಾಹಾತ್ಮ್ಯಗಳ ಕುರಿತು ಅಜ್ಞರಾಗಿದ್ದ ಅಂದಿನ ಅರಬಿಯರು ತಮ್ಮ ಕೈಗಳಿಂದ ರಚಿಸಿದ ವಿಗ್ರಹಗಳನ್ನು ಆರಾಧಿಸುತ್ತಾ ಸಾನ್ಮಾರ್ಗಿಕ ನಿಯಮಗಳಿಗೆ ವಿಧೇಯರಾಗದೆ ಮೃಗೀಯವಾದ ರೀತಿಯಲ್ಲಿ ಜೀವಿಸುತ್ತಾ ಅಧಃಪತನದ ಪಾತಾಳಕ್ಕೆ ತಲುಪಿದ್ದರು. ನಿರಪರಾಧಿಗಳನ್ನು ಕೊಲ್ಲುವುದು, ಪರರ ಸಂಪತ್ತನ್ನು ಕಸಿಯುವುದು, ಅನಾಥರ ಸೊತ್ತನ್ನು ಅಪಹರಿಸುವುದು ಮೊದಲಾದ ನೀಚವೃತ್ತಿ ಅವರ ಕಸುಬಾಗಿತ್ತು. ಅವರು ವ್ಯಭಿಚಾರದ ಕುರಿತು ಅಭಿಮಾನಪಡುತ್ತಾ ತಮ್ಮ ಕವಿತೆಗಳಲ್ಲಿ ಅಂತಹ ಅಶ್ಲೀಲ ವಿಚಾರಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದರು. ಮದ್ಯಪಾನ ಅವರೆಡೆಯಲ್ಲಿ ಸಾಮಾನ್ಯವಾಗಿ ವ್ಯಾಪಿಸಿದ್ದ ಒಂದು ದುಶ್ಶೀಲವಾಗಿತ್ತು. ಜೂಜಾಟ ಸಹ ತುಂಬ ಪ್ರಬಲವಾಗಿತ್ತು. ಸಂಕ್ಷಿಪ್ತವಾಗಿ, ಸರ್ವ ಪಾಪಗಳೂ ಅವರ ಮಧ್ಯದಲ್ಲಿ ನಿರ್ವಿಘ್ನವಾಗಿ ವಿಹರಿಸುತ್ತಿದ್ದವು.

ಅವರು ಪಿಶಾಚಿ ಮತ್ತು ಯಕ್ಷಿಗಳನ್ನು ನಂಬುತಿದ್ದುದರಿಂದ. ರೋಗ ಬಾಧಿಸಿದರೆ ಅದು ಯಕ್ಷಿ ಇತ್ಯಾದಿಗಳ ಕೋಪವೆಂದು ಭಾವಿಸುತ್ತಿದ್ದರು. ಅಷ್ಟರ ಮಟ್ಟಿಗೆ ಅವರಲ್ಲಿ ಅಜ್ಞಾನಾಂಧಕಾರ ತುಂಬಿಕೊಂಡಿತ್ತು. ಅಸಭ್ಯ ಗಾನ ಮತ್ತು ಸಂಗೀತಗಳು ಸಾರ್ವಜನಿಕ ಸಭೆಗಳಲ್ಲಿ ಹಾಡಲ್ಪಡುತ್ತಿದ್ದವು. ಸ್ತ್ರೀಯರನ್ನು ಕೇವಲ ಭೋಗಸುಖದ ಉಪಕರಣಗಳೆಂದು ಭಾವಿಸಿ ಅವರೊಡನೆ ಯಥೇಷ್ಟವಾಗಿ ವರ್ತಿಸುತ್ತಿದ್ದರು. ಅವರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಇರಲಿಲ್ಲ. ಅವರೇ ಪುರುಷರ ವಾರಸು ಹಕ್ಕುಗಳ ಜೊತೆಯಲ್ಲಿ ಗಣಿಸಲ್ಪಡುತ್ತಿದ್ದರು. ಒಂದೇ ವರ್ಗಕ್ಕೆ ಸೇರಿದವರೂ ಒಂದೇ ಭಾಷೆ ಆಡುವವರೂ ಆಗಿದ್ದು ಕೂಡ ಅವರೆಡೆಯಲ್ಲಿ ಆ ಕಾಲದಲ್ಲಿ ಉಂಟಾಗಿದ್ದಷ್ಟು ಬಿಕ್ಕಟ್ಟು ಮತ್ತು ಕಲಹ ಬೇರೆ ಯಾವುದೇ ಜಾತಿಯವರಲ್ಲೂ ಯಾವುದೇ ರಾಜ್ಯದವರಲ್ಲೂ ಉಂಟಾಗಿರಲಿಲ್ಲ. ಗೋತ್ರಗಳು ಪರಸ್ಪರ, ಕುಟುಂಬಗಳು ಅನ್ಯೋನ್ಯ ಕ್ಷುಲ್ಲಕ ಕಾರಣಕ್ಕೆ ಭೀಕರ ಘರ್ಷಣೆಗಳನ್ನು ನಡೆಸುತ್ತಿದ್ದುವು. ಪ್ರಬಲರು ದುರ್ಬಲರ ಹಕ್ಕುಗಳನ್ನು ಹೊಸಕಿ ಹಾಕಿದರು. ಅನಾಥರ ಮತ್ತು ವಿಧವೆಯರ ಸ್ಥಿತಿ ಇದಕ್ಕಿಂತಲೂ ಕಷ್ಟಕರವಾಗಿತ್ತು. ಗುಲಾಮರು ಅವರ ಯಜಮಾನರ ಕೈಯಿಂದ ನಿಷ್ಠುರವಾದ ಮರ್ದನಗಳಿಗೆ ಗುರಿಯಾಗಿ ನರಕಯಾತನೆ ಅನುಭವಿಸುತ್ತಿದ್ದರು.

ಹೀಗೆ, ಮುಹಮ್ಮದ್ ಪೈಗಂಬರರ ಜನನಕ್ಕೆ ಮುಂಚೆ. ಅರಬಿ ಜಾತಿ ಸಂಪೂರ್ಣವಾಗಿ ಯಾವುದೇ ನಾಗರಿಕತೆಯನ್ನು ಪಡೆಯದೆ ದುಸ್ಥಿತಿಯಲ್ಲಿತ್ತು. ಅಂದಿನ

(18ನೇ ಪುಟದಿಂದ)

ಸಂಭವಿಸಿರಲಿಲ್ಲವೆಂದೂ ಅದು ಯಾರೋ ಹಬ್ಬಿಸಿದ ಕಿಂವದಂತಿಯಾಗಿರಬಹುದೆಂದೂ ತಿಳಿಸಿದರು. "ಮದೀನದಿಂದ ಹೊರಟ ಯಾತ್ರಾತಂಡದ ಜನರು ನನ್ನನ್ನು ನಾಯಕನನ್ನಾಗಿ ಚುನಾಯಿಸಿರುವರು. ನನಗೆ ತಿಳಿಯದೆಯೂ ನನ್ನ ಅನುಮತಿಯಿಲ್ಲದೆಯೂ ಅವರು ಏನೂ ಮಾಡಲಾರರು" ಎಂದೂ ಅಬ್ದುಲ್ಲ ಬಿನ್ ಸಲೂಲ್ ಹೇಳಿದರು. ಮದೀನದ ಜನರು ಈಗ ಪೈಶಾಚಿಕ ಹಿಡಿತದಿಂದ ಮುಕ್ತರಾಗಿರುವರೆಂದೂ ಅವರ ಹೃದಯದಲ್ಲಿ ಈಗ ದೈವಿಕ ಸಾಮ್ರಾಜ್ಯವು ಆಧಿಪತ್ಯ ನಡೆಸುತ್ತಿದೆಯೆಂದೂ ಬಹುಶಃ ಅಬ್ದುಲ್ಲ ಬಿನ್ ಉಬಯ್ ಬಿನ್ ಸಲೂಲ್ ತಿಳಿದಿರಲಿಲ್ಲ.

ಆ ದುರವಸ್ಥೆಯ ಬಗ್ಗೆ ಪಾಶ್ಚಾತ್ಯ ವಿದ್ವಾಂಸ ಸರ್ ವಿಲ್ಯಂ ಮುಯಿರ್ 'ಪ್ರವಾದಿ ಚರಿತ್ರೆ'ಯಲ್ಲಿ ಹೀಗೆ ಬರೆದಿದ್ದಾರೆ:

"ಮುಹಮ್ಮದರ ಪ್ರಾದುರ್ಭಾವಕ್ಕೆ ಮೊದಲು ಅರಬಿಯರ ಸ್ಥಿತಿ ಮತಸುಧಾರಣೆಗೆ ತೀರಾ ಅನುಕೂಲವಾಗಿರಲಿಲ್ಲ. ಬೇರೂರಿದ್ದ ವಿಗ್ರಹಾರಾಧನೆಯಲ್ಲಿ ಪ್ರತಿಷ್ಠಾಪಿತವಾಗಿದ್ದ ಅವರ ಮತವಿಶ್ವಾಸವನ್ನು ಬದಲಾಯಿಸಲಿಕ್ಕೆ ಈಜಿಪ್ಟ್ ಮತ್ತು ಸಿರಿಯಾದವರು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಯಿತು. ಮುಹಮ್ಮದರ ಯೌವನ ದಶೆಯಲ್ಲಿ ಅರಬಿಯರು ಪೂರ್ವಾಚಾರಗಳಲ್ಲಿ ಬಹಳ ನಂಬಿಕೆಯುಳ್ಳವರಾಗಿದ್ದರು. ಅದಕ್ಕೆ ಮೊದಲು ಯಾವ ಕಾಲದಲ್ಲೂ ಅವರೆಡೆಯಲ್ಲಿ ಸುಧಾರಣೆ ಇಷ್ಟು ಅಸಾಧ್ಯವಾಗಿ ಕಂಡುಬಂದಿರಲಿಲ್ಲ."

ಹೀಗೆ ನಿರಾಶಾಜನಕವಾದ ರೀತಿಯಲ್ಲಿ ಅಧಃಪತನದ ಆಳದಲ್ಲಿ ಹೂತುಹೋದ ಆ ಅನಾಗರಿಕ ಜನರ ಮಧ್ಯದಲ್ಲಿ ಪ್ರವಾದಿ ಮುಹಮ್ಮದ್ (ಸ) ಒಬ್ಬ ಅನಾಥನಾಗಿ ಬೆಳೆದುಬಂದರು. ತನಗೆ ಆರುವರ್ಷ ಪ್ರಾಯವಾದಾಗ ತನ್ನ ತಾಯಿ ಮೃತರಾದರು. ಹಾಗೆ ಪೂರ್ಣವಾಗಿ ಅನಾಥರಾದ ಅವರು ಬಾಲ್ಯಕಾಲದಲ್ಲಿ ತನ್ನ ತಂದೆಯ ಪಾಲಿಗೆ ಸೇರಿದ ಆಡುಗಳನ್ನು ಮೇಯಿಸುವ ಕೆಲಸವನ್ನು ಮಾಡಬೇಕಾಗಿ ಬಂದಿತ್ತು. ಯೌವನ ಕಾಲದಲ್ಲಿ ಅವರು ವ್ಯಾಪಾರ ನಡೆಸುತ್ತಿದ್ದರು. ಬಾಲ್ಯದಲ್ಲೇ ಅವರು ಸದಾಚಾರನಿಷ್ಠೆಯಿಂದ ತನ್ನ ಸಮಪ್ರಾಯದವರಿಂದ ಬೇರೆಯಾಗಿ ಕಾಣಲ್ಪಡುತ್ತಿದ್ದರು. ಅವರ ಈ ಸದಾಚಾರನಿಷ್ಠೆ ಮತ್ತು ಸ್ವಭಾವವೈಶಿಷ್ಟ್ಯವನ್ನು ಪರಿಗಣಿಸಿ ಪವಿತ್ರ ಖುರ್‌ಆನ್ ಅವರನ್ನು ಸಂಬೋಧಿಸಿ ಹೀಗೆ ಶ್ಲಾಘಿಸಿದೆ:

"ನಿಶ್ಚಯವಾಗಿಯೂ ನೀನು ಮಹತ್ತರ ಸ್ವಭಾವ ಗುಣಗಳಿಂದ ಕೂಡಿದವನಾಗಿರುವೆ" (68:5). ಅವರ ಸ್ವಭಾವದ ಬಗ್ಗೆ ಯಾರೋ ಕೇಳಿದಾಗ ಪೈಗಂಬರರ ಪತ್ನಿ ಹಝ್ರತ್ ಆಯಿಶ (ರ) ಉತ್ತರಿಸಿದ್ದು "ಅವರ ಸ್ವಭಾವ ಖುರ್‌ಆನೇ ಆಗಿದೆ" ಎಂದು. ಅಂದರೆ, ಖುರ್‌ಆನ್ ವಿವರಿಸಿರುವ ಎಲ್ಲಾ ಸದ್ಗುಣಗಳನ್ನು ಪೈಗಂಬರರಲ್ಲಿ ಕಾಣಬಹುದು. ತನ್ನ ಜೀವಿತದಲ್ಲಿ ಯಾವುದೇ ಕಳಂಕ ಆರೋಪಿಸಲ್ಪಡಲಿಕ್ಕೆ ಅಸಾಧ್ಯವಾದ ರೀತಿಯಲ್ಲಿ ನಿಷ್ಕಲ್ಮಷವಾದ ಪರಿಶುದ್ಧತೆಯನ್ನು ಅವರು ಬಾಲ್ಯದಿಂದಲೇ ರೂಢಿಸಿಕೊಂಡಿದ್ದರು. ದೋಷವನ್ನು ಹುಡುಕುವ ಸರ್ ವಿಲ್ಯಂ ಮುಯಿರ್ ಕೂಡ ಆ ಬಗ್ಗೆ ಹೀಗೆ ಸಾಕ್ಷಿಯಾಗಲು ನಿರ್ಬಂಧಿತರಾದರು: "ವಿಶಿಷ್ಟ ಸ್ವಭಾವದಿಂದಲೂ ಮಹಾತ್ಮರುಗಳಿಗೆ ಸೇರಿದ ಪ್ರವರ್ತನೆಗಳಿಂದಲೂ ಆ ಯುವಕ ತನ್ನ ನಾಡಿನವರ ಪ್ರಶಂಸೆಗೆ ಪಾತ್ರರಾದರು. ಸಾಮಾನ್ಯವಾಗಿ ಎಲ್ಲರ ಪೂರ್ಣ ಒಪ್ಪಿಗೆ ಪ್ರಕಾರ ಅವರು ಅಲ್ ಅಮೀನ್-ನಂಬಿಗಸ್ತ- ಎಂಬ ಹೆಸರು ಗಳಿಸಿದರು."

ಹೀಗೆ ಅವರು ದೋಷಮುಕ್ತ ಸ್ವಭಾವವೈಶಿಷ್ಟ್ಯದಿಂದಲೂ ತೀವ್ರ ಭಕ್ತಿಯಿಂದಲೂ ಜೀವನ ನಡೆಸುತ್ತಿದ್ದಾಗ, ತನ್ನ ನಲ್ವತ್ತನೆಯ ವಯಸ್ಸಿನಲ್ಲಿ ದಿವ್ಯ ಬೋಧನೆಯಿಂದ ಅನುಗ್ರಹೀತರಾದರು. ಏಕದೇವ ತತ್ವವನ್ನು ಪ್ರಬೋಧಿಸಲಿಕ್ಕೂ ಬಹುದೇವಾರಾಧನೆಯನ್ನು ತಡೆಯಲಿಕ್ಕೂ ದುಷ್ಟತೆ ಮತ್ತು ದುಷ್ಕೃತ್ಯಗಳನ್ನು ನಿರೋಧಿಸಲಿಕ್ಕೂ ಧರ್ಮ ಮತ್ತು ನೀತಿಯನ್ನು ಸ್ಥಾಪಿಸಲಿಕ್ಕೂ ಅವರು ದೇವರಿಂದ ನಿಯೋಜಿತರಾದರು. ಅದಕ್ಕನುಸಾರವಾಗಿ ತನ್ನ ಪ್ರವರ್ತನೆಯನ್ನು ಆರಂಭಿಸಿದಾಗ ಅವರಿಗೆ ಜನರ ಕಠಿಣವಾದ ವಿರೋಧ, ಅವಹೇಳನ ಮತ್ತು ಹಿಂಸೆಗಳನ್ನು ಎದುರಿಸಬೇಕಾಗಿ ಬಂತು. ಮೊದಲು ತನ್ನನ್ನು ಆದರಿಸುತ್ತಲೂ ಪ್ರೀತಿಸುತ್ತಲೂ ಇದ್ದವರು ಈಗ ಆಕ್ಷೇಪಿಸಲಿಕ್ಕೂ ನಿಂದಿಸಲಿಕ್ಕೂ ತೊಡಗಿದರು. ಆದರೆ ಬಹಳ ನಿಕಟವಾಗಿದ್ದವರಲ್ಲಿ ಕೆಲವರು ಮಾತ್ರ ಆರಂಭದಲ್ಲಿ ಅವರ ಪ್ರಬೋಧನೆಯನ್ನು ಸ್ವೀಕರಿಸಿದರು. ವಿಶ್ವಾಸಿಗಳ ಸಂಖ್ಯೆ ಹೆಚ್ಚಾಗುತ್ತಾ ಬರುತ್ತಿರುವುದರೊಂದಿಗೆ ಅವರಿಗೆ ಅವಿಶ್ವಾಸಿಗಳಿಂದ ಮರ್ದನೆಗಳನ್ನೂ ಸಹಿಸಬೇಕಾಗಿ ಬಂತು. ಪೈಗಂಬರರು ಕೂಡ ವಿರೋಧಿಗಳ ಅಕ್ರಮ ವರ್ತನೆಗಳಿಗೆ ಈಡಾಗಬೇಕಾಯಿತು. ಆದರೆ ಏನನ್ನೂ ಗಣ್ಯಮಾಡದೆ ಅವರು ಜನರ ಗುಂಪು ಕಂಡಲ್ಲೆಲ್ಲಾ ತನ್ನ ದೌತ್ಯವನ್ನು ಪ್ರಚಾರ ಮಾಡಿದರು. ಅವರು ಹೀಗೆ ನುಡಿದರು:

"ಎಲೈ ಜನರೇ, ನಿಮ್ಮ ದೇವರು ಏಕನು, ಅವನ ಹೊರತು ಆಕಾಶದಲ್ಲಾಗಲಿ ಭೂಮಿಯಲ್ಲಾಗಲಿ ಬೇರೆ ದೇವರಿಲ್ಲ. ಅವನಿಗೆ ಪುತ್ರನಾಗಲಿ ಪುತ್ರಿಯಾಗಲಿ ಇಲ್ಲ.

ಅವನು ಯಾರ ಪಿತನೂ ಅಲ್ಲ. ಅವನಿಗೆ ಯಾರೂ ಪಿತನಿಲ್ಲ. ಹಾಗಿರುವ ಆ ನಾಥನಲ್ಲಿ ವಿಶ್ವಾಸವಿರಿಸಿ ಅವನೊಡನೆ ಮಾತ್ರ ಪ್ರಾರ್ಥಿಸಿರಿ; ಸಕಲ ಪ್ರಪಂಚವನ್ನು ಸೃಷ್ಟಿಸಿದ ಸರ್ವಶಕ್ತನಾಗಿದ್ದಾನೆ ಅವನು. ಅವನೆಡೆಗೆಯೇ ಮೃತರಾದವರ ಆತ್ಮಗಳು ಹಿಂತೆರಳುತ್ತವೆ. ಅವನು ಅವುಗಳಿಗೆ ನವಜೀವನವನ್ನು ಪ್ರದಾನಮಾಡುತ್ತಾನೆ. ಮನುಷ್ಯರು ಆ ಸರ್ವೈಕನಾಥನನ್ನು ಪ್ರೀತಿಸಿ ಅವನ ಸಾಮೀಪ್ಯಕ್ಕೋಸ್ಕರ ಪ್ರಯತ್ನಿಸಬೇಕು. ನೀವು ನಿಮ್ಮ ಹೃದಯಗಳನ್ನೂ ನಾಲಗೆಗಳನ್ನೂ ಪ್ರವೃತ್ತಿಗಳನ್ನೂ ಶುದ್ಧೀಕರಿಸಿರಿ. ಕಳವು, ಕೊಲೆ, ಕಲಹ, ವಂಚನೆ, ದರೋಡೆ, ಪರನಿಂದೆ, ಅಸಭ್ಯಮಾತು, ಅತಿಕ್ರಮ, ಅಸೂಯೆ ಇವುಗಳಿಂದೆಲ್ಲಾ ದೂರವಿರಬೇಕು. ವಿಷಯ ಲಂಪಟತೆಯಲ್ಲಿ ನೀವು ಕಾಲವ್ಯಯ ಮಾಡಬಾರದು. ಮನುಷ್ಯರ ಕ್ಷೇಮ ಮತ್ತು ಒಳಿತಿಗಾಗಿ ನಿಮ್ಮ ಸಮಯವನ್ನು ವಿನಿಯೋಗಿಸಿ ಸಮಾಧಾನ ಮತ್ತು ಮೈತ್ರಿಯನ್ನು ಬೆಳೆಸಲು ಶ್ರಮಿಸಬೇಕು."

ಇದಾಗಿತ್ತು ಮುಹಮ್ಮದ್ ಪೈಗಂಬರರ ಮುಖ್ಯವಾದ ಬೋಧನೆ. ಈ ರೀತಿ ಜನರ ಕ್ಷೇಮಕ್ಕಾಗಿ ಪರಿಶ್ರಮಿಸಿದ ಅವರನ್ನು ತಿಳಿದುಕೊಳ್ಳಲು ಅಸಾಧ್ಯವಾದುದರಿಂದ ಆ ಅವಿಶ್ವಾಸಿಗಳಿಗೆ ಅವರ ಬೋಧನೆಯೆಲ್ಲಾ ಪರಿಹಾಸ್ಯವಾಗಿ ತೋಚಿತು. ಅಸಂಖ್ಯಾತ ದೇವತೆಗಳನ್ನು ಆರಾಧಿಸಿ ಅವುಗಳಿಗೆ ನೈವೇದ್ಯಗಳನ್ನು ಅರ್ಪಿಸುತ್ತಿದ್ದ ಅವರು. ಏಕದೇವನನ್ನು ಮಾತ್ರವೇ ಆರಾಧಿಸಬೇಕೆಂಬ ತತ್ವ ಬರೇ ತಿಳಿಗೇಡಿತನವೆಂದು ಬಗೆದು ತಳ್ಳಿಹಾಕಿದರು. ಒಬ್ಬ ಮನುಷ್ಯನಲ್ಲಿ ಅಥವಾ ವಿಗ್ರಹದಲ್ಲಿ ದೇವರು ಅವತರಿಸಲಾರನೆಂದು ಅವರಿಗೆ ಮನಗಾಣಲು ಸಾಧ್ಯವಾಗಲಿಲ್ಲ. ಅದೃಶ್ಯನಾದ ಒಬ್ಬ ದೇವನ ಕುರಿತು ಭಾವಿಸಲಿಕ್ಕೆ ಅಸಾಧ್ಯವಾಯಿತು. ಆದ್ದರಿಂದ ಇಂತಹ ನವೀನ ವಿಚಾರಗಳನ್ನೂ ನೈತಿಕ ತತ್ವಗಳನ್ನೂ ಪ್ರಬೋಧಿಸುತ್ತಿದ್ದ ಪ್ರವಾದಿವರ್ಯರನ್ನು ಅವರು ಗೇಲಿಮಾಡಿದರು. ಅವರಲ್ಲಿ ಜಾತೀಯವಾಗಿ ರೂಢಮೂಲವಾಗಿದ್ದ ಮೂಢನಂಬಿಕೆಗಳನ್ನೂ ಅವರ ಮತೀಯ ನಡವಳಿಕೆಗಳನ್ನೂ ಕೆಟ್ಟ ಮಾಮೂಲು ಆಚರಣೆಗಳನ್ನೂ ಬದಲಾಯಿಸುವರೆ ಪೈಗಂಬರರ ಸನ್ನದ್ಧತೆ ಬಹಳ ವಿಷಮಕರವಾಗಿತ್ತು. ಇದಕ್ಕಿಂತ ಮೊದಲು ಅವರನ್ನು ಕ್ರೈಸ್ತರು ಮತ್ತು ಯಹೂದರು ತಮ್ಮ ಧರ್ಮಮಾರ್ಗಗಳಿಗೆ ಪರಿವರ್ತಿಸಲು ಮಾಡಿರುವ ಶ್ರಮ ವಿಫಲವಾಗಿತ್ತು. ಹಾಗೆ ಯಾವುದೇ ಸುಧಾರಣೆಗೆ ಒಳಗಾಗದೆ ಇದ್ದ ಅವರ ಅಂದಿನ ಸ್ಥಿತಿಯ ಕುರಿತು ವಿಲ್ಯಂ ಮುಯಿರ್ ಹೇಳಿದ್ದು ಈ ರೀತಿಯಾಗಿದೆ: "ಐದು ಶತಮಾನಗಳ ಕಾಲದ ನಿರಂತರವಾದ ಪ್ರಯತ್ನದ ನಂತರ ಕೂಡ ಕ್ರೈಸ್ತಮತವನ್ನು ಸ್ವೀಕರಿಸಿದವರು (ಅರೇಬಿಯದಲ್ಲಿ) ಅಲ್ಲಿ ಇಲ್ಲಿಯಾಗಿ ಬರೇ ಕೆಲವರಾಗಿದ್ದರು. ಶಕ್ತಿಯುತವಾದ ಯಹೂದಿ ಮತ ಬಹಳ ಊರ್ಜಿತವಾಗಿ ಪ್ರಯತ್ನಿಸಿದರೂ ಅವರನ್ನು ಮತಪರಿವರ್ತಿಸುವ ವಿಷಯದಲ್ಲಿ ಅದು ಜಯಗಳಿಸಲಿಲ್ಲ."

ಆದರೆ, ಹೆಚ್ಚಿನ ಕಾಲವಿಳಂಬವಿಲ್ಲದೆ ಪೈಗಂಬರರು ತನ್ನ ಪ್ರಯತ್ನದಲ್ಲಿ ಸಂಪೂರ್ಣ ವಿಜಯ ಹೊಂದಿದರು. ತನ್ನ ಆಧ್ಯಾತ್ಮಿಕ ಪ್ರಭಾವದಿಂದ ಅವರು ಅವರಿಗೆ ನವಚೈತನ್ಯವನ್ನೂ ಆತ್ಮಸಂಸ್ಕಾರವನ್ನೂ ಒದಗಿಸಿದರು. ಹಾಗೆ ಅಲ್ಪಕಾಲದಲ್ಲೇ ಅವರೆಡೆಯಲ್ಲಿ ಮಹತ್ತರವಾದೊಂದು ಪರಿವರ್ತನೆಯುಂಟಾಯಿತು. ಶಿಷ್ಯಗಣದಲ್ಲಿ ಪಸರಿಸಿದ್ದ ಪೈಗಂಬರರ ಆಧ್ಯಾತ್ಮಿಕ ಪ್ರಭಾವ ತರಂಗಗಳು ಮೆಲ್ಲಮೆಲ್ಲನೆ ಜನತೆಯಲ್ಲಿಡೀ ವ್ಯಾಪಿಸಿ ವರ್ತಿಸಲು ತೊಡಗಿತು. ತತ್ಫಲವಾಗಿ, ಕ್ಷುಲ್ಲಕ ಕಾರಣಗಳಿಗೋಸ್ಕರ ಗುಂಪುಕಟ್ಟಿ ಬದ್ಧವೈರಿಗಳಾಗಿ ಹೋರಾಡುತ್ತಿದ್ದ ವಿವಿಧ ಗೋತ್ರ ಮತ್ತು ವಂಶಗಳಿಗೆ ಸೇರಿದ ಜನರು ಗುಂಪುಗುಂಪಾಗಿ ಇಸ್ಲಾಮಿಕ ಸಾಹೋದರ್ಯ ವಲಯವನ್ನು ಪ್ರವೇಶಿಸಲು ತೊಡಗಿದರು. ಅದರೊಂದಿಗೆ ವಿಶೇಷವಾದ ಚೈತನ್ಯವೂ ಆತ್ಮವಿಶ್ವಾಸವೂ ಅವರಲ್ಲಿ ಮೂಡಿದುವು. ಅವರು ನೈತಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಉನ್ನತಿಗೇರಿದರು. ಅವರು ಸಹೋದರರಂತೆ ವರ್ತಿಸಲು ತೊಡಗಿದರು. ಸದಾ ಮೂರ್ತಿಗಳ ಮುಂದೆ ಪ್ರಾರ್ಥನೆಮಾಡುತ್ತಲೂ ನೈವೇದ್ಯ ಅರ್ಪಿಸುತ್ತಲೂ ಇದ್ದವರು ಏಕದೇವ ತತ್ವದ ಪ್ರಬೋಧಕರಾಗಿ ಪರಿವರ್ತಿತರಾದರು. ಬೀಭತ್ಸ ಮೂಢನಂಬಿಕೆಗಳಿಂದ ಆಪಾದಮಸ್ತಕ ಮುಳುಗಿದ್ದವರು ಜ್ಞಾನಪ್ರಕಾಶದಲ್ಲಿ ಅಹಮಹಮಿಕ ಮುನ್ನೇರಿದರು. ಜ್ಞಾನದ ಪ್ರಕಾಶದೀಪ್ತಿ ವಿದೂರ ಕಡೆಗಳಿಗೆ ವಿಸ್ತರಿಸುವರೆ ಅವರು

ಕಾರ್ಯಮಗ್ನರಾದರು. ಅವರ ದುಸ್ವಭಾವಗಳೂ ದುರ್ವರ್ತನೆಗಳೂ ಸುಸ್ವಭಾವಗಳಾಗಿಯೂ ಸದ್ವರ್ತನೆಗಳಾಗಿಯೂ ಬದಲಾಯಿಸಲ್ಪಟ್ಟುವು. ಶಿಶುಹತ್ಯೆ ಮೊದಲಾದ ಮೂರ್ಖ ಕೃತ್ಯಗಳು ಅವರೆಡೆಯಲ್ಲಿ ನಿರ್ಮೂಲವಾಯಿತು. ಪೈಗಂಬರರ ಅನುಗ್ರಹೀತ ಮುಖದಿಂದ ನಿರ್ಗಮಿಸಿದ ನಿಷೇಧಾಜ್ಞೆಯಿಂದ ಮದ್ಯಪಾನ ಅವರ ಮಧ್ಯೆ ಸಂಪೂರ್ಣ ಇಲ್ಲದಾಯಿತು. ಅದರೊಂದಿಗೆ ಅವರ ರಾತ್ರಿ ಕಾಲದ ಅಮಲೇರಿದ ಅಟ್ಟಹಾಸಗಳು ಭಕ್ತಿನಿರ್ಭರವಾದ ಪ್ರಾರ್ಥನೆಗಳಾಗಿಯೂ ಧ್ಯಾನಾನುಷ್ಠಾನಗಳಾಗಿಯೂ ಮಾರ್ಪಾಟುಗೊಂಡವು.ಅವರು ಪರಸ್ಪರ ಹಕ್ಕುಗಳನ್ನು ಗೌರವಿಸಲಿಕ್ಕೂ ಮಾನ್ಯಮಾಡಲಿಕ್ಕೂ ತೊಡಗಿದರು. ಅನ್ಯೋನ್ಯವಿದ್ದ ಹಗೆ ಮತ್ತು ವಿದ್ವೇಷ ಭ್ರಾತೃಸ್ನೇಹವಾಗಿಯೂ ಸಹಾನುಭೂತಿಯಾಗಿಯೂ ಬದಲಾವಣೆಗೊಂಡವು. ಈ ಉತ್ಕೃಷ್ಟ ಸ್ವಭಾವಗಳು ಅವರೆಡೆಯಲ್ಲಿ ಬೆಳೆದುಬಂದುದರೊಂದಿಗೆ ಬಡವರ ಕಷ್ಟಕಾರ್ಪಣ್ಯಗಳು ಕೊನೆಗೊಂಡು ದರಿದ್ರರ ಸಂಕಟಗಳು ಪರಿಹರಿಸಲ್ಪಡಲು ಆರಂಭವಾಯಿತು. ಹೆಚ್ಚೇಕೆ? ಆ ಅನಾಗರಿಕ ಜನರು ನಾಗರಿಕರೂ ಸಭ್ಯರೂ ಆಗಿ ಮಾರ್ಪಾಟು ಹೊಂದಿದರು. ಇನ್ನೂ ಅವರು ಉನ್ನತಿಗೇರಿ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಕಾರವುಳ್ಳ ಭಕ್ತರಾದರು. ಈ ಹಂತದಲ್ಲಿ ಅವರು ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳಿಗೋಸ್ಕರ ಯಾವುದೇ ರೀತಿಯ ಯಾತನೆಗಳನ್ನು ಸಹಿಸಲಿಕ್ಕೂ ಎಷ್ಟೇ ದೊಡ್ಡ ತ್ಯಾಗಗಳನ್ನು ಮಾಡಲಿಕ್ಕೂ ಸನ್ನದ್ಧರಾಗಿದ್ದರು. ಈ ಸಂಸ್ಕೃತಿ ಕಾಲು ಶತಮಾನದೊಳಗೆ ಅರೇಬಿಯಾದಲ್ಲಿಡೀ ವ್ಯಾಪಿಸಿತು.

ಪೈಗಂಬರರು ಉಂಟುಮಾಡಿದ ಈ ಅದ್ಭುತಕರವಾದ ಮಾರ್ಪಾಟಿನ ಬಗ್ಗೆ ಸರ್ ವಿಲ್ಯಂ ಮುಯಿರ್ ಹೀಗೆ ಬರೆದಿದ್ದಾರೆ:

"ಹಿಜ್ರಕ್ಕೆ (ಪೈಗಂಬರರ ಯಾತ್ರೆ) ಹದಿಮೂರು ವರ್ಷ ಮೊದಲು ಮಕ್ಕಾ ನಗರವು ಮೊದಲು ಹೇಳಿದಂತೆ ಬಹಳ ಕೆಟ್ಟು ನಿರ್ಜೀವಾವಸ್ಥೆಯಲ್ಲಿತ್ತು. ಆದರೆ ಈ ಹದಿಮೂರು ವರ್ಷಗಳೊಳಗೆ ಎಂತಹ ಪರಿವರ್ತನೆ ಘಟಿಸಿತು! ನೂರಾರು ಜನರು ಮೂರ್ತಿ ಪೂಜೆಯನ್ನು ತ್ಯಜಿಸಿ ಏಕದೇವಾರಾಧನೆಯನ್ನು ಕೈಗೊಂಡು ದೇವನ ಕಡೆಯಿಂದಿರುವ ಬೋಧನೆಯೆಂದು ಅವರು ನಂಬಿದ ಮಾರ್ಗದರ್ಶಕವನ್ನು ಸಂಶಯರಹಿತವಾಗಿ ಅನುಸರಿಸಿದರು. ಅವರು ಭಕ್ತಿವೈರಾಗ್ಯದಿಂದ ದೇವರೊಡನೆ ಪ್ರಾರ್ಥಿಸಿ, ಅವನ ಕಾರುಣ್ಯದಿಂದ ಪಾಪಮುಕ್ತಿಗೆ ಸದಾ ಪ್ರತ್ಯಾಶೆಪಟ್ಟುಕೊಂಡು, ಸದ್ವೃತ್ತಿಯನ್ನೂ ಧರ್ಮಶೀಲವನ್ನೂ ಚಾರಿತ್ರ್ಯವನ್ನೂ ನೀತಿನಿಷ್ಠೆಯನ್ನೂ ಪಾಲಿಸಲು ಪ್ರಯತ್ನಿಸಿದರು. ಈಗ ಅವರು ಎಲ್ಲಾ ಸಮಯದಲ್ಲೂ ದೇವರ ಶಕ್ತಿಮಾಹಾತ್ಮ್ಯೆಗಳ ಕುರಿತು ಪ್ರಜ್ಞೆಯುಳ್ಳವರಾಗಿ ಆ ಸರ್ವೈಕ ರಕ್ಷಕನ ಕೃಪಾಕಟಾಕ್ಷ ನಿಸ್ಸಾರ ಕಾರ್ಯದಲ್ಲಿ ಸಹ ಉಂಟೆಂಬ ವಿಶ್ವಾಸದಿಂದ ಜೀವನ ನಡೆಸಲು ತೊಡಗಿದರು. ಪ್ರಕೃತಿಯ ಎಲ್ಲಾ ದಾನಗಳಲ್ಲೂ ಜೀವನದ ಎಲ್ಲಾ ಸಂಬಂಧಗಳಲ್ಲೂ ವ್ಯಯಕ್ತಿಕ ಹಾಗೂ ಸಾಮೂಹಿಕವಾದ ಎಲ್ಲಾ ಸಂಭವಗಳಲ್ಲೂ ದೇವಹಸ್ತ ಅವರಿಗೆ ದೃಶ್ಯವಾಗತೊಡಗಿತು. ಅಷ್ಟೇ ಅಲ್ಲ, ತಾವು ಈಗ ಆನಂದಿಸುತ್ತಿರುವ ಆಧ್ಯಾತ್ಮಿಕ ಸ್ಥಿತಿ ದೇವರ ಒಂದು ವಿಶೇಷ ಅನುಗ್ರಹವೆಂದೂ ತಮ್ಮ ಊರಿನ ಆಧ್ಯಾತ್ಮಿಕ ಅಂಧರ ಅವಿಶ್ವಾಸದಾರ್ಢ್ಯವು ದೇವರ ಕೋಪದ ಕಾರಣವೆಂದೂ ಅವರು ನಂಬಿದರು. ಮುಹಮ್ಮದ್ ಅವರಿಗೆ ನವಜೀವನವನ್ನು ನೀಡಿದಾತನೂ ಅವರ ನವಜಾತ ಪ್ರತ್ಯಾಶೆಗಳ ಉಗಮಸ್ಥಾನವೂ ಆಗಿದ್ದರು. ಆದ್ದರಿಂದ ಅವರು ಮುಹಮ್ಮದ್ ಪೈಗಂಬರರನ್ನು ಸಮುಚಿತವೂ ಸಂಪೂರ್ಣವೂ ಆದ ರೀತಿಯಲ್ಲಿ ಅನುಸರಿಸಿದರು.

"ಇಷ್ಟು ಅಲ್ಪವಾದೊಂದು ಕಾಲಘಟ್ಟದಲ್ಲಿ ಈ ಅದ್ಭುತಕರವಾದ ಸಂಘಟನೆ ಮೂಲಕ ಮಕ್ಕಾದ ಜನರು ಎರಡು ವಿರುದ್ಧ ಗುಂಪುಗಳಾಗಿ ಬೇರ್ಪಟ್ಟರು– ಗೋತ್ರ ವಂಶಪರವಾದ ಸೀಮೆಗಳನ್ನು ಗಣ್ಯಮಾಡದೆ ಒಂದು ಇನ್ನೊಂದರೊಡನೆ ಭಯಂಕರವಾದ ವಿರೋಧ ಮತ್ತು ಹಗೆಯನ್ನು ಪೋಷಿಸುವ ರೀತಿಯ ಎರಡು ಗುಂಪುಗಳು. ಮುಸ್ಲಿಮರು ಎಲ್ಲಾ ಉಪದ್ರವಗಳನ್ನೂ ಪೀಡನೆಗಳನ್ನೂ ಬಹಳ ತಾಳ್ಮೆಯಿಂದ ಸಹಿಸಿದರು. ಅವರ ಮಹತ್ತರವಾದ ಆ ಸಹನೆ ಪ್ರಶಂಸಾರ್ಹವಾಗಿದೆ. ಸ್ತ್ರೀ ಪುರುಷರು ಸೇರಿ ಒಂದು ನೂರುಮಂದಿ, ತಮ್ಮ ಧರ್ಮ ನಂಬಿಕೆಯನ್ನು ಪರಿತ್ಯಜಿಸಲು ಒಪ್ಪದೆ ಸ್ವಂತ ಮನೆ ಮಾರುಗಳನ್ನೂ ಊರನ್ನೂ ಬಿಟ್ಟು, ವಿರೋಧವು ಶಾಂತವಾಗುವ ತನಕ ಅಬಿಸೀನಿಯಾಕ್ಕೆ ಹೋಗಿ

ಅಭಯಾರ್ಥಿಗಳಾಗಿ ನೆಲಸಿದರು. ನಂತರ ಇದಕ್ಕಿಂತ ಇನ್ನೂ ಹೆಚ್ಚು ಜನರು ಪೈಗಂಬರರೊಂದಿಗೆ ತಮಗೆ ಹೆಚ್ಚು ಪ್ರಿಯಕರವಾದ ನಗರವನ್ನೂ ಅಲ್ಲಿಯ ಪುಣ್ಯ ದೇವಾಲಯವನ್ನೂ – ಇದು ಅವರಿಗೆ ಭೂಲೋಕದಲ್ಲಿ ಅತ್ಯಂತ ಪವಿತ್ರವಾದ ಕ್ಷೇತ್ರ – ತೊರೆದು ಮದೀನಾಕ್ಕೆ ಹೋಗಿ ವಾಸಿಸತೊಡಗಿದರು. ಅಲ್ಲಿ ಸಹ ಆ ಮಾಂತ್ರಿಕ ಶಕ್ತಿ ಎರಡು- ಮೂರು ವರ್ಷಗಳೊಳಗೆ ಪೈಗಂಬರರನ್ನೂ ಅನುಚರರನ್ನೂ ಸಂರಕ್ಷಿಸಲಿಕ್ಕೆ ಜೀವಾರ್ಪಣೆ ಮಾಡಲಿಕ್ಕೆ ಸಹ ಸಿದ್ಧರಾಗಿರುವ ಒಂದು ಸಹೋದರ ಸಂಘವನ್ನು ಪ್ರದಾನ ಮಾಡಿತು."

(ಲೈಫ್ ಓಫ್ ಮುಹಮ್ಮದ್, ಸಂಪುಟ 2)

ವಿದ್ವಾಂಸರಾದ ಡಾಕ್ಟರ್ ಮಾರ್ಕಸ್ ಡೋಡ್ಸ್ (Dr. Marcus Dods) ತನ್ನ "ಮುಹಮ್ಮದ್, ಬುದ್ಧ ಏಂಡ್ ಕ್ರೈಸ್ಟ್" ಎಂಬ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ: "ಅದು (ಪೈಗಂಬರರ ಬೋಧನೆ) ಅರೇಬಿಯಾದ ವಿಘಟಿಸಿರುವ ವಿವಿಧ ಗೋತ್ರಗಳಿಗೆ ಸೇರಿದ ಜನರನ್ನು ಪರಸ್ಪರ ಒಟ್ಟುಗೂಡಿಸಿ ಅವರನ್ನು ಒಂದು ರಾಷ್ಟ್ರವನ್ನಾಗಿಮಾಡಿ ಮೇಲೆತ್ತಿ ಲೋಕದ ಪ್ರಧಾನ ಶಕ್ತಿಗಳ ಉನ್ನತಿಗೆ ತಲುಪಿಸಿದರು. ಅದು ವಿಗ್ರಹಾರಾಧನೆಯನ್ನು ಎಂದೆಂದಿಗೂ ಅರೇಬಿಯಾದಿಂದ ತೊಡೆದು ನೀಗಿಸಿ ಯಥಾರ್ಥವಾದ ಏಕದೇವ ವಿಶ್ವಾಸವನ್ನು ಸ್ಥಾಪಿಸಿತು. ಅದಕ್ಕೆ ಅರೇಬಿಯಾದಲ್ಲಿ ಉಂಟುಮಾಡಲು ಸಾಧ್ಯವಾದ ಮಾರ್ಪಾಟಿನ ಕುರಿತು ಸರಿಯಾದೊಂದು ವಿವರಣೆ ಅಬಿಸೀನಿಯಾದಲ್ಲಿ ಆಶ್ರಯ ಪಡೆದಿದ್ದ ಮುಸ್ಲಿಮರು ನೀಡಿದ್ದರು. ತಮ್ಮನ್ನು ಮಕ್ಕಾಕ್ಕೆ ಮರಳಿ ಕಳುಹಿಸದಿರಲಿಕ್ಕೆ ಕಾರಣ ತೋರಿಸಬೇಕೆಂದು ಅಲ್ಲಿಯ ರಾಜ ಆಜ್ಞಾಪಿಸಿದಾಗ ಅವರು ತಮ್ಮ ಧರ್ಮನಂಬಿಕೆ ಮತ್ತು ಅದು ತಮ್ಮಲ್ಲಿ ಉಂಟುಮಾಡಿದ ಪರಿವರ್ತನೆಯ ಕುರಿತು ಹೃದಯಂಗಮವಾದ ಆ ಹೇಳಿಕೆಯನ್ನು ನೀಡಿದರು. ಅದು ಈ ರೀತಿಯಾಗಿದೆ: 'ಎಲೈ ಮಹಾರಾಜ, ನಾವು ಅಜ್ಞಾನದಲ್ಲಿ ಮುಳುಗಿದ್ದ ಪ್ರಾಕೃತ ಜನರಾಗಿದ್ದೆವು. ನಾವು ಅನೇಕ ವಿಗ್ರಹಗಳನ್ನು ಆರಾಧಿಸುತ್ತಾ ಸತ್ತಪ್ರಾಣಿಗಳನ್ನು ಭಕ್ಷಿಸುತ್ತಾ ಅಸಭ್ಯವಾಗಿ ವರ್ತಿಸುತ್ತಾ ಇದ್ದೆವು. ಕುಟುಂಬ ಸಂಬಂಧಗಳನ್ನು ಅವಗಣಿಸುತ್ತಲೂ ನೆರೆಕರೆಯವರೊಡನಿರುವ ಕರ್ತವ್ಯಗಳನ್ನು ಅಲಕ್ಷಿಸುತ್ತಲೂ ಇದ್ದೆವು. ಬಲಶಾಲಿ ಏನು ಮಾಡಿದರೂ ದಕ್ಕುತ್ತಿತ್ತು; ಬೇರೆ ಯಾವ ನಿಯಮವೂ ನಮಗಿರಲಿಲ್ಲ. ಹಾಗೆ ಜೀವಿಸುತ್ತಿದ್ದಾಗ, ನಮ್ಮೆಡೆಯಲ್ಲಿ ದೇವರು ಒಬ್ಬ ಪ್ರವಾದಿಯನ್ನು ನಿಯೋಜಿಸಿದನು. ಅವರ ಸತ್ಯಸಂಧತೆ, ಪ್ರಾಮಾಣಿಕತೆ, ನಿಷ್ಕಳಂಕತೆ ಇತ್ಯಾದಿ ಗುಣಗಳ ಕುರಿತು ನಮಗೆ ಚೆನ್ನಾಗಿ ತಿಳಿದಿತ್ತು. ಅವರು ನಮ್ಮನ್ನು ಏಕದೇವ ವಿಶ್ವಾಸದೆಡೆಗೆ ಆಹ್ವಾನಿಸಿದರು. ದೇವತ್ವದಲ್ಲಿ ಅವನೊಡನೆ ಏನನ್ನೂ ಸಹಭಾಗಿ ಮಾಡದಿರಲು ಬೋಧಿಸಿದರು. ಮೂರ್ತಿಪೂಜೆಯನ್ನು ಅವರು ಕಟುವಾಗಿ ವಿರೋಧಿಸಿದರು. ಸತ್ಯ ನುಡಿಯಲಿಕ್ಕೂ ಪ್ರಾಮಾಣಿಕತೆಯನ್ನು ಪಾಲಿಸಲಿಕ್ಕೂ ದಯೆ ಮತ್ತು ಕರುಣೆಯುಳ್ಳವರಾಗಲಿಕ್ಕೂ ಅನ್ಯರ ಹಕ್ಕುಗಳನ್ನು ಮಾನ್ಯಮಾಡಲಿಕ್ಕೂ ಬಂಧುಗಳನ್ನು ಪ್ರೀತಿಸಲಿಕ್ಕೂ ದುರ್ಬಲರನ್ನು ರಕ್ಷಿಸಲಿಕ್ಕೂ ಪಾಪದಿಂದ ದೂರವಿರಲಿಕ್ಕೂ ಎಲ್ಲಾ ವಿಧ ಕೆಡುಕುಗಳನ್ನು ವರ್ಜಿಸಲಿಕ್ಕೂ ಅವರು ಉಪದೇಶಿಸಿದರು. ಪ್ರಾರ್ಥನೆಗಳನ್ನು ಸಲ್ಲಿಸಲಿಕ್ಕೂ ದಾನಧರ್ಮಗಳನ್ನು ನೀಡಲಿಕ್ಕೂ ವ್ರತವನ್ನು ಅನುಷ್ಠಿಸಲಿಕ್ಕೂ ಕಲಿಸಿದರು. ನಾವು ಅವರನ್ನು ನಂಬಿ ಅವರನ್ನು ಅನುಸರಿಸಿ ಜೀವಿಸಲು ತೊಡಗಿದೆವು. ಆ ಕಾರಣದಿಂದ ನಾವು ಹಿಂಸೆಗೆ ಗುರಿಯಾಗಿ ತಮ್ಮ ಆಶ್ರಯವನ್ನು ಪಡೆಯುವಂತೆ ನಾವು ನಮ್ಮ ಊರಿನಿಂದ ಹೊರಗೆ ಓಡಿಸಲ್ಪಟ್ಟಿದ್ದೇವೆ.' "

ಅಬಿಸೀನಿಯಾದಲ್ಲಿ ಆಭಯ ಪಡೆದ ಮುಸ್ಲಿಮರನ್ನು ಮಕ್ಕಾಕ್ಕೆ ಮರಳಿ ಕರಕೊಂಡುಹೋಗಿ ಪುನಃ ಹಿಂಸೆಗಳಿಗೆ ಈಡುಮಾಡುವ ಉದ್ದೇಶದಿಂದ ಅವರಿಗೆದುರಾಗಿ ಅಲ್ಲಿಯ ರಾಜಸಭೆಯಲ್ಲಿ ಮಕ್ಕಾಜನರ ನಿವೇದನ ಸಂಘ ಸಲ್ಲಿಸಿದ ದೂರಿಗೆ ಮರುತ್ತರವಾಗಿ ಮುಸ್ಲಿಂ ವಕ್ತಾರ ಹಝ್ರತ್ ಜಅ್‌ಫರ್ (ರ) ಸಮರ್ಪಿಸಿದ ಕೈಫಿಯತ್ತಾಗಿದೆ ಮೇಲಿನ ಉದ್ಧರಣೆ. ಇದರಿಂದ ಪೈಗಂಬರರ ದೌತ್ಯಾರಂಭ ಮೊದಲ್ಗೊಂಡು ಐದು ವರ್ಷಗಳೊಳಗೆಯೇ ವಿಶ್ವಾಸಿಗಳಲ್ಲಿ ಎಷ್ಟು ಮಹತ್ತರವಾದೊಂದು ಪರಿವರ್ತನೆಯಾಯಿತೆಂದು ಮನಗಾಣಬಹುದು. "ಅರೇಬಿಯಾದ ಪ್ರವಾದಿಪುಂಗವ ತನ್ನ ಧರ್ಮಬೋಧನೆಗಳ ಮೂಲಕ ಆ ಅನಾಗರಿಕ ಜನತೆಗೆ ಒಂದು ನವಚೈತನ್ಯವನ್ನು ನೀಡಿದಾಗ ಅವರು ಸಮಸ್ತ ಪಾಶ್ಚಾತ್ಯ ಲೋಕಕ್ಕೂ ಗುರುಗಳಾಗಿ ಬಿಟ್ಟರು;

ವಿಜ್ಞಾನ, ದಿಗ್ವಿಜಯ ಮತ್ತು ದೈವಸಹಾಯದ ವೈಜಯಂತಿ ಒಂದು ಕಡೆಯಲ್ಲಿ ಬಂಗಾಳ ರಾಜ್ಯದ ಮೇಲೆಯೂ ಇನ್ನೊಂದು ಕಡೆಯಲ್ಲಿ ಸ್ಪೈನ್ ರಾಜ್ಯದ ಮೇಲೆಯೂ ಹಾರಾಡಲು ತೊಡಗಿತು." ಎಂಬಿತ್ಯಾದಿಯಾಗಿ ಪೈಗಂಬರರ ಮೂಲಕ ಅರಬಿಯರೆಡೆಯಲ್ಲಿ ಉಂಟಾದ ಬೃಹತ್ತಾದ ಆ ಪರಿವರ್ತನೆಯ ಪರಿಣತ ಫಲದ ಕುರಿತು ಡಾ। ಗೋಕುಲ್‌ಚಂದ್ ಪಿಎಚ್.ಡಿ., ಬಾರ್-ಅಟ್-ಲಾ (ಲಾಹೋರ್) ಹೇಳಿರುವರು. ಈ ಪ್ರಕಾರ, ಮುಹಮ್ಮದ್ ಪೈಗಂಬರರ ಅಧ್ಯಾಪನ ಮೂಲಕ ಜೀವಶಕ್ತಿಯೂ ಜ್ಞಾನಶಕ್ತಿಯೂ ಸಿದ್ಧಿಸಿದಾಗ ಅರಬಿಯರು ತಮಗೆ ದೊರೆತ ಆ ಜ್ಞಾನ ಮತ್ತು ನಾಗರಿಕತೆಯ ಪ್ರಕಾಶವನ್ನು ಹೊರದೇಶಗಳಿಗೂ ತಲಪಿಸುವರೆ ಅತ್ಯಂತ ಶ್ರದ್ಧೆವಹಿಸಿದರು. ಈ ಉತ್ಕೃಷ್ಟ ಪ್ರಜ್ಞೆಯಿಂದ ಪ್ರೇರಿತರಾಗಿ ಅವರು ಮಾಡತೊಡಗಿದ ಪ್ರವೃತ್ತಿ ಒಂದು ಸಾಮ್ರಾಜ್ಯವನ್ನು ಸ್ಥಾಪಿಸುವುದರಲ್ಲಿ ಪರ್ಯವಸಾನವಾಯಿತು. ಹಾಗಲ್ಲದೆ ಪೈಗಂಬರರ ದೌತ್ಯೋದ್ದೇಶ ಒಂದು ರಾಜ್ಯಾಡಳಿತೆಯನ್ನು ಸ್ಥಾಪಿಸುವುದಲ್ಲ; ದೇವೇಕತ್ವದ ಕುರಿತಿರುವ ವಿಶ್ವಾಸವನ್ನು ಮಾನವ ಹೃದಯಗಳಲ್ಲಿ ರೂಢಮೂಲ ಮಾಡಿ ಅವರನ್ನು ಸದಾಚಾರ ನಿಷ್ಠರನ್ನಾಗಿ ಮಾಡುವುದೂ ಪೈಶಾಚಿಕಾರಾಧನೆಗಳನ್ನು ಮತ್ತು ದುರಾಚಾರಗಳನ್ನು ತಡೆಯುವುದೂ ಆಗಿತ್ತು.

ಪೈಗಂಬರರ ಅಪದಾನಗಳನ್ನು ಪ್ರಶಂಸೆ ಮಾಡುತ್ತಾ ಮಾನ್ಯ ಶ್ರೀ ಸಾಧು ಟಿ. ಎಲ್. ವಾಸ್ವಾನಿ ಹೇಳಿರುವುದು ಇಲ್ಲಿ ಉಲ್ಲೇಖಾರ್ಹ: "ಜಗತ್ತಿನ ಪ್ರಬಲ ನಾಯಕರುಗಳಲ್ಲಿ ಓರ್ವರಾಗಿ ಮುಹಮ್ಮದ್ ಪೈಗಂಬರರನ್ನು ನಾನು ಪರಿಗಣಿಸಿ ಅಭಿವಾದಿಸುತ್ತೇನೆ. ಅವರು ಒಂದು ಲೋಕಶಕ್ತಿ – ಅನೇಕ ಜನತೆಗಳ ಪುರೋಗತಿಗೆ ಪ್ರೇರಕವಾದ ಒಂದು ಮಹಚ್ಛಕ್ತಿ! ಪುರಾತನ ದಾಖಲೆಗಳನ್ನು ಓದಿ ನೋಡುವುದಾದರೆ ನಿಮಗೆ ಅವರ ಜೀವಿತದ ಸೌಹಾರ್ದವನ್ನೂ ಸಾರಸ್ಯವನ್ನೂ ದರ್ಶಿಸಲು ಸಾಧ್ಯ. ಒಬ್ಬ ಸಾಮ್ರಾಟ ಹಾಗೂ ಅದೇ ಸಮಯದಲ್ಲಿ ಒಬ್ಬ ಆಧ್ಯಾತ್ಮಿಕ ಗುರು: ಹಾಗಿದ್ದರೂ ಅವರು ತನ್ನ ಹರಿದ ವಸ್ತ್ರಗಳನ್ನು ಹೊಲಿದು ಸರಿಪಡಿಸುತ್ತಾರೆ. ಅದೃಶ್ಯವಾದ ದೇವನ 'ಎಲೈ ವಸ್ತ್ರ ಹೊದೆದುಕೊಂಡಿರುವವನೇ ಎದ್ದೇಳು; ಜನರಿಗೆ ಉಪದೇಶ ನೀಡು.' ಎಂಬ ಕರೆಗೆ ಕಿವಿಗೊಡುತ್ತಾರೆ. ಜನರು ಪೈಗಂಬರರನ್ನು ಪೀಡಿಸುತ್ತಾರೆ; ಅವರ ಜೀವಕ್ಕೇ ಅಪಾಯವೊದಗುವ ಪರಿಸ್ಥಿತಿಯುಂಟಾಗಿದೆ. ಆದರೆ ಏನನ್ನೂ ಲಕ್ಷಿಸದೆ ಆ ದೈವಿಕ ಆಹ್ವಾನವನ್ನು ಭಕ್ತಿಯಿಂದ ಸ್ವೀಕರಿಸುತ್ತಾರೆ. ತನ್ನ ಶಾಂತಿಮಾರ್ಗವನ್ನು ಬೋಧಿಸುತ್ತಾ ಅವರು ಮುಂದುವರಿಯುತ್ತಾರೆ! ಮುಹಮ್ಮದ್ ಧೀರೋದಾತ್ತನಾದ ಓರ್ವ ಪ್ರವಾದಿಯಾಗಿದ್ದರು. ಸ್ವರ್ಗಸ್ಥನಾಗುವುದಕ್ಕೆ ಮುಂಚೆ ಅವರು ನುಡಿದ ಈ ಅಂತಿಮ ವಚನದ ಕುರಿತು ನಾನು ಸದಾ ಚಿಂತನೆಮಾಡುತ್ತೇನೆ: 'ನಾಥ, ನನ್ನನ್ನು ಕ್ಷಮಿಸು. ಅತ್ಯುನ್ನತನಾದ ನೀನು ನನಗೆ ಸಾಯುಜ್ಯವನ್ನು ದಯಪಾಲಿಸು.' ಇಂತಹ ಓರ್ವ ಮಹಾಪುರುಷ ಜೀವಿತದಲ್ಲಿ ಮನೋಹರನಾಗಿದ್ದ ಪ್ರಕಾರ ಮರಣದಲ್ಲೂ ಮನೋಹರನಾಗಿದ್ದರೆಂಬ ವಾಸ್ತವಾಂಶವನ್ನು ಯಾರು ಹೇಳದೆ ಬಿಡುವರು? ಅವರು ಬೋಧಿಸಿದ ಧರ್ಮದ ಹೆಗ್ಗಳಿಕೆಯ ಕುರಿತು ಒಂದು ನಿಮಿಷ ಚಿಂತಿಸಿ ನೋಡಿರಿ! ಪೌರೋಹಿತ್ಯವಿಲ್ಲದ ಒಂದು ಮತವನ್ನು ಅವರು ಲೋಕಕ್ಕೆ ಪ್ರದಾನ ಮಾಡಿದರು. ಇಸ್ಲಾಂ ಅರೇಬಿಯಾದಲ್ಲಿಡೀ ಶಿಶುವಧೆಯನ್ನು ತಡೆಯಿತು: ಮದ್ಯಪಾನವನ್ನು ಸಂಪೂರ್ಣವಾಗಿ ವರ್ಜಿಸಲಿಕ್ಕೆ ಅದರ ಅನುಯಾಯಿಗಳನ್ನು ಪ್ರೇರೇಪಿಸಿತು. ವಿಶ್ವಾಸ, ಧೈರ್ಯ, ಸಹನೆ, ತ್ಯಾಗ ಇತ್ಯಾದಿ ಮಹತ್‌ಗುಣಗಳ ಬಗ್ಗೆ ಅದು ನಿಷ್ಕೃಷ್ಟವಾಗಿ ಉಪದೇಶಿಸಿತು. ನೃತ್ಯ, ಜೂಜಾಟ ಇತ್ಯಾದಿಗಳನ್ನು ತೊರೆಯಲಿಕ್ಕೆ ಪ್ರೇರೇಪಿಸಿ ಇಸ್ಲಾಂ ಏಷ್ಯಾದಲ್ಲೂ ಯುರೋಪಿನಲ್ಲೂ ಅನಾಚಾರಗಳನ್ನು ತಡೆಗಟ್ಟಲು ಒಂದು ತೀವ್ರವಾದ ಯೋಜನೆಗೆ ತಳಪಾಯ ಹಾಕಿಕೊಟ್ಟಿತು."

ಹತ್ತೊಂಭತ್ತನೆಯ ಶತಮಾನದ ಪ್ರಸಿದ್ಧ ಆಂಗ್ಲ ಸಾಹಿತ್ಯಗಾರನಾದ ತೋಮಸ್ ಕಾರ್ಲೈಲ್ ಹೇಳಿರುವುದು ಸ್ಮರಣಾರ್ಹವಾಗಿದೆ: "ಅರಬಿ ಜಾತಿಗೆ ಅದು (ಪೈಗಂಬರರ ದೌತ್ಯ) ಅಂಧಕಾರದಿಂದ ಪ್ರಕಾಶದೆಡೆಗಿರುವ ಒಂದು ಜನ್ಮವಾಗಿತ್ತು. ಅರೇಬಿಯಾಕ್ಕೆ ಮೊದಲಿಗೆ ಜೀವಬಂದದ್ದು ಅದರ ಮೂಲಕವಾಗಿದೆ." "ಈ ಅರಬಿಯರು, ಮನುಷ್ಯನಾದ ಮುಹಮ್ಮದ್,

ಆ ಒಂದು ಶತಮಾನ – ಎಂತಹ ಪರಿವರ್ತನೆ! ಗಮನಾರ್ಹವಲ್ಲದೆ ತೋರಿದ ಆ ಕತ್ತಲೆಯ ಮರಳು ಪ್ರದೇಶದ ಮೇಲೆ ಒಂದು ಅಗ್ನಿಸ್ಫುಲಿಂಗ ಎರಗಿದ ರೀತಿಯಲ್ಲವೇ ಅದು? ಒಂದೇ ಒಂದು ಅಗ್ನಿಕಣ! ಆದರೆ ನೋಡಿರಿ: ಆ ಪ್ರತಿಯೊಂದು ಮರಳ ಹರಳು ಸ್ಫೋಟನಗೊಳ್ಳುವ ಸಿಡಿಮದ್ದಾಗಿ ಮಾರ್ಪಡುತ್ತದೆ. ಅದು ದೆಹಲಿಯಿಂದ ಗ್ರಾನಡಾ (ಸ್ಪೈನ್) ತನಕ ಗಗನದೆತ್ತರ ಉಜ್ವಲಿಸುತ್ತದೆ!"

ಅನೇಕ ಗ್ರಂಥಗಳ ಕರ್ತೃ ಮಿ। ಎಲ್. ಸ್ಟೊಡಾರ್ಡ್ ಪಿ. ಎಚ್. ಡಿ. 'ಇಸ್ಲಾಮಿನ ನೂತನ ಲೋಕ' ಎಂಬ ಶೀರ್ಷಿಕೆಯಲ್ಲಿ ಬರೆದ ಗ್ರಂಥದಲ್ಲಿ, ಖಂಡನಾ ರೂಪದಲ್ಲಿ ನಿರೂಪಿಸುತ್ತಿದ್ದರೂ ಪೈಗಂಬರರ ಮಹಾತ್ಮೆಯನ್ನು ಈ ಪ್ರಕಾರ ಎತ್ತಿ ಹೇಳಲು ನಿರ್ಬಂಧಿತರಾದರು: "ಅರಬಿಯರ ಕರ್ಣಗಳಿಗೆ ಇಸ್ಲಾಮಿನ ಸಂದೇಶ ಒಂದು ವಿಜಯ ಕಹಳೆಯಂತೆ ಬಂದು ಬಡಿಯಿತು. ಅರಬಿಯರಲ್ಲಿ ಅರಬಿಯಾದ ಮುಹಮ್ಮದ್ ಪೈಗಂಬರ್ ಅರಬಿ ವಂಶದ ಆತ್ಮವೇ ಆಗಿದ್ದರು. ಅವರ ಉಪದೇಶಗಳ ಲಾಲಿತ್ಯ, ಅಚಲ ಏಕದೇವ ವಿಶ್ವಾಸ, ದೇವರಿಗೂ ಮನುಷ್ಯನಿಗೂ ಮಧ್ಯೆ ಪುರೋಹಿತನಿಲ್ಲದಿರುವುದು ಎಂಬೀ ಗುಣಗಳು ಸೆಮಿಟಿಕ್ ಹೃದಯಗಳ ಧರ್ಮಪ್ರಜ್ಞೆಯ ಒರತೆಗಳನ್ನು ಕಬಳಿಸಿಬಿಟ್ಟಿತು. ಅನ್ಯೋನ್ಯ ಕಚ್ಚಾಡಿ ತಲೆಒಡೆದು ನುಚ್ಚುನೂರು ಮಾಡುವ ಮನಸ್ಥಿತಿ ಬದಲಾಗಿ, ನವೀನ ಧರ್ಮಪ್ರಜ್ಞೆಯಿಂದ ಸ್ನೇಹವೂ ಸಾಹೋದರ್ಯವೂ ತುಂಬಿತುಳುಕುವ ಒಂದು ಜನತೆಯಾಗಿ ಒಟ್ಟುಗೂಡಿ. ಸತ್ಯೇಕದೇವನಾದ ಅಲ್ಲಾಹನ ಸಂದೇಶವನ್ನು ಅವರು ದಿಗಂತಗಳಲ್ಲಿ ಮೊಳಗಿಸಿದರು."

ಪ್ರಸಿದ್ಧ ರಾಷ್ಟ್ರಪ್ರೇಮಿ ಹಾಗೂ ಭಾರತ ಸ್ವಾತಂತ್ರ್ಯ ಸಮರದ ಅಧಿನಾಯಕರಲ್ಲಿ ಒಬ್ಬರಾದ ದಿವಂಗತ ಶ್ರೀ ಲಾಲಾ ಲಜಪತ್‌ರಾಯ್ ಅವರ ಪ್ರಸ್ತಾವನೆ ಸಹ ಗಮನಾರ್ಹವಾಗಿದೆ: "ಇಸ್ಲಾಮಿನ ಪ್ರವಾದಿಯವರ ಹೆಸರಿನಲ್ಲಿ ನನಗಿರುವ ಅತಿಯಾದ ಗೌರವಾದರವನ್ನು ಬಹಿರಂಗಪಡಿಸಲು ನಾನೇನೂ ಹಿಂಜರಿಯುವುದಿಲ್ಲ. ಧರ್ಮಗುರುಗಳು ಮತ್ತು ಮತ ಸುಧಾರಕರುಗಳ ಪೈಕಿ ಅತ್ಯುತ್ಕೃಷ್ಟ ಹಾಗೂ ಅಗ್ರಗಣ್ಯವಾದೊಂದು ಪದವಿಯನ್ನು ಅವರು ಅಲಂಕರಿಸುತ್ತಾರೆಂಬುದೇ ನನ್ನ ಅಭಿಪ್ರಾಯ."

ಪವಿತ್ರ ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರನ್ನು ಅನ್ಯಾದೃಶವಾದ ರೀತಿಯಲ್ಲೂ ಅತ್ಯಧಿಕವಾಗಿಯೂ ಶ್ಲಾಘಿಸಿದ ಹಝ್ರತ್ ಅಹ್ಮದ್ (ಅಹ್ಮದಿಯಾ ಜಮಾಅತಿನ ಸ್ಥಾಪಕರು) ಅರಬಿ ಭಾಷೆಯಲ್ಲಿ ವಿರಚಿಸಿದ ಒಂದು ಸ್ತುತಿಗಾನದಿಂದ ಕೆಲವು ಚರಣಗಳನ್ನು ಇಲ್ಲಿ ಉದ್ಧರಿಸುತ್ತಾ ಈ ಲೇಖನವನ್ನು ಸಮಾಪ್ತಿಗೊಳಿಸುತ್ತೇನೆ. ಪೈಗಂಬರರ ಉತ್ಕೃಷ್ಟ ಗುಣಕರ್ಮಸ್ವಭಾವಗಳನ್ನು ಪ್ರಶಂಸೆ ಮಾಡಿದ ನಂತರ ಹಝ್ರತ್ ಅಹ್ಮದ್ (ಅ) ಹೀಗೆ ಹೇಳುತ್ತಾರೆ:

لاشك ان محمدا خير الورى

ريق الكرام و نخبة الاعيان

ನಿಸ್ಸಂದೇಹವಾಗಿಯೂ ಮುಹಮ್ಮದ್ (ಸ) ಮನುಷ್ಯ ರಾಶಿಯಲ್ಲಿ ಅತ್ಯುತ್ತಮರೂ ವಂದ್ಯರಲ್ಲಿ ವಂದ್ಯರೂ ವರಿಷ್ಠರಲ್ಲಿ ವರಿಷ್ಠರೂ ಆಗಿದ್ದಾರೆ.

تمت عليه صفات كل مزية

ختمت به نعماء كل زمان

ಸರ್ವಶ್ರೇಷ್ಠ ಗುಣಗಳೂ ಪೈಗಂಬರರಲ್ಲಿ ಪೂರ್ಣತೆಯನ್ನು ಗಳಿಸಿರುತ್ತದೆ: ಎಲ್ಲಾ ಕಾಲದ ಅನುಗ್ರಹಗಳು ಪೈಗಂಬರರಲ್ಲಿ ಗೊನೆಗೊಂಡಿವೆ.

والله ان محمدا كرداقة

وبه الوصول بسدة السلطان

ಅಲ್ಲಾಹನಾಣೆ, ಮುಹಮ್ಮದ್ (ಸ) ಅಲ್ಲಾಹನ ಪ್ರತಿನಿಧಿಗೆ ಸಮಾನರು. ಸಾಮ್ರಾಟನ ಸನ್ನಿಧಿಗೆ ಪ್ರವೇಶ ಆ ಮಹಾಪುರುಷನ ಮೂಲಕ ಮಾತ್ರವೇ ಸಾಧ್ಯ.

هو فخر كل مطهر و مقدس

وبه يباهى العسكر الروحان

# ಪ್ರವಾದಿತ್ವ ಸಮಾಪ್ತಿಯ ನಿಜಸ್ವರೂಪದ ಕುರಿತು ಹದೀಸು ನೀಡುವ ಸಾಕ್ಷ್ಯಗಳು

ಉರ್ದು ಮೂಲ: ಮಿರ್ಝಾ ಬಶೀರ್ ಅಹ್ಮದ್ ಎಂ. ಎ.    ಅನುವಾದ: ಎಂ. ಉಬೈದುಲ್ಲಾ

ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿಯ ಕುರಿತು ಪವಿತ್ರ ಖುರ್‌ಆನಿನ ಸಾಕ್ಷ್ಯಗಳನ್ನು ಸಂಕ್ಷಿಪ್ತವಾಗಿ. ಆದರೆ ದೇವರ ದಯದಿಂದ ಪರಿಪೂರ್ಣವಾಗಿ. ನಿಮ್ಮ ಮುಂದೆ ಇರಿಸಿದ ನಂತರ ಈಗ ನಾನು ಆ ಬಗ್ಗೆಯಿರುವ ಹದೀಸು (ನಬಿವಚನ) ಗಳ ವಿವರಣೆ ನೀಡಬಯಸುತ್ತೇನೆ. ಈ ಗ್ರಂಥದ ಆರಂಭದಲ್ಲಿಯೇ ನಾನು ಸೂಚಿಸಿರುವಂತೆ ಬಾಹ್ಯವಾಗಿ ಒಂದು ಹದೀಸು ಎಷ್ಟು ಉನ್ನತ ಸ್ಥಾನವನ್ನು ಪಡೆದಿದ್ದರೂ ಅದು ಪವಿತ್ರ ಖುರ್‌ಆನಿನ ಮುಂದುಗಡೆ ಬರುವಾಗ ಸಂಶಯಾತ್ಮಕವಾಗಿಯೇ ಪರಿಗಣಿಸಬೇಕಾಗಿದೆ. ಆದರೆ ನನ್ನಿಂದ ಭಿನ್ನಾಭಿಪ್ರಾಯಗಳನ್ನು ಹೊಂದಿದವರನ್ನು ಸಮಾಧಾನ ಪಡಿಸುವುದು ನನ್ನ ಉದ್ದೇಶವಾದುದರಿಂದಲೂ ಈ ಚಿಕ್ಕ ಗ್ರಂಥದಲ್ಲಿ ಇದರ ಕುರಿತು ವಿಸ್ತಾರವಾಗಿ ಪ್ರತಿಪಾದಿಸಲು ಸಾಧ್ಯವಿಲ್ಲದುದರಿಂದಲೂ ಈಗ ನಾನು ವಿವಿಧ ಹದೀಸುಗಳ ಸಹೀಹ್ (ಸರಿಯಾದುದು), ಝಈಫ್ (ಬಲಹೀನವಾದುದು) ಎಂಬ ವ್ಯತ್ಯಾಸಗಳನ್ನು ಪರಿಗಣಿಸದೆ ಇಲ್ಲಿ ಸೂಚಿಸಲಾಗುವ ಎಲ್ಲಾ ಹದೀಸುಗಳನ್ನು ಸಹೀಹ್ (ಸರಿಯಾದುದು) ಎಂದೇ ಪರಿಗಣಿಸಿ ಅವುಗಳಿಗೆ ಅನುಯೋಜ್ಯವಾದ ಅರ್ಥ ವಿವರಣೆ ನೀಡಲು ಪ್ರಯತ್ನಿಸುವೆನು. وما توفيقى الا بالله العظيم (ಮಹತ್ವಶಾಲಿಯಾದ ಅಲ್ಲಾಹನ ಅನುಗ್ರಹದಿಂದಲ್ಲದೆ ನನಗೆ ಇದು ಸಾಧ್ಯವಾಗದು.)

ಮೊದಲನೆಯದಾಗಿ ನಾನು ಸಕಾರಾತ್ಮಕವಾದ ಹದೀಸುಗಳನ್ನು ವಿವರಿಸಲು ಇಚ್ಛಿಸುತ್ತೇನೆ. ನಮ್ಮ ಅಭಿಪ್ರಾಯದ ಪ್ರಕಾರ ಈಗ ವಿವರಿಸಲಿರುವ ಹದೀಸುಗಳು ಹಝ್ರತ್ ಪೈಗಂಬರ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರ ನಂತರ ಪ್ರತಿಬಿಂಬ ರೂಪದ ಅಥವಾ ನೆರಳಿನ ರೂಪದ ظلى ನುಬುವ್ವತ್‌ನ ಮಾರ್ಗವು ತೆರೆದಿರುವುದಾಗಿ ಸಾಬೀತಾಗುತ್ತದೆ. ಹಝ್‌ರತ್ ಮುಹಮ್ಮದ್ ರಸೂಲ್ (ಸ) ರ ನಂತರ ಶರೀಅತನ್ನು ತರುವ ನಬಿಗಳು ಮತ್ತು ಪೈಗಂಬರರನ್ನು ಅನುಸರಿಸದೆ ಸ್ವತಂತ್ರವಾಗಿ ನುಬುವ್ವತ್ ಗಳಿಸುವ ಮುಸ್ತಖಿಲ್ ನಬಿಗಳೂ ಬರಲು ಸಾಧ್ಯವಿಲ್ಲ. ಆದರೆ ಮುಹಮ್ಮದ್ ಪೈಗಂಬರ್ (ಸ)ರಿಂದ ಅನುಗ್ರಹ ಪಡೆದು ಅವರ ಪ್ರಕಾಶದಿಂದ ಪ್ರಕಾಶವನ್ನು ಗಳಿಸಿ ಅವರ ಶಿಷ್ಯನಾಗಿ ಉಮ್ಮತೀ ನಬಿ [امتى نبى] ಬರಲು ಸಾಧ್ಯವಿದೆ. ನಾವು ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ಈ ರೀತಿಯ "ಝಿಲ್ಲೀ" ಹಾಗೂ ಶಿಷ್ಯಪ್ರವಾದಿ (ಉಮ್ಮತೀ ನಬಿ) ಯಾಗಿ ನಂಬುತ್ತೇವೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಹಝ್‌ರತ್ ಮುಹಮ್ಮದ್ ರಸೂಲ್ (ಸ) ರನ್ನು ಅನುಸರಿಸಿ ಅವರ ಶಿಷ್ಯತ್ವದ ಅನುಗ್ರಹದಿಂದ ನುಬುವ್ವತಿನ (ಪ್ರವಾದಿತ್ವದ) ಬಹುಮಾನ

---

(25ನೇ ಪುಟದಿಂದ)

ಪೈಗಂಬರರು ಸಕಲ ಪಾವನ ಹಾಗೂ ಪರಿಶುದ್ಧ ಜನರಿಗೆ ಅಭಿಮಾನಸ್ತಂಭವಾಗಿರುವ ಮಹಾಪುರುಷರು. ಅಧ್ಯಾತ್ಮ ಸೇನಾ ಸಮೂಹ ಅವರ ಸದ್ಭಾವದಲ್ಲಿ ಅಭಿಮಾನಪಡುತ್ತದೆ.

هو خير كل مقرب و متقدم
والفضل بالخيرات لا بزمان

ದೈವೋಪಲಬ್ಧಿಯಿಂದ ಅನುಗ್ರಹೀತರಾದ ಪೂರ್ವಿಕ ಮಹಾತ್ಮರುಗಳಲ್ಲಿ ಪೈಗಂಬರರು ಅತ್ಯಂತ ಶ್ರೇಷ್ಠರು. ಈ ಅನುಗ್ರಹಲಬ್ಧಿ ಅವರ ಉತ್ಕೃಷ್ಟ ಕರ್ಮಸ್ವಭಾವದಿಂದಾಗಿದೆ; ಕಾಲಭೇದದಿಂದಲ್ಲ. ★

ಗಳಿಸಿದರೆಂದು ನಮ್ಮ ನಂಬಿಕೆಯಾಗಿದೆ. ಮೊದಲನೆಯ ದಾಗಿ ನಾನು ಮುಹಮ್ಮದ್ ರಸೂಲ್ (ಸ)ರ ಆಗಮನದ ನಂತರವೂ ನಬಿಗಳು ಬರಲು ಸಾಧ್ಯವಿದೆ ಎಂಬುದನ್ನು ಸೂಚಿಸುವ ಸಕಾರತ್ಮಕವಾದ ಹದೀಸುಗಳನ್ನು ವಿವರಿಸು ವೆನು. ಅನಂತರ ನಕಾರಾತ್ಮಕವಾದ ಹದೀಸುಗಳನ್ನು ಎಂದರೆ ನಮ್ಮ ವಿರೋಧಿಗಳು ಮುಹಮ್ಮದ್ ಪೈಗಂಬರ್ (ಸ) ರ ನಂತರ ಪ್ರವಾದಿಗಳ ಬರುವಿಕೆಯ ಬಾಗಿಲು ಮುಚ್ಚಿದೆ ಎಂದು ಅವರು ಭಾವಿಸುವುದಕ್ಕೆ ಆಧಾರವಾಗಿರುವ ಹದೀಸುಗಳನ್ನು ವಿವರಿಸುವೆನು.

## ಹಝ್ರತ್ ಮುಹಮ್ಮದ್ ರಸೂಲ್ (ಸ)ರ ಪುತ್ರ ಇಬ್ರಾಹೀಂ ಜೀವಿಸಿರುತ್ತಿದ್ದರೆ ಖಂಡಿತವಾಗಿಯೂ ನಬಿಯಾಗುತ್ತಿದ್ದರು

ಈ ವಿಷಯದ ಕುರಿತು ನಾನು ನಿರೂಪಿಸಲಿರುವ ಮೊದಲನೆಯ ಹದೀಸು ನಮ್ಮ ಹಝ್ರತ್ ಮುಹಮ್ಮದ್ ಮುಸ್ತಫಾ (ಸ) ರ ಸುಪುತ್ರರಾದ ಇಬ್ರಾಹೀಮರ ಕುರಿತಾಗಿದೆ. ಇಬ್ರಾಹೀಂ ಹಝ್ರತ್ ಮಾರಿಯಾ ಖಿಬ್ತಿಯಾರ ಗರ್ಭದಿಂದ ಹಿಜರಿ ಎಂಟನೆಯ ವರ್ಷದಲ್ಲಿ ಜನಿಸಿದ್ದರು. (ತಬರೀ, ಝುರ್ಖಾನಿ ಮತ್ತು ತಾರೀಖೆ ಖಮೀಸ್ ಗ್ರಂಥಗಳನ್ನು ನೋಡಿರಿ). ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರಿಗೆ ನುಬುವ್ವತ್ ದೊರೆತ ನಂತರ ಅವರಿಗೆ ಜನಿಸಿದ ಮೊದಲನೆಯ ಪುತ್ರ ಇಬ್ರಾಹೀಂ ಆಗಿದ್ದುದರಿಂದ ಅವರ ಮೇಲೆ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಬಹಳ ಹೆಚ್ಚು ಪ್ರೀತಿ ಇತ್ತು. ನುಬುವ್ವತ್ ಪದವಿ ದೊರೆಯುವ ಮೊದಲು ಹಝ್ರತ್ ಖದೀಜ (ರ. ಅ.) ರವರ ಗರ್ಭದಲ್ಲಿ ಪೈಗಂಬರ್ (ಸ)ರಿಗೆ ಜನಿಸಿದ ಗಂಡುಮಕ್ಕಳೆಲ್ಲರೂ ನಿಧನ ಹೊಂದಿದ್ದರು. ಅಲ್ಲಾಹನ ತೀರ್ಮಾನದಂತೆ ಪೈಗಂಬರ್ (ಸ) ರ ಈ ಪುತ್ರ ಜನಿಸಿ 17–18 ತಿಂಗಳು ಆಗುವುದರೊಳಗೆ ಮೃತರಾದರು. ಈ ಮರಣದಿಂದ ಹಝ್ರತ್ ಮುಹಮ್ಮದ್ ರಸೂಲ್ (ಸ)ರಿಗೆ ಸ್ವಾಭಾವಿಕವಾಗಿ ಬಹಳ ದುಃಖವಾಯಿತು. ಅವರ ಕಣ್ಣಿನಿಂದ ಕಣ್ಣೀರು ಹರಿಯಿತು. ಆದರೆ ಅವರು ದುಃಖಾತಿರೇಕದಿಂದ ಇಷ್ಟು ಮಾತ್ರ ಹೇಳಿದರು:

انا بفراقك يا ابراهيم لمحزونون

"ಓ ಇಬ್ರಾಹೀಮ್, ನಾವು ನಿನ್ನ ನಿರ್ಗಮನದಿಂದ ಬಹಳ ದುಃಖಿತರಾಗಿದ್ದೇವೆ."

ಅದರ ಜೊತೆಯಲ್ಲಿ ಹಝ್ರತ್ ಮುಹಮ್ಮದ್ ರಸೂಲ್ (ಸ) ಹೀಗೆಯೂ ಹೇಳಿದರು:

لوعاش ابراهيم لكان صديقا نبيا

"ನನ್ನ ಮಗ ಇಬ್ರಾಹೀಮ್ ಜೀವಿಸಿರುತ್ತಿದ್ದರೆ ಆತನು ಖಂಡಿತವಾಗಿಯೂ ಸತ್ಯವಂತನಾದ (ಸಿದ್ದೀಖನ್) ನಬಿಯಾಗುತ್ತಿದ್ದನು." (ಇಬ್ನು ಮಾಜ ಕಿತಾಬುಲ್ ಜನಾಯಿಝ್)

## "ಸಿದ್ದೀಖನ್ ನಬಿಯ್ಯ" ಎಂಬ ಸಾಂಕೇತಿಕ ಪದಗಳಲ್ಲಿ ಸೂಕ್ಷ್ಮವಾಗಿರುವ ಸೂಚನೆ

ಇಲ್ಲಿ ಸಿದ್ದೀಖನ್ ನಬಿಯ್ಯ ಎಂಬ ಪದಗಳನ್ನು ಉಪಯೋಗಿಸಿದುದು ಪೈಗಂಬರ್‌ಸುತ ಇಬ್ರಾಹೀಮರ ಸ್ಥಾನದ ಮೇಲ್ಮೆಯನ್ನು ತೋರಿಸುವುದಕ್ಕಾಗಿದೆ. ಇಬ್ರಾಹೀಮರು ಜೀವಿಸುತ್ತಿದ್ದರೆ ಅವರಲ್ಲಿ ಸಿದ್ದೀಖಿಯತ್ ಮತ್ತು ನುಬುವ್ವತ್ ಇವೆರಡರ ಅನುಗ್ರಹಗಳೂ ಗುಣಗಳೂ ಸಮ್ಮೇಳಿಸುತ್ತಿದ್ದುವು. ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ಇದ್ರೀಸ್ ಅಲೈಹಿಸ್ಸಲಾಮರ ಕುರಿತು ಸಿದ್ದೀಖನ್ ನಬಿಯ್ಯ ಎಂಬ ಪದ ಪ್ರಯೋಗಿಸಲ್ಪಟ್ಟಿದೆ. (ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಮತ್ತು ಹಝ್ರತ್ ಇದ್ರೀಸ್ ಅಲೈಹಿಸ್ಸಲಾಮರ ಕುರಿತು ಮಾತ್ರ ಈ ಪದಗಳನ್ನು ಪ್ರಯೋಗಿಸಲಾಗಿದೆ) ಹಝ್ರತ್ ಇದ್ರೀಸ್ ಅಲೈಹಿಸ್ಸಲಾಮರ ಕುರಿತು ಸಿದ್ದೀಖನ್ ನಬಿಯ್ಯ ಎಂದು ಹೇಳಿದ ನಂತರ ಅವರ ಕುರಿತು ಮುಂದುವರಿಯುತ್ತಾ رفعنه مكانا عليا "ನಾವು ಇದ್ರೀಸರನ್ನು ಒಬ್ಬ ಉನ್ನತ ಸ್ಥಾನಗಳಿಸಿದ ನಬಿಯನ್ನಾಗಿ ಮಾಡಿದ್ದೆವು" (19:58) ಎಂದು ಹೇಳಲಾಗಿದೆ.

ಹಝ್ರತ್ ರಸೂಲ್ (ಸ) ತನ್ನ ಪುತ್ರನಾದ ಇಬ್ರಾಹೀಮ್ ಜೀವಿಸಿರುತ್ತಿದ್ದರೆ ಬಹಳ ಮಹತ್ವಶಾಲಿಯಾದ ನಬಿಯಾಗುತ್ತಿದ್ದರೆಂದು ಈ ವಚನದ ಮೂಲಕ ವ್ಯಕ್ತಗೊಳಿಸಿರುವರು. ಆ ಪುತ್ರನಲ್ಲಿ ಸ್ವಾಭಾವಿಕವಾಗಿ ಬಹಳ ಉನ್ನತವಾದ ಶಕ್ತಿಗಳು ಒಳಗೊಂಡಿದ್ದುವೆಂದು

ಸಹ ಇದರಿಂದ ತಿಳಿಯುತ್ತದೆ. ಸಿದ್ದೀಖಿನ್ ನಬಿಯ್ಯ ಎಂಬ ವಚನದಲ್ಲಿ ಇನ್ನೊಂದು ಸೂಕ್ಷ್ಮ ವಿಚಾರದ ಕುರಿತು ಸಹ ಸೂಚನೆಯಿದೆ. ಸಿದ್ದೀಖ್ ಸ್ಥಾನ ಒಬ್ಬ ನಬಿಯ ಸ್ಥಾನಕ್ಕಿಂತ ಕೆಳಮಟ್ಟದ್ದಾದುದರಿಂದ ಇಬ್ರಾಹೀಮ್ ತನ್ನ ಉನ್ನತವಾದ ಸ್ಥಾನಮಾನಗಳ ಕಾರಣ ನಬಿಯಾಗುತ್ತಿದ್ದರೂ ಹಝ್ರತ್ ಪೈಗಂಬರರ ಅಧೀನಕ್ಕೊಳಪಟ್ಟು ಹಝ್ರತ್ ಪೈಗಂಬರರ ಅನುಗ್ರಹದಿಂದಲೇ ಉನ್ನತಿಯನ್ನು ಪಡೆಯುತ್ತಿದ್ದರು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಇದರ ಅರ್ಥ ಇಬ್ರಾಹೀಮ್ ಝಿಲ್ಲೀ ಅಥವಾ ಉಮ್ಮತೀ ನಬಿ (ಶಿಷ್ಯನಬಿ) ಆಗುತ್ತಿದ್ದರು. ಅವರು ಹೊಸ ಶರೀಅತ್ ತರುವ ನಬಿಯಾಗಲೀ ಸ್ವತಂತ್ರ (ಮುಸ್ತಖಿಲ್) ನಬಿಯಾಗಲೀ ಆಗುತ್ತಿರಲಿಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ.

ಒಟ್ಟಾರೆ ಹೇಳುವುದಾದರೆ, ಸಿಹಾಹ್‌ಸಿತ್ತ ಎಂಬ ಹದೀಸಿನ ಅತ್ಯಂತ ವಿಶ್ವಸನೀಯವಾದ ಆರು ಸಂಗ್ರಹ ಗಂಥಗಳಲ್ಲಿ ಒಂದಾದ ಇಬ್ನು ಮಾಜದಲ್ಲಿ ಉಲ್ಲೇಖಿತವಾಗಿರುವ ಈ ಹದೀಸಿನ ಮೂಲಕ ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ರಸೂಲ್ (ಸ) ಅತ್ಯಂತ ನಿಖರವಾಗಿಯೂ ಸ್ಪಷ್ಟವಾಗಿಯೂ ಹೇಳಿರುವುದು, "ನನ್ನ ಮಗ ಇಬ್ರಾಹೀಮ್ ಜೀವಂತನಾಗಿ ಇರುತ್ತಿದ್ದರೆ ಖಂಡಿತವಾಗಿಯೂ ನಬಿಯಾಗುತ್ತಿದ್ದನು" ಎಂದಾಗಿದೆ. ಇಷ್ಟು ಸ್ಪಷ್ಟವಾದ ಉಲ್ಲೇಖವಿರುವಾಗ ನಮ್ಮ ವಿರೋಧಿಗಳಿಗೆ ಎರಡೇ ಎರಡು ದಾರಿಗಳು ತೆರೆದಿವೆ:

1. ಅವರು ಈ ರೀತಿ ಹೇಳಬೇಕು: (ಅಲ್ಲಾಹು ಹಾಗೆ ಹೇಳುವುದರಿಂದ ನಮ್ಮನ್ನು ರಕ್ಷಿಸಲಿ) "ಅಲ್ಲಾಹನು ಇಬ್ರಾಹೀಮ್‌ರನ್ನು ಮೃತಪಡಿಸಲು ಕಾರಣ ಅವರು ದೊಡ್ಡವನಾಗಿ ನಬಿಯಾಗದಿರಲಿ ಎಂದು." ಆದರೆ ಈ ಮಾತು ಬಹಳ ಲಘುವಾದ ಮೂರ್ಖತನದ ಮಾತಾಗಿದೆ. ಇದರ ಅರ್ಥ ಈ ರೀತಿ ಆಗುತ್ತದೆ: (ಅಲ್ಲಾಹು ಈ ರೀತಿ ಅರ್ಥೈಸುವುದರಿಂದ ನಮ್ಮನ್ನು ರಕ್ಷಿಸಲಿ) ಅಲ್ಲಾಹನು ಮರೆತು ಇಬ್ರಾಹೀಮ್‌ರನ್ನು ಭೂಮಿಗೆ ಕಳುಹಿಸಿದನು. ಅನಂತರ ಅಲ್ಲಾಹನಿಗೆ ಜ್ಞಾಪಕ ಬಂತು. ನಾನು ನನ್ನ ರಸೂಲರನ್ನು ಖಾತಮುನ್ನಬಿಯ್ಯೀನ್ ಆಗಿ ಮಾಡಿರುವೆನು. ಆದುದರಿಂದ ಇಬ್ರಾಹೀಮ್‌ರನ್ನು ಮೃತಪಡಿಸಿ ಅವರ ಕತೆ ಮುಗಿಸಿದನು. ಇದಕ್ಕಿಂತಲೂ ಅವಿವೇಕದ ವ್ಯಾಖ್ಯಾನ ಈ ಹದೀಸಿಗೆ ನೀಡಲು ಸಾಧ್ಯವಿದೆಯೇ?

2. ನಮ್ಮ ವಿರೋಧಿಗಳು ಕೈಗೊಳ್ಳಬೇಕಾದ ಎರಡನೆಯ ಕಾರ್ಯವಿಧಿ ಈ ರೀತಿಯಾಗಿದೆ: ಅವರು ಅಲ್ಲಾಹನಿಗೆ ಭಯಪಟ್ಟು ತಮ್ಮ ಹಠಮಾರಿತನವನ್ನು ತೊರೆದು ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರ ಉಮ್ಮತ್‌ನಲ್ಲಿ ನಬಿ ಬರಬಹುದೆಂದೂ ಆಯತ್ ಖಾತಮುನ್ನಬಿಯ್ಯೀನ್ ಇದಕ್ಕೆ ವಿರುದ್ಧವಲ್ಲವೆಂದೂ ಸಮ್ಮತಿಸಬೇಕಾಗಿದೆ. ಖಾತಮುನ್ನಬಿಯ್ಯೀನ್ ಆಯತ್ ಶರೀಅತನ್ನು ತರುವ ನಬಿಗಳ ಬರುವಿಕೆಯನ್ನೂ ಸ್ವತಂತ್ರರಾದ ಮುಸ್ತಖಿಲ್ ನಬಿಗಳ ಬರುವಿಕೆಯನ್ನೂ ತಡೆಯುತ್ತದೆ ಹೊರತು ಹೊಸ ಶರೀಅತ್ ತರದ ಉಮ್ಮತೀ ನಬಿಯ ಬರುವಿಕೆಯನ್ನು ತಡೆಯುವುದಿಲ್ಲವೆಂದು ಒಪ್ಪಬೇಕಾಗಿದೆ.

## ಖಾತಮುನ್ನಬಿಯ್ಯೀನ್ ಆಯತ್ ಅವತೀರ್ಣವಾಗಿ ಕೆಲವು ವರ್ಷಗಳ ನಂತರ ಪೈಗಂಬರ್ (ಸ)ರಿಗೆ ಪುತ್ರ ಇಬ್ರಾಹೀಮ್ ಜನಿಸಿದ್ದರು

ಈ ಸಂದರ್ಭದಲ್ಲಿ ಆಯತ್ ಖಾತಮುನ್ನಬಿಯ್ಯೀನ್ ಹಿಜರಿ 5ನೇ ವರ್ಷದಲ್ಲಿ ಅವತೀರ್ಣವಾಯಿತೆಂಬುದನ್ನು ಜ್ಞಾಪಿಸಬೇಕಾಗಿದೆ. (ಇಬ್ನು ಹಿಶಾಮ್, ತಬರೀ ಮತ್ತು ತಾರೀಖೆ ಖಮೀಸ್ ನೋಡಿರಿ). ಪೈಗಂಬರ ಪುತ್ರ ಇಬ್ರಾಹೀಮರ ನಿಧನ ಹಿಜರಿ 9ರಲ್ಲಿ ಅಥವಾ 10ರಲ್ಲಿ ಆಯಿತು. (ತಬರೀ ಮತ್ತು ಝುರ್ಖಾನಿಯ ಗ್ರಂಥಗಳನ್ನು ನೋಡಿರಿ)

ಇದರಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಹಝ್ರತ್ ರಸೂಲ್ (ಸ) ರು ತನ್ನ ಮಗನ ಕುರಿತು, ಅವರು ಜೀವಿಸುತ್ತಿದ್ದರೆ ನಬಿಯಾಗುತ್ತಿದ್ದರು ಎಂದು ಹೇಳುವಾಗ ಅದಕ್ಕಿಂತ 5 ವರ್ಷ ಮೊದಲೇ ಖಾತಮುನ್ನಬಿಯ್ಯೀನ್ ಆಯತ್ ಅವತೀರ್ಣವಾಗಿದ್ದಿತು.

ಹಝ್ರತ್ ರಸೂಲ್ (ಸ) ರಿಗೆ ಚೆನ್ನಾಗಿ ತಿಳಿದಿದ್ದಿತು ತನ್ನ ಕುರಿತು ಖತಮೇ ನುಬುವ್ವತಿನ ತೀರ್ಮಾನ ಆಗಿದೆ ಯೆಂದು. ಹೀಗಿದ್ದರೂ ಹಝ್ರತ್ ರಸೂಲ್ (ಸ) ರು ಈ ರೀತಿ ಹೇಳಿದರು: "ನನ್ನ ಪುತ್ರ ಇಬ್ರಾಹೀಮ್ ಜೀವಿಸಿರುತ್ತಿದ್ದರೆ ಖಂಡಿತ ನಬಿಯಾಗುತ್ತಿದ್ದ" ಎಂದು. ಇದರಿಂದ ತಿಳಿದುಬರುವುದೇನೆಂದರೆ ಹಝ್ರತ್ ರಸೂಲ್ ಕರೀಮ್ (ಸ) ರು ಆಯತ್ ಖಾತಮುನ್ನಬಿಯ್ಯೀನ್ ಕುರಿತು ಹೊಂದಿದ ಜ್ಞಾನದ ಪ್ರಕಾರ ಆಯತ್ ಖಾತಮುನ್ನಬಿಯ್ಯೀನ್ ತನ್ನ ಪುತ್ರ ಇಬ್ರಾಹೀಮ್ ಇನ್ನು ಮುಂದೆ ನಬಿಯಾಗುವ ಬಗ್ಗೆ ತಡೆಯಾಗುವುದಿಲ್ಲ ಎಂದು ಅವರು ಗ್ರಹಿಸಿದ್ದರು.

ನೋಡಿರಿ, ಈ ಹದೀಸು ಎಷ್ಟು ಸ್ಪಷ್ಟವಾಗಿದೆ. ಆಯತ್ ಖಾತಮುನ್ನಬಿಯ್ಯೀನ್ ಅವತೀರ್ಣವಾಗಿದ್ದರೂ ಈ ಹದೀಸು ಪೈಗಂಬರರ ಉಮ್ಮತ್‌ನಲ್ಲಿ ನಬಿತ್ವದ ಬಾಗಿಲು ತೆರೆಯುತ್ತದೆ. ನಮ್ಮ ಮುಸಲ್ಮಾನ ಸ್ನೇಹಿತರು ಈ ಸತ್ಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರೆ ಎಷ್ಟು ಒಳ್ಳೆಯದಿತ್ತು. ಸ್ನೇಹಿತರೇ ಅಲ್ಲಾಹನಿಗೋಸ್ಕರ ಆಲೋಚಿಸಿರಿ, ಚಿಂತಿಸಿರಿ. ಆಯತ್ ಖಾತಮುನ್ನಬಿಯ್ಯೀನ್ ಅವತೀರ್ಣವಾಗಿದೆ. ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ರಸೂಲ್ (ಸ) ರು ಖತಮುನ್ನಬುವ್ವತ್‌ನ ಕಿರೀಟದಿಂದ ಅಲಂಕರಿಸಲ್ಪಟ್ಟದ್ದಾರೆ. ಆದರೆ ಕೆಲವು ವರ್ಷಗಳು ಕಳೆದ ನಂತರ ಅವರ ಪುತ್ರರಾದ ಇಬ್ರಾಹೀಮ್ ಮೃತರಾದಾಗ ಹೇಳುತ್ತಾರೆ:

"ನನ್ನ ಮಗ ಇಬ್ರಾಹೀಮ್ ಜೀವಿಸಿರುತ್ತಿದ್ದರೆ ಖಂಡಿತವಾಗಿಯೂ ನಬಿಯಾಗುತ್ತಿದ್ದನು."

## ಈ ಹದೀಸಿನ ಕುರಿತು ಹಝ್ರತ್ ಮುಲ್ಲಾ ಅಲೀ ಖಾರೀ ಅವರ ಸೂಕ್ಷ್ಮ ವ್ಯಾಖ್ಯಾನ

ಈ ಹದೀಸಿನಿಂದ ಯಾವ ತೀರ್ಮಾನ ಕೈಗೊಳ್ಳಬಹುದು ? ಇದಕ್ಕೆ ಉತ್ತರವಾಗಿ ನಮ್ಮ ನಿಲುವನ್ನು ನೀವು ಸ್ವೀಕರಿಸುವುದಿಲ್ಲವಾದರೆ, ಹನಫೀ ಫಿರ್ಖದ ಶ್ರೇಷ್ಠರಾದ ಇಮಾಮ್ ಹಝ್ರತ್ ಮುಲ್ಲಾ ಅಲೀ ಇಬ್ನು ಮುಹಮ್ಮದ್ ಸುಲ್ತಾನುಲ್ ಖಾರೀ ರಹ್ಮತುಲ್ಲಾಹಿ ಅಲೈಹಿ (ನಿಧನ 1014 ಹಿಜರಿಯಲ್ಲಿ) ಅವರ ಅಭಿಪ್ರಾಯ ತಿಳಿಯಿರಿ:

لوعاش ابراهيم وصار نبيا لكان من اتباعه
فلا يناقض قوله تعالى خاتم النبين اذالمعنى
انه لا يأتى نبى بعده ينسخ ملته ولم يكن فى
امته

"ಇಬ್ರಾಹೀಮ್ ಜೀವಂತರಾಗಿ ಇದ್ದು ನಬಿಯಾಗುತ್ತಿದ್ದರೆ ಅವರು ಹಝ್ರತ್ ಮುಹಮ್ಮದ್ ರಸೂಲ್ (ಸ) ರ ಅನುಯಾಯಿಯಾಗಿಯೇ ಇರುತ್ತಿದ್ದರು. ಅವರು ನಬಿಯಾಗುವುದರಿಂದ ಆಯತ್ ಖಾತಮುನ್ನಬಿಯ್ಯೀನ್‌ಗೆ ಅದು ವಿರುದ್ಧವಾಗುವುದಿಲ್ಲ. ಆಯತ್ ಖಾತಮುನ್ನಬಿಯ್ಯೀನ್‌ನ ಅರ್ಥ ಹಝ್ರತ್ ರಸೂಲ್ (ಸ) ರ ನಂತರ ಅವರ ಶರೀಅತನ್ನು ರದ್ದುಪಡಿಸುವ ಅಥವಾ ಅವರ ಉಮ್ಮತ್‌ಗೆ ಸೇರದ ನಬಿ ಬರಲಾರರು ಎಂದಾಗಿದೆ." (ಮೌಝೂಆತೆ ಕಬೀರ್ ಪುಟ 66, 67)

## "ನಬಿ ಬರದೆ ಇರುವುದು" ಮತ್ತು "ನಬಿ ಬರಲಾರದ" ಸ್ಥಿತಿಯ ಸೂಕ್ಷ್ಮ ವ್ಯತ್ಯಾಸ

ಕೆಲವರು ಹೆಚ್ಚು ಚಿಂತಿಸದೆ ಥಕ್ಕನೆ ಹೀಗೆ ಆಕ್ಷೇಪಿಸುತ್ತಾರೆ: "ಹಝ್ರತ್ ಮುಲ್ಲಾ ಅಲೀ ಖಾರೀ (ರ) ಈ ಉತ್ತರವನ್ನು ಸಂಭಾವ್ಯ ಸಂಗತಿಯ ರೂಪದಲ್ಲಿ ನೀಡಿದ್ದಾರೆ. ಅವರ ವೈಯಕ್ತಿಕ ಅಭಿಪ್ರಾಯ ಹಝ್ರತ್ ರಸೂಲ್ (ಸ)ರ ನಂತರ ಯಾವ ನಬಿಯೂ ಬರಲಾರರೆಂದಾಗಿತ್ತು." ಈ ಆಕ್ಷೇಪದ ಕುರಿತು ಹೇಳುವುದಾದರೆ ಹಝ್ರತ್ ಮುಲ್ಲಾ ಅಲೀ ಖಾರೀ (ರ) ಅವರ ಇಷ್ಟು ಸ್ಪಷ್ಟವಾದ ವಿವರಣೆ ಇರುವಾಗ ಅವರ ಸ್ವಂತ ಅಭಿಪ್ರಾಯ ಬೇರೊಂದಾಗಿತ್ತು ಎಂದು ಹೇಳುವುದಕ್ಕೆ ಯಾವುದೇ ಆಧಾರವಿಲ್ಲದಿರುವುದರಿಂದ ಎಂದಿಗೂ ಸ್ವೀಕಾರ ಯೋಗ್ಯವಲ್ಲ. ಮೇಲೆ ಉಲ್ಲೇಖಿಸಿದ ವಾಕ್ಯಗಳ ಮೊದಲು ಅವರು ಬರೆದ ವಾಕ್ಯಗಳಿಂದ, ಅವರ ಸ್ವಂತ

ಅಭಿಪ್ರಾಯ ಸಹ ಇದೇ ರೀತಿಯಾಗಿತ್ತೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಅವರು ಬರೆದ ವಾಕ್ಯಗಳ ಪೂರ್ಣ ರೂಪ ಈ ರೀತಿ ಇದೆ:

قلت و مع هاذا لوعاش ابراهيم وصار نبيا
لكان من اتباعه ......فلا يناقض قوله
تعالى خاتم النبيين

"ನಾನು ಹೇಳುತ್ತೇನೆ – (ನಾನು ಹೇಳುತ್ತೇನೆ ಎಂಬುದನ್ನು ಗಮನಿಸಿರಿ) ಈ ವಿಷಯದ ಕುರಿತು ವಿವಿಧ ರೀತಿಯಲ್ಲಿ ಪ್ರತಿಪಾದಿಸಲಾಗಿದ್ದರೂ ಇಬ್ರಾಹೀಮ್ ಜೀವಂತರಾಗಿ ಇದ್ದು ನಬಿಯಾಗುತ್ತಿದ್ದರೆ ಅವರು ಹಝ್ರತ್ ರಸೂಲ್ (ಸ) ರ ಅನುಯಾಯಿಯಾಗಿಯೇ ಇರುತ್ತಿದ್ದರು. ಅವರು ನಬಿಯಾಗುವುದರಿಂದ ಅದು ಆಯತ್ ಖಾತಮುನ್ನಬಿಯ್ಯೀನ್‌ಗೆ ವಿರುದ್ಧವಾಗುವುದಿಲ್ಲ" (ಮೌಝೂಆತ್, ಪುಟ 67)

ಇಲ್ಲಿ "ಖುಲ್ತು" (ನಾನು ಹೇಳುತ್ತೇನೆ) ಎಂದು ಹಝ್ರತ್ ಮುಲ್ಲಾ ಅಲೀ ಖಾರೀ (ರ) ಹೇಳಿರುವಾಗ ಅವರ ಸ್ವಂತ ಅಭಿಪ್ರಾಯ ಬೇರೊಂದಾಗಿತ್ತು ಎಂದು ಸಂಶಯಿಸುವುದಕ್ಕೆ ಆಸ್ಪದವೆಲ್ಲಿದೆ?

ವಾದಕ್ಕೆ ಬೇಕಾಗಿ ನಾವು ಹಝ್ರತ್ ಮುಲ್ಲಾ ಅಲೀ ಖಾರೀ ಒಂದು ಸಂಭಾವ್ಯ ಸಂಗತಿಯ ಕುರಿತು ಮಾತ್ರ ಪ್ರತಿಪಾದಿಸಿದರು ಎಂದು ಒಪ್ಪಿದರೂ ಸಹ ನಾವು ಮೇಲೆ ವಿವರಿಸಿದ ವಿವರಣೆಗೆ ಯಾವುದೇ ಭಂಗ ಬರುವುದಿಲ್ಲ. ನಬಿ ಬರಬಹುದೋ ಬರಲಾರರೋ ಎಂಬುದರ ಕುರಿತು ಮುಲ್ಲಾ ಅಲೀ ಖಾರೀ (ರ) ಅವರ ಸ್ವಂತ ಅಭಿಪ್ರಾಯ ಏನಾಗಿತ್ತು ಎಂಬುದು ಇಲ್ಲಿ ಪ್ರಶ್ನೆಯಲ್ಲ. ಇಲ್ಲಿ ಪ್ರಶ್ನೆ ಇರುವುದು ಹಝ್ರತ್ ಮುಲ್ಲಾ ಅಲೀ ಖಾರೀ ಅವರು ಹದೀಸು "ಲೌ ಆಷ ಇಬ್ರಾಹೀಮ ಲಕಾನ ಸಿದ್ದೀಖನ್ ನಬಿಯ್ಯ" ಎಂಬುದಕ್ಕೆ ಯಾವ ಅರ್ಥ ಕೊಟ್ಟಿದ್ದಾರೆಂಬುದಾಗಿದೆ. ಆಯತ್ ಖಾತಮುನ್ನಬಿಯ್ಯೀನ್ ಇರುವಾಗ ಶರೀಅತ್ ಇಲ್ಲದ ನಬಿ ಬರುವ ಸಾಧ್ಯತೆಯ ಕುರಿತು ಅವರ ಅಭಿಪ್ರಾಯ ಏನಾಗಿತ್ತೆಂದಾಗಿದೆ. ಯಾವುದೇ ನಬಿ ಬರುವ ಅಥವಾ ಬಾರದಿರುವ ಪ್ರಶ್ನೆ ಇಲ್ಲಿಲ್ಲ. ನಬಿ ಬರಬಹುದೋ ಬರಲಾರರೋ ಎಂಬುದೇ ಇಲ್ಲಿ ಪ್ರಶ್ನೆಯಾಗಿದೆ. ಈ ವಿಷಯದಲ್ಲಿ ಹಝ್ರತ್ ಮುಲ್ಲಾ ಅಲೀ ಖಾರೀ (ರ) ಅವರ ಮೇಲೆ ವಿವರಿಸಿದ ವ್ಯಾಖ್ಯಾನ ಸ್ಪಷ್ಟವಾಗಿದ್ದು ಇದರ ನಂತರ ಯಾವುದೇ ಹೆಚ್ಚಿನ ವಿವರಣೆಯ ಅಗತ್ಯವಿಲ್ಲ.

(ಸಶೇಷ)


## ಅಹ್ಮದಿಯಾ ಸಂದೇಶ

ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ

ಗ್ರಂಥಕರ್ತ : ಹಝ್ರತ್ ಮಿರ್ಝಾ ಬಶೀರುದ್ದೀನ್ ಮುಹಮ್ಮದ್ ಅಹ್ಮದ್

ಬೆಲೆ : ರೂ. 1-00 ಅಂಚೆ ವೆಚ್ಚ : ಉಚಿತ

## ಅಹ್ಮದೀ ಮುಸ್ಲಿಮರು ಮತ್ತು ಅಹ್ಮದಿಯೇತರ ಮುಸ್ಲಿಮರು ಯಾರ ವಿಶ್ವಾಸಗಳು ಯಥಾರ್ಥ ಇಸ್ಲಾಮಿಕ?

ಲೇಖಕ : ಮೌಲ್ವಿ ಮುಹಮ್ಮದ್ ಅಬುಲ್ ವಫಾ

ಬೆಲೆ : ರೂ. 1–00 ಅಂಚೆ ವೆಚ್ಚ : ಉಚಿತ

ಬರೆಯಿರಿ : Secretary, Ahmadiyya Muslim Mission,
10-23-1008, Ansari Road, Bunder, Mangalore-575 001.

# MUHAMMAD - The most successful prophet

# ಮುಹಮ್ಮದ್ - ಅತ್ಯಂತ ವಿಜಯಶಾಲಿ ಪ್ರವಾದಿ

—ಎಂ. ಪಿ. ಇಬ್ರಾಹಿಂ

ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರವರ ಕುರಿತು ಜನರಲ್ಲಿ ಹಲವಾರು ತಪ್ಪಭಿಪ್ರಾಯಗಳು ಪ್ರಚಾರದಲ್ಲಿವೆ. ಮಧ್ಯಯುಗದ ಐರೋಪ್ಯ ವಿದ್ವಾಂಸರೂ ಚರಿತ್ರಕಾರರೂ ಇಸ್ಲಾಂ ಧರ್ಮವನ್ನು ವಿರೋಧಿಸುವ ತಮ್ಮ ಧರ್ಮಯುದ್ಧದಲ್ಲಿ ಆ ಧರ್ಮವನ್ನೂ ಹಝ್ರತ್ ಮುಹಮ್ಮದ್ ಪೈಗಂಬರರನ್ನೂ ಬಹಳ ಕೀಳಾಗಿ ಚಿತ್ರೀಕರಿಸಿದ್ದಾರೆ. ಇಸ್ಲಾಂ ಧರ್ಮವನ್ನು ಸಮಗ್ರವಾಗಿ ಅಧ್ಯಯನ ಮಾಡದೆ ಮತ್ತು ಪೈಗಂಬರರ ಜೀವನ ಚರಿತ್ರೆಯನ್ನು ಕೂಲಂಕುಶವಾಗಿ ಪರಿಶೀಲಿಸದೆ ಕೇವಲ ಇಸ್ಲಾಂ ಧರ್ಮದೊಂದಿಗೆ ಅವರಿಗಿದ್ದ ವಿದ್ವೇಷವನ್ನು ಮಾತ್ರವೇ ಅಂಥವರು ಪ್ರತಿಬಿಂಬಿಸಿದ್ದಾರೆ. ಈ ತಥಾಕಥಿತ ಚರಿತ್ರಕಾರರಿಂದ ಮತ್ತು ವಿದ್ವಾಂಸರಿಂದ ಲೋಕದ ಜನತೆಯು ಇಸ್ಲಾಂ ಧರ್ಮದ ಬಗ್ಗೆ ಹಾಗೂ ಪ್ರವಾದಿ ಮುಹಮ್ಮದ್ ಪೈಗಂಬರರ ಬಗ್ಗೆ ತಪ್ಪಾಗಿ ತಿಳಿಯಲು ಎಡೆಯಾಯಿತು. ಅನೇಕ ಕಟ್ಟು ಕಥೆಗಳು ಉದ್ಭವವಾದವು. ಮುಹಮ್ಮದ್ ಪೈಗಂಬರರ ವ್ಯಕ್ತಿತ್ವವನ್ನು ಹೀನಾಯಿಸುವ ಅನೇಕ ನಾಣ್ಣುಡಿಗಳನ್ನೇ ಈ ಜನರು ಸೃಷ್ಟಿಸಿದರು. ಇಸ್ಲಾಂ ಧರ್ಮದ ಬಗ್ಗೆಯಾಗಲೀ ಹಝ್ರತ್ ಮುಹಮ್ಮದ್ ಪೈಗಂಬರರ ಬಗ್ಗೆಯಾಗಲೀ ಅಂಥವರಿಗೆ ಸರಿಯಾದ ಜ್ಞಾನವಿರಲಿಲ್ಲವೆಂಬುದು ಅವರ ನಿರೂಪಣೆಗಳಿಂದಲೇ ಸ್ಪಷ್ಟವಾಗುತ್ತದೆ. ಈಗಲೂ ಕೂಡ ಅಂಥವರ ಅನುಯಾಯಿಗಳಾಗಲು ಹವಣಿಸುವ ಕೆಲವು ಇಸ್ಲಾಂ ಧರ್ಮದ್ವೇಷಿಗಳು ಆ ಧರ್ಮದ ಕುರಿತು ಹಾಗೂ ಹಝ್ರತ್ ಮುಹಮ್ಮದ್ ಪೈಗಂಬರರ ಕುರಿತು ಅತ್ಯಂತ ಕೀಳು ಮಟ್ಟದ ಅವಹೇಳನಕಾರಿ ಲೇಖನಗಳನ್ನೂ ಕಥೆಗಳನ್ನೂ ಬರೆಯುವುದಿದೆ. ಅಥವಾ ಸಾದೃಶ್ಯ ರೂಪದಲ್ಲಿ ಬರೆದು ಮರೆಯಲ್ಲಿ ನಿಂತು ಪೈಗಂಬರರನ್ನು ಹೀನೈಸುವ ಹೇಡಿಗಳೂ ಇಲ್ಲದಿಲ್ಲ.

ಈ ರೀತಿ ಹೇಳುವಾಗ, ಇಸ್ಲಾಂ ಧರ್ಮದ ಬಗ್ಗೆಯಾಗಲೀ ಹಝ್ರತ್ ಮುಹಮ್ಮದ್ ಪೈಗಂಬರರ ವ್ಯಕ್ತಿತ್ವದ ಬಗ್ಗೆಯಾಗಲೀ ಯಾರೂ ವಿಮರ್ಶಿಸಬಾರದೆಂದು ಇದಕ್ಕೆ ಸರ್ವಥಾ ಅರ್ಥವಿಲ್ಲ. ಬದಲಾಗಿ ತರ್ಕಬದ್ಧವಾದ ಪ್ರಾಮಾಣಿಕ ವಾದವಿವಾದಗಳನ್ನೂ ಪ್ರತಿಪಕ್ಷ ಗೌರವದೊಂದಿಗೆ ನಡೆಸುವಂತಹ ಗುಣದೋಷ ವಿಮರ್ಶೆಗಳನ್ನೂ ಇಸ್ಲಾಂ ಧರ್ಮವು ಯಾವಾಗಲೂ ಸ್ವಾಗತಿಸುತ್ತದೆ. ನಿಂದನೆ ಮತ್ತು ವಿಮರ್ಶೆ ಒಂದೇ ಅರ್ಥದ ಶಬ್ದಗಳಲ್ಲವೆಂಬುದನ್ನು ಕಥೆಗಾರರೂ ಲೇಖಕರೂ ತಿಳಿದಿರಬೇಕು.

ಹಝ್ರತ್ ಮುಹಮ್ಮದ್ ಪೈಗಂಬರರ ಜೀವನ ಕ್ರಮಗಳ ಬಗ್ಗೆ ವಿವರಣೆಯು ಒಂದು ಅಲಭ್ಯ ಸಾಹಿತ್ಯವಲ್ಲ. ಪೈಗಂಬರರ ಜೀವನ ಚರಿತ್ರೆಯು ಒಂದು ತೆರೆದ ಪುಸ್ತಕದಂತೆ ಇಂದು ಲೋಕದ ಮುಂದೆ ಇದೆ. ಮಧ್ಯಕಾಲೀನ ಐರೋಪ್ಯ ವಿದ್ವಾಂಸರ ಕೆಲವು ಕ್ಷುದ್ರ ಕೃತಿಗಳ ಹೊರತಾಗಿಯೂ ಆ ಪ್ರವಾದಿವರ್ಯರ ಜೀವಿತವನ್ನು ಆಳವಾಗಿ, ನಿಷ್ಪಕ್ಷಪಾತದಿಂದ ಅಧ್ಯಯನ ನಡೆಸಿದ ತತ್ವಜ್ಞಾನಿಗಳೂ ಚರಿತ್ರಕಾರರೂ – ಮುಸ್ಲಿಮೇತರರು – ಆ ಪ್ರವಾದಿಯವರ ಬಗ್ಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಲು ನಿರ್ಬಂಧಿತರಾಗಿದ್ದಾರೆ.

ದೇವರ ಸಂದೇಶವಾಹಕ, ಪೈಗಂಬರ್ ಅಥವಾ ಪ್ರವಾದಿ ಆಗಿರುವರೆಂಬುದೇ ಹಝ್ರತ್ ಮುಹಮ್ಮದರ

ಅತಿಶ್ರೇಷ್ಠ ಪದವಿಯಾಗಿದೆ. ಅವರು ಪ್ರವಾದಿಗಳ ಸಾರ್ವಭೌಮರಾಗಿದ್ದಾರೆ. ದೇವರು ಅವರನ್ನು ತನ್ನ ಸಂದೇಶವಾಹಕನಾಗಿ ನಿಯೋಜಿಸುವ ಮೊದಲಿನ ಅವರ ಜೀವಿತ ಕೂಡ ಅತ್ಯಂತ ಮಹತ್ವಪೂರ್ಣವೂ ಪವಿತ್ರವೂ ಆಗಿತ್ತೆಂಬುದಕ್ಕೆ ನಂತರ ಅವರ ಕಟಾ ವಿರೋಧಿಗಳಾಗಿ ಮಾರ್ಪಟ್ಟ ಮಕ್ಕಾ ನಿವಾಸಿಗಳೇ ಸಾಕ್ಷಿ ಹೇಳಿರುವುದಾಗಿ ಚರಿತ್ರೆ ನಮಗೆ ತಿಳಿಸಿಕೊಡುತ್ತದೆ. ಮಾನವತೆಯ ಪರಿಪೂರ್ಣ ಗುಣಗಳಾದ ಸತ್ಯಸಂಧತೆ, ಶೂರತನ, ಕೆಚ್ಚೆದೆ, ಸಹಾನುಭೂತಿ, ದಯಾದ್ರ್ಯತೆ, ಮಾನವಸ್ನೇಹ, ಜನಪ್ರಿಯತೆ, ನಿರ್ಧಾರಶಕ್ತಿ, ಚಿಂತಾಶೀಲತೆ, ಕ್ಷಮಾಗುಣ, ತ್ಯಾಗಶೀಲತೆ, ದೈವಭಕ್ತಿ ಮೊದಲಾದ ಎಲ್ಲಾ ಗುಣಗಳೂ ಮುಹಮ್ಮದ್ ಎಂಬ ಆ ಏಕ ವ್ಯಕ್ತಿಯಲ್ಲಿ ಸಮ್ಮೇಳಿತವಾಗಿದ್ದುವು. ಯಾವ ಕಾಲದ ಮನುಷ್ಯರಿಗೂ ಅನುಸರಿಸಲು ಅತ್ಯಂತ ಅನುಯೋಜ್ಯವಾದೊಂದು ಮಾದರಿಯು ಅವರದಾಗಿತ್ತು. "ದೇವರ ಈ ಸಂದೇಶವಾಹಕನಲ್ಲಿ ನಿಮಗೆ ಅನುಸರಿಸಲು ಅತ್ಯಂತ ಯೋಗ್ಯವಾದ ಮಾದರಿಯಿದೆ" ಎಂದು ಮುಹಮ್ಮದ್ ಪೈಗಂಬರ್‌ರ ಬಗ್ಗೆ ಪವಿತ್ರ ಖುರ್‌ಆನ್ ಸಾರುತ್ತದೆ. ನಿಷ್ಪಕ್ಷಪಾತವಾಗಿ, ಪೂರ್ವಾಗ್ರಹ ಪೀಡಿತರಾಗದೆ ಹಝ್ರತ್ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆಯನ್ನೂ ಅವರ ಅಧ್ಯಾಪನೆಗಳನ್ನೂ ಪರಿಶೀಲಿಸಿದರೆ ಈ ವಿಚಾರವು ಯಾರಿಗೂ ಮನದಟ್ಟಾಗುವುದು.

ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆಯನ್ನಾಗಲೀ ಅವರ ಪ್ರಬೋಧನೆಗಳ ಕುರಿತಾಗಲೀ ಅವರು ಈ ಲೋಕದಲ್ಲಿ ಉಂಟುಮಾಡಿದ ಮಹತ್ವಪೂರ್ಣ ಪರಿವರ್ತನೆಗಳ ಬಗ್ಗೆಯಾಗಲೀ ಇಲ್ಲಿ ನಾನು ವಿವರಿಸಬಯಸುವುದಿಲ್ಲ. ಅದಕ್ಕೆ ಇಲ್ಲಿ ಅವಕಾಶವೂ ಇಲ್ಲ. ಕೇವಲ, ನಿಷ್ಪಕ್ಷ ಚಿಂತಕರಾದ ಕೆಲವು ಜಗತ್ಪ್ರಸಿದ್ಧ ತತ್ವಜ್ಞಾನಿಗಳೂ ವಿದ್ವಾಂಸರೂ ಆ ಮಹಾನ್ ಪ್ರವಾದಿಯವರ ಬಗ್ಗೆ ಕೂಲಂಕಶವಾಗಿ ಅಧ್ಯಯನ ನಡೆಸಿದ ಬಳಿಕ ಸೂಚಿಸಿದ ಕೆಲವು ಅಭಿಪ್ರಾಯಗಳನ್ನು ಮಾತ್ರವೇ ಇಲ್ಲಿ ಉದ್ಧರಿಸಲು ನಾನು ಇಚ್ಛಿಸುತ್ತೇನೆ. ವಿವರಗಳನ್ನು ವಿವರವಾಗಿ ತಿಳಿದವರ ಬಳಿ ಮುಹಮ್ಮದ್ ಪೈಗಂಬರರಿಗೆ ಮತ್ತು ಇಸ್ಲಾಂ ಧರ್ಮಕ್ಕೆ ಏನು ಸ್ಥಾನವಿತ್ತು ಎಂಬುದನ್ನು ವಾಚಕರು ಇದರಿಂದ ತಿಳಿದುಕೊಳ್ಳಬಹುದು.

ಭಾರತದ ರಾಷ್ಟ್ರಪಿತ **ಮಹಾತ್ಮಾ ಗಾಂಧೀಜಿ** ಯವರು ಇಸ್ಲಾಂ ಧರ್ಮ ಮತ್ತು ಅದರ ಬಗ್ಗೆ ತಮ್ಮ ಅಭಿಪ್ರಾಯವನ್ನು **"ಹರಿಜನ್"** ಎಂಬ ಪತ್ರಿಕೆಯಲ್ಲಿ ಈ ರೀತಿ ಬರೆದರು:

"ಇಸ್ಲಾಂ ಧರ್ಮದ ಪ್ರವಾದಿಯಾದ ಮುಹಮ್ಮದ್ ಪೈಗಂಬರರ ನಿಷ್ಕಪಟ ಹಾಗೂ ಸರಳವಾದ ಜೀವನ ಕ್ರಮಗಳು ನನ್ನ ಮೇಲೆ ತುಂಬಾ ಪ್ರಭಾವ ಬೀರಿದೆ. ಅವರ ಪ್ರಾಮಾಣಿಕವಾದ ಪವಿತ್ರ ಜೀವಿತವು ಮುಸ್ಲಿಮರಿಗೂ ಮುಸ್ಲಿಮೇತರರಿಗೂ ಕೂಡ ಆದರ್ಶಪ್ರಾಯವಾಗಿರುತ್ತದೆ. ಈ ಜಗತ್ತು ಅಜ್ಞಾನ ಅಂಧಕಾರದಲ್ಲಿ ಮುಳುಗಿದ್ದಾಗ ಮುಹಮ್ಮದ್ ಪೈಗಂಬರರು ಪ್ರಬೋಧಿಸಿದ ಇಸ್ಲಾಂ ಧರ್ಮವು ಜಗತ್ತಿಗೆ ಜ್ಞಾನ ದೀವಿಗೆಯನ್ನು ನೀಡಿತು. ಪ್ರಪಂಚದ ಎಲ್ಲಾ ಜನರಿಗೂ ಮುಹಮ್ಮದ್ ಪೈಗಂಬರರ ಸಂದೇಶದಿಂದ ಹೆಚ್ಚಿನ ಪ್ರಯೋಜನ ಉಂಟಾಗಿದೆ."

ಮಹಾತ್ಮಾ ಗಾಂಧೀಜಿ ಮತ್ತೂ ಈ ರೀತಿ ಬರೆದರು :

"ಇಸ್ಲಾಂ ಒಂದು ಅಸತ್ಯ ಧರ್ಮವಲ್ಲ. ಅದರ ವೈಭವದ ಕಾಲದಲ್ಲೂ ಅದು ಅಸಹಿಷ್ಣುತೆಯನ್ನು ಹೊಂದಿರಲಿಲ್ಲ. ಅದು ಲೋಕದ ಮೆಚ್ಚುಗೆಯನ್ನು ಗಳಿಸಿದ ಒಂದು ಧರ್ಮವಾಗಿದೆ. ಪಾಶ್ಚಿಮಾತ್ಯವು ಅಂಧಕಾರದಲ್ಲಿ ಮುಳುಗಿ ಹೋಗಿದ್ದ ಆ ಅಜ್ಞಾನದ ಯುಗದಲ್ಲಿ, ಪೂರ್ವದ ಮುಗಿಲಿನಿಂದ ಒಂದು ಉಜ್ವಲ ತಾರೆಯು ಉದಯಿಸಿ ಬಂದು, ನರಳಾಡುತ್ತಿದ್ದ ಲೋಕಕ್ಕೆ ಜ್ಞಾನ ಪ್ರಕಾಶಗಳನ್ನೂ ಆಶ್ವಾಸನೆಗಳನ್ನೂ ನೀಡಿತು. ಹಿಂದೂಗಳು ಆದರ ಭಾವನೆಯಿಂದ ಇಸ್ಲಾಂ ಧರ್ಮದ ಕುರಿತು ಅಧ್ಯಯನ ಮಾಡಬೇಕು. ಆಗ ನಾನು ಅದನ್ನು ಪ್ರೀತಿಸುವಂತೆ ಅವರು ಸಹ ಅದನ್ನು ಪ್ರೀತಿಸುವರು."

ಮಹಾತ್ಮಾ ಗಾಂಧೀಜಿ ಇನ್ನೂ ಹೇಳುತ್ತಾರೆ :

"ಜಗತ್ತಿನ ಎಲ್ಲಾ ಧರ್ಮಗಳ ಬಗ್ಗೆ ಅಧ್ಯಯನ ನಡೆಸುವುದು ನನ್ನ ಅಭ್ಯಾಸವಾಗಿದೆ. ನಾನು ಇಸ್ಲಾಂ

ಧರ್ಮದ ಬಗ್ಗೆಯೂ ಅಧ್ಯಯನ ಮಾಡಿದ್ದೇನೆ. ಖುರ್ ಆನಿನ ಭಾಷಾಂತರವನ್ನು ನಾನು ಓದಿರುವೆನು. ಇಸ್ಲಾಂ ಧರ್ಮವು ಶಿಸ್ತು, ಉತ್ತಮ ಗುಣನಡತೆ, ಇತ್ಯಾದಿ ಗಳನ್ನು ಬೋಧಿಸಿ ಜನರು ಸನ್ಮಾರ್ಗದಲ್ಲಿ ಚರಿಸುವಂತೆ ಮಾಡುತ್ತದೆ. ಇಸ್ಲಾಮಿನಲ್ಲಿ ಮಾನವ ಸಮಾನತೆಯು ಪಾಠವು ಕಲಿಸಲಾಗಿದೆ. ಖುರ್ಆನಿನಲ್ಲಿ ಕೇವಲ ಮುಸ್ಲಿಮರಿಗೆ ಮಾತ್ರವಲ್ಲ ಇಡೀ ಮನುಷ್ಯ ಕುಲಕ್ಕೆ ಪ್ರಯೋಜನಕಾರಿಯಾದ ಉಪದೇಶಗಳು ಅಡಕವಾಗಿವೆ."

**ವಿಶ್ವವಿಖ್ಯಾತ ತತ್ವಜ್ಞಾನಿ, ಸಾಹಿತಿ ಜಾರ್ಜ್ ಬರ್ನಾಡ್ ಶಾ (GEORGE BERNARD SHAW) ಹೇಳುತ್ತಾರೆ:**

"I have always held the religion of Muhammad in highest es teem because of its wonderful vitality. It is the only religion which appears to me to possess that assimilating capabality to the changing phases of existence which can make itself appeal to every age. The world most doubtless attach high value to the predictions of great men like me. I have prophesied about the faith of Muhammad, that it would be acceptable to the Europe of tomorrow, as it is beginning to be acceptable to the Europe of today. The medieval ecclesiastics, either through ignorance or bigotry, painted Muhammadanism in the darkest colours. They were in fact trained to hate both Muhammad and his religion. To them Muhammad was anti-Christ. I have studied him, the wonderful man, and in my opinion, far from being anti-Christ, he must be called the saviour of humanity. I believe if a man like him were to assume the dicta torship of the modern world, he would succeed in solving its problems in a way that would bring in the much needed peaee and happiness."

**-ON GETTING MARRIED**

(ಅದ್ಭುತಕರವಾದ ಚೇತನಾ ಶಕ್ತಿಯಿರುವ ಮುಹಮ್ಮದ್ ಪೈಗಂಬರರ ಧರ್ಮವನ್ನು ನಾನು ಯಾವಾಗಲೂ ಅತ್ಯಂತ ಆದರಣಾ ಪೂರ್ವಕವಾಗಿ ಮಾತ್ರವೇ ಸ್ಮರಿಸುವೆನು. ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಯೋಗ್ಯ ರೀತಿಯಲ್ಲಿ ಹೊಂದಿಕೊಳ್ಳಲು ಸಾಮರ್ಥ್ಯವಿರುವ, ಎಲ್ಲಾ ಕಾಲಕ್ಕೂ ಅನ್ವಯಿಸುವಂತಹ ಒಂದು ಧರ್ಮ ನನ್ನ ಅಭಿಪ್ರಾಯದಲ್ಲಿ ಅದು ಮಾತ್ರವಾಗಿದೆ. ನಿಸ್ಸಂದೇಹವಾಗಿಯೂ ನನ್ನಂಥವರ ಭವಿಷ್ಯವಾಣಿಗಳಿಗೆ ಲೋಕವು ಹೆಚ್ಚಿನ ಮಹತ್ವವನ್ನು ಕಲ್ಪಿಸುವುದು ಖಂಡಿತ. ನಾನು ಈಗಾಗಲೇ ಭವಿಷ್ಯ ನುಡಿದಿರುವೆನು– ಇಂದಿನ ಐರೋಪ್ಯ ರಾಷ್ಟ್ರಗಳಿಗೆ ಮುಹಮ್ಮದರ ಧರ್ಮವು ಸ್ವೀಕಾರ ಯೋಗ್ಯವೆಂದು ತೋರಲು ತೊಡಗಿರುವಂತೆಯೇ ನಾಳಿನ ಐರೋಪ್ಯ ರಾಷ್ಟ್ರಗಳಿಗೂ ಸ್ವೀಕಾರ ಯೋಗ್ಯವಾದ ಧರ್ಮವು ಅದೊಂದೇ ಆಗಿರುವುದು. ಮಧ್ಯಕಾಲೀನ ಕ್ರೈಸ್ತ ಧರ್ಮೋಪದೇಶಕರು, ಅಜ್ಞಾನದ ನಿಮಿತ್ತವಾಗಿಯೋ ಅಥವಾ ಪಾರಂಪರ್ಯ ಮತಾಂಧತೆಯ ಕಾರಣದಿಂದಲೋ ಮುಹಮ್ಮದರ ಧರ್ಮವನ್ನು ಮಸಿಬಳಿದು ತೋರಿಸಿದರು. ಮುಹಮ್ಮದರನ್ನೂ ಅವರ ಧರ್ಮವನ್ನೂ ಅಸಹ್ಯವಾಗಿ ದ್ವೇಷಿಸಲು ಅವರಿಗೆ ತರಬೇತಿ ನೀಡಲಾಗುತ್ತಿತ್ತು. ಅವರು ಮುಹಮ್ಮದರನ್ನು ಕ್ರಿಸ್ತವಿರೋಧಿ (Anti - Christ) ಆಗಿ ಕಂಡರು. ನಾನಾದರೋ ಅವರ ಬಗ್ಗೆ ಅಧ್ಯಯನ ಮಾಡಿರುವೆನು. ಅವರೊಬ್ಬ ಅದ್ಭುತಕರವಾದ ವ್ಯಕ್ತಿ. ನನ್ನ ಅಭಿಪ್ರಾಯದಲ್ಲಿ ಆ್ಯಂಟಿಕ್ರೈಸ್ಟ್ ಎನ್ನುವುದರ ಬದಲು ಅವರನ್ನು "ಮನುಷ್ಯ ಕುಲದ ಸಂರಕ್ಷಕ" ನೆಂದು ಕರೆಯಬೇಕಾಗಿದೆ. ಅವರಂತಹ ಒಬ್ಬ ವ್ಯಕ್ತಿ ಈ ಆಧುನಿಕ ಲೋಕದ ಏಕಾಧಿಪತಿಯಾಗಿ ಸ್ಥಾನ ವಹಿಸಿಕೊಂಡರೆ, ಇಂದಿನ ಸಮಸ್ಯೆಗಳನ್ನೆಲ್ಲಾ ಪರಿಹರಿಸಿ ಸಮಗ

ಅತಿ ಅಗತ್ಯವಾಗಿರುವ ಶಾಂತಿ ಮತ್ತು ಸೌಖ್ಯವನ್ನು ತರಲು ಅವರಿಗೆ ಸಾಧ್ಯವಿದೆಯೆಂಬುದು ನನ್ನ ನಂಬಿಕೆಯಾಗಿದೆ.)

ಪ್ರಸಿದ್ಧ ರಾಷ್ಟ್ರಪ್ರೇಮಿಯೂ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರೂ ಆಗಿದ್ದ **ಶ್ರೀ ಲಾಲಾ ಲಜಪತ್ ರಾಯ್** ಹೇಳುತ್ತಾರೆ:

"ಇಸ್ಲಾಮಿನ ಪ್ರವಾದಿಯ ಮೇಲೆ ನನಗಿರುವ ಗೌರವಾದರಗಳನ್ನು ಬಹಿರಂಗಪಡಿಸಲು ನಾನು ಏನೂ ಹಿಂಜರಿಯುವುದಿಲ್ಲ. ಮತಾಚಾರ್ಯರ ಮತ್ತು ಮತ ಸುಧಾರಕರ ಪೈಕಿ ಅತ್ಯುನ್ನತವಾದ ಪದವಿಯನ್ನು ಅವರು ಅಲಂಕರಿಸುತ್ತಾರೆಂಬುದೇ ನನ್ನ ಅಭಿಪ್ರಾಯ."

ಇಸ್ಲಾಮಿನ ಮಹಾನ್ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರ ಸಂಭವ ಬಹುಲವಾದ ಜೀವನವನ್ನು ವಸ್ತುನಿಷ್ಠವಾಗಿಯೂ ಸತ್ಯಹೃದಯದಿಂದಲೂ ಕಲಿಯುವ ಯಾರಿಗೂ ಆ ಪರಿಶುದ್ಧವಾದ ಜೀವನ ಕ್ರಮಗಳು ಮನುಷ್ಯಕುಲಕ್ಕೆ ದಾರಿದೀಪವಾಗಿದೆ ಎಂದು ತಿಳಿದುಕೊಳ್ಳಲು ಸಾಧ್ಯವಿದೆ. ಮುಹಮ್ಮದ್ ಪೈಗಂಬರರ ಕುರಿತು **ಲಾ ಮಾರ್ಟಿನ್ (Lamartin)** ಎಂಬ ಫ್ರೆಂಚ್ ಚರಿತ್ರೆಕಾರ ತನ್ನ "ಹಿಸ್ಟರಿ ಓಫ್ ದ ಟರ್ಕ್" ಎಂಬ ಗ್ರಂಥದಲ್ಲಿ ಉಲ್ಲೇಖಿಸಿದ ಪಂಕ್ತಿಗಳು ಗಮನಾರ್ಹವಾಗಿವೆ:

Philosopher, orator, apostle, legislator, warrior, conqueror of ideas, the restorer of rational beliefs, of a cult without images, the founder of twenty terrestrial empires and one spiritual empire – that is **MUHAMMAD.** With regards all standards whereby human greatness may be measured we may well ask, "Is there any man greater then he?" "No man is greater than he".

**–History of the Turk**

(ತತ್ವಜ್ಞಾನಿ, ವಾಗ್ಮಿ, ದೇವರ ಸಂದೇಶವಾಹಕ, ಶಾಸಕ, ಸೇನಾನಿ, ವಿಚಾರ ವಿಜೇತ, ವೈಚಾರಿಕ ಜ್ಞಾನ ಪ್ರಮಾಣಗಳ ಸ್ಥಾಪಕ, ಮೂರ್ತಿರಹಿತ ಆರಾಧನಾ ಕ್ರಮಗಳ ಅಧಿಪ, ಇಪ್ಪತ್ತು ಭೌಮಿಕ ರಾಜ್ಯಗಳ ಮತ್ತು ಒಂದು ಆಧ್ಯಾತ್ಮಿಕ ಸಾಮ್ರಾಜ್ಯದ ಸ್ಥಾಪಕ– ಅವರೇ **ಮುಹಮ್ಮದ್.** ಮನುಷ್ಯ ಶ್ರೇಷ್ಠತೆಯನ್ನಳೆಯುವ ಎಲ್ಲಾ ಮಾನದಂಡಗಳನ್ನುಪಯೋಗಿಸಿ ಅಳೆದು ನೋಡಿದರೆ ನಾವು ಪ್ರಶ್ನಿಸಿಬಿಡುತ್ತೇವೆ – "ಅವರಿಗಿಂತಲೂ ಶ್ರೇಷ್ಠವಾಗಿ ಮತ್ತೋರ್ವ ವ್ಯಕ್ತಿ ಇರುವರೇ ?" "ಇಲ್ಲ, ಅವರಿಗಿಂತಲೂ ಶ್ರೇಷ್ಠರಾಗಿ ಮತ್ತಾರೂ ಇಲ್ಲ.")

ಪೈಗಂಬರರ ಜೀವನ ಚರಿತ್ರೆಯನ್ನು ಪ್ರಾಮಾಣಿಕವಾಗಿ ಅಧ್ಯಯನ ಮಾಡಿದ ನಂತರ ಒಬ್ಬ ಪಾಶ್ಚಾತ್ಯ ವಿದ್ವಾಂಸ **ಆರ್ಥರ್ ಲಿಯೊನಾರ್ಡ್** (Arthur Leonard) ಎಂಬವರು ಬರೆದ ಅಭಿಪ್ರಾಯವಿದು :

If ever man on this earth ever found God, if ever man devoted his life to God's service with a good and great motive, it is certain that the Prophet of Arabia was that man; not only great but the greatest, that is, the truest man that humanity has ever produced.

**–Islam and her moral and spiritual values**

ದೇವರನ್ನು ಕಂಡವರಾಗಿ, ಉತ್ತಮ ಹಾಗೂ ಮಹತ್ವಪೂರ್ಣ ಉದ್ದೇಶಗಳಿಗಾಗಿ ತನ್ನ ಜೀವಿತವನ್ನೇ ದೇವರ ಸೇವೆಗೆ ಅರ್ಪಿಸಿದ ಯಾರಾದರೂ ಈ ಭೂಮಿಯ ಮೇಲಿದ್ದರೆ, ಖಂಡಿತವಾಗಿಯೂ ಅದು ಅರೇಬಿಯಾದ ಪೈಗಂಬರರಾಗಿದ್ದಾರೆ. ಅವರು ಶ್ರೇಷ್ಠರು ಮಾತ್ರವಲ್ಲ, ಅತ್ಯಂತ ಶ್ರೇಷ್ಠರು. ಅಂದರೆ, ಮನುಷ್ಯ ಕುಲವು ಕಂಡ ಅತ್ಯಂತ ಸಚ್ಚರಿತ ವ್ಯಕ್ತಿ."

ಬ್ರಿಟಾನಿಕಾ ವಿಶ್ವಕೋಶದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ ಕುರಿತು ಉಲ್ಲೇಖಿಸಲಾದ

# ಕಲ್ಲಿಕೋಟೆಯಲ್ಲಿ ಮಸೀದಿ ಉದ್ಘಾಟನೆ

ಕಲ್ಲಿಕೋಟೆ ನಗರದ ಹೃದಯ ಭಾಗದಲ್ಲಿ ಮುದಲ ಕುಳಂ ಮೈದಾನಕ್ಕೆ ಸಮೀಪ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲಾದ ಹೊಸ ಮಸೀದಿಯನ್ನು, ದೈವಾಸ್ತಿತ್ವವನ್ನೂ ದೇವಾರಾಧನೆಯ ಮಹತ್ವವನ್ನೂ ಈ ಕಾಲದಲ್ಲಿ ಲೋಕಕ್ಕೆ ಸಾಬೀತುಪಡಿಸಿ ತೋರಿಸಿರುವ ಯುಗಪುರುಷ ವಾಗ್ದತ್ತ ಮಸೀಹರ ಪೌತ್ರ ಹಾಗೂ ಭಾರತದ ಅಹ್ಮದಿಯಾ ಪ್ರಧಾನ ಪ್ರಚಾರ ಕಾರ್ಯದರ್ಶಿ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬ್ 17-10-86ರಂದು (ಶುಕ್ರವಾರ) ಉದ್ಘಾಟನೆ ಮಾಡಿದರು.

ವಾಗ್ವಾದ ಮಾಡುವರೆ ಬಂದ ನಜರಾನದ ಕ್ರೈಸ್ತರಿಗೆ ಕೂಡ ತನ್ನ ಮಸೀದಿಯಲ್ಲಿ ಅವರ ರೀತಿಯಲ್ಲಿ ಏಕದೇವಾರಾಧನೆ ಮಾಡುವ ಒಪ್ಪಿಗೆಯನ್ನು ನೀಡಿದ ಹಝ್ರತ್ ಮುಹಮ್ಮದ್ ಪೈಗಂಬರ (ಸ) ರ ಉದಾತ್ತ ಮಾದರಿಯನ್ನು ಮುಸ್ಲಿಂ ಲೋಕ ಮರೆತು ಬಿಟ್ಟಿದೆ ಯೆಂದೂ ಆದರೆ ಆ ಆದರ್ಶವನ್ನು ಪುನರುಜ್ಜೀವನಗೊಳಿಸಲು ಯತ್ನಿಸುವ ಅಹ್ಮದಿಯರು ನಿರ್ಮಿಸಿದ ಈ ಪವಿತ್ರ ದೇವಮಂದಿರದ ಕವಾಟಗಳು ಏಕದೇವಾರಾಧಕರಾದ ಎಲ್ಲರಿಗೂ ತೆರೆದಿರಿಸಲಾಗಿದೆಯೆಂದೂ ತನ್ನ ಉದ್ಘಾಟನಾ ಭಾಷಣದಲ್ಲಿ ಅವರು ನುಡಿದರು.

ಕೇರಳದಾದ್ಯಂತ ಹಾಗೂ ಹೊರ ರಾಜ್ಯಗಳಿಂದ ಬಂದ ಅಹ್ಮದಿಯರು ಮತ್ತು ಇತರರ ಸಾನ್ನಿಧ್ಯದಲ್ಲಿ ಪೂರ್ವಾಹ್ನ 11-30ಕ್ಕೆ ಮಸೀದಿಯ ಬೀಗವನ್ನು ತೆರೆದಾಗ ತಕ್‌ಬೀರ್ ಧ್ವನಿಗಳೂ ಇಸ್ಲಾಂ ಝಿಂದಾಬಾದ್, ಅಹ್ಮದಿಯತ್ ಝಿಂದಾಬಾದ್ ಎಂಬ ಘೋಷಣೆಗಳೂ ಮೊಳಗಿದುವು. ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರನ್ನು ಹಿಂಬಾಲಿಸಿ ಎಲ್ಲರೂ ಮಸೀದಿಯನ್ನು ಪ್ರವೇಶಿಸಿ 12-30ಕ್ಕೆ ಅವರ ನೇತೃತ್ವದಲ್ಲಿ ಈ ಮಸೀದಿಯಲ್ಲಿ ಮೊತ್ತಮೊದಲಿನ ಜುಮಾ ಪ್ರಾರ್ಥನೆ ಸಲ್ಲಿಸಿದರು.

ಹೃತ್ಪೂರ್ವಕವಾಗಿ ಮಾಡುವ ಸತ್ಕರ್ಮ, ಅದೆಷ್ಟು ಚಿಕ್ಕದಾದರೂ ನಿಷ್ಫಲವಾಗಲಾರದೆಂದೂ ದೇವಭಯದಿಂದ ವರ್ತಿಸುವವನು ಅಲ್ಲಾಹನ ದೃಷ್ಟಿಯಲ್ಲಿ ಅಗ್ರಗಣ್ಯನೆಂದೂ ಧನಿಕ – ದರಿದ್ರ, ಪಂಡಿತ – ಪಾಮರ, ವರ್ಗ – ವರ್ಣಭೇದಗಳಿಗೇನೂ ಮಸೀದಿಯಲ್ಲಿ ಸ್ಥಾನವಿಲ್ಲವೆಂದೂ ಬಾಂಗ್ ಕರೆ ಕೇಳಿ ಮಸೀದಿಗೆ ಮೊದಲು ಯಾರು ಆಗಮಿಸುತ್ತಾರೋ ಅವರಿಗೆ ಪ್ರಥಮ ಸ್ಥಾನವೆಂದೂ ಆಧುನಿಕ ಜಗತ್ತು ಕಲ್ಪನೆ ಮಾಡುವ ಸೋಷ್ಯಲಿಸಂ 1400 ವರ್ಷಗಳಿಗೆ ಮೊದಲೇ ಮುಸ್ಲಿಮರು ಮಸೀದಿಗಳ ಮೂಲಕ ಮಾಡಿತೋರಿಸಿರು

---

(34ನೇ ಪುಟದಿಂದ)

ಅಭಿಪ್ರಾಯದಿಂದ ಒಂದು ವಾಕ್ಯವನ್ನು ಉದ್ಧರಿಸಿ ಈ ಬರಹವನ್ನು ಮುಗಿಸುತ್ತೇನೆ. ವಿಶ್ವಕೋಶವು ಹೇಳಿದುದು ಎಷ್ಟು ಸತ್ಯ !

"Of all the prophets and religious personalities of the world, **MUHAMMAD** was the most successful."

**–Encyclopaedia Britannica, 11th Edition under the word KORAN.**

"ಎಲ್ಲಾ ಪ್ರವಾದಿಗಳಿಗಿಂತಲೂ ಧಾರ್ಮಿಕ ಮಹಾಪುರುಷರಿಗಿಂತಲೂ ಅತ್ಯಂತ ವಿಜಯಶಾಲಿಯಾದವರು ಮುಹಮ್ಮದ್ ಆಗಿದ್ದಾರೆ."

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದ್**

ಓ ಅಲ್ಲಾಹ್, ಮುಹಮ್ಮದ್ ಪೈಗಂಬರ್ ಮತ್ತು ಅವರ ಬಂಧು ಬಾಂಧವರ ಮೇಲೆ ನಿನ್ನ ಇಷ್ಟಾಶೀರ್ವಾದಗಳನ್ನು ಸುರಿಸು.

ವರೆಂದೂ ಹಝ್ರುತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬ್ ಖುತ್ಬದಲ್ಲಿ ಹೇಳಿದರು. ಶತ್ರುಗಳು ಅಹ್ಮದಿಯರ ಮಸೀದಿಗಳನ್ನು ನಾಶಪಡಿಸಲು ಶ್ರಮಿಸುತ್ತಿರುವ ಈ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಮಸೀದಿಗಳನ್ನು ನಿರ್ಮಿಸಲಿಕ್ಕೆ ಅಹ್ಮದಿಯಾ ಚತುರ್ಥ ಖಲೀಫರಾದ ಹಝ್ರುತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್ ನೀಡಿದ ಆಹ್ವಾನಕ್ಕೆ ಈ ಮಸೀದಿ ನಿರ್ಮಾಣ ಮೂಲಕ ಕೇರಳದ ಅಹ್ಮದಿಯರು ಓಗೊಟ್ಟಿದ್ದಾರೆಂದು ಸಹ ಅವರು ಹೇಳಿದರು.

ಸಂಜೆ 4 ಗಂಟೆಗೆ ಮಸೀದಿಯ ವಠಾರದಲ್ಲಿ ಕೇರಳ ರಾಜ್ಯ ಅಹ್ಮದಿಯಾಅಮೀರ್, ಸಿದ್ದೀಖ್ ಅಮೀರ್ ಅಲಿ ಸಾಹೇಬ್ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು.

ಎಲ್ಲಾ ಮಸೀದಿಗಳ ನಿಜವಾದ ಯಜಮಾನ ಅಲ್ಲಾಹನೆಂದೂ ಯಾವ ವ್ಯಕ್ತಿಗಾಗಲಿ ಸಂಘಟನೆಗಾಗಲಿ ಅದರ ಮೇಲೆ ಗುತ್ತುಗಾರಿಕೆ ಇಲ್ಲವೆಂದೂ ಏಕದೇವಾರಾಧಕರೆಲ್ಲಾ ಮಸೀದಿಯಲ್ಲಿ ಆರಾಧನೆ ನಡೆಸಬಹುದೆಂದೂ ಪ್ರಾರ್ಥನಾಲಯಗಳು ಯಾರದ್ದೇ ಆದರೂ ಅವನ್ನು ಗೌರವಿಸಬೇಕೆಂದೂ ಯುದ್ಧಕಾಲದಲ್ಲಿ ಕೂಡ ಅವನ್ನು ನಾಶಪಡಿಸಬಾರದೆಂಬುದು ಇಸ್ಲಾಮಿನ ಅಧ್ಯಾಪನವೆಂದೂ ಸಮ್ಮೇಳನವನ್ನು ಉದ್ಘಾಟಿಸುತ್ತಾ ಹಝ್ರುತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬ್ ಹೇಳಿದರು.

ಮಸೀದಿಗಳನ್ನು ಧ್ವಂಸ ಮಾಡಿದುದರಿಂದ ಮತ್ತು ಕಲಿಮವನ್ನು ಅಳಿಸಿದುದರಿಂದ ಅಹ್ಮದಿಯಾ ಜಮಾಅತನ್ನು ನಿರ್ಮೂಲ ಮಾಡಲು ಸಾಧ್ಯವಿಲ್ಲವೆಂಬುದಕ್ಕೆ ಒಂದು ಪುರಾವೆಯಾಗಿದೆ ಈ ಮಸೀದಿಯ ಉದ್ಘಾಟನೆಯೆಂದು ಅಧ್ಯಕ್ಷರು ಹೇಳಿದರು.

ಅಹ್ಮದಿಯಾ ವತಿಯಿಂದ ನಿರ್ಮಿಸಲಾದ ಈ ಮಸೀದಿಯು ಇಂದಿನ ಅಶಾಂತಿ ಮತ್ತು ಗೊಂದಲಮಯ ವಾತಾವರಣದಲ್ಲಿ ಒಂದು ಶಾಂತಿದ್ವೀಪವಾಗಲಿಯೆಂದು ಗುರು ನಿತ್ಯ ಚೈತನ್ಯಯತಿಯವರು ತನ್ನ ಆಶಂಸಾ ಭಾಷಣದಲ್ಲಿ ಹಾರೈಸಿದರು.

ಪ್ರೊಫೆಸರ್ ಡಬ್ಲ್ಯು. ಎಚ್. ಮೆಕಾಡನ್ (ಕ್ರಿಶ್ಚಿಯನ್ ಕಾಲೇಜ್), ಡಾ। ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾವುದ್ದೀನ್ ಸಾಹೇಬ್ (ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್), ಮೌಲ್ವಿ ಮುಹಮ್ಮದ್ ಅಬುಲ್ ವಫಾ ಸಾಹೇಬ್ (ಚೀಫ್ ಅಹ್ಮದಿಯಾ ಮಿಶನರಿ, ಕೇರಳ), ಮೌಲ್ವಿ ಮುಹಮ್ಮದ್ ಉಮರ್ ಸಾಹೇಬ್ (ಚೀಫ್ ಮಿಶನರಿ, ತಮಿಳ್ನಾಡ್), ಎನ್. ಅಬ್ದುರ್ರಹೀಂ ಸಾಹೇಬ್ (ಮಾತೃಭೂಮಿ), ಎಂ. ಅಬ್ದುರ್ರಹ್ಮಾನ್ ಸಾಹೇಬ್ (ಕೇರಳ ಕೌಮುದಿ), ಮೌಲ್ವಿ ಮುಹಮ್ಮದ್ ಯೂಸುಫ್ ಸಾಹೇಬ್ (ಅಹ್ಮದಿಯಾ ಮಿಶನರಿ) ಮೊದಲಾದವರು ಸಹ ಭಾಷಣ ಮಾಡಿದರು.

ಆರಂಭದಲ್ಲಿ ಕಲ್ಲಿಕೋಟೆ ಜಮಾಅತಿನ ಅಧ್ಯಕ್ಷರಾದ ಎ. ಪಿ. ಕುಞ್ಞಾಮು ಸಾಹೇಬ್ ಸ್ವಾಗತಿಸಿದರು. ಕೊನೆಯಲ್ಲಿ ಎಂ. ಕೆ. ಇಂಬಿಚ್ಚಿ ಕೋಯಟ್ಟಿ ಸಾಹೇಬ್ ಕೃತಜ್ಞತೆ ಸಲ್ಲಿಸಿದರು.

ಈ ಮಸೀದಿಯ ನಿರ್ಮಾಣಕ್ಕೆ ಸುಮಾರು ಎಂಟು ಲಕ್ಷ ರೂಪಾಯಿಗಳು ವೆಚ್ಚವಾಗಿವೆ.

## ಮಂಜೇಶ್ವರದಲ್ಲಿ ಮಸೀದಿಗೆ ಶಿಲಾನ್ಯಾಸ

ಅಹ್ಮದಿಯಾ ಜಮಾಅತಿನ ಸ್ಥಾಪಕರ ಪೌತ್ರ ಹಾಗೂ ಭಾರತದ ಪ್ರಧಾನ ಪ್ರಚಾರ ಕಾರ್ಯದರ್ಶಿ ಹಝ್ರುತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬ್ ಅವರು ಕೇರಳ ಸಂದರ್ಶನಕ್ಕೆ ಆಗಮಿಸಿದಾಗ 16-10-86ರಂದು ಪೂರ್ವಾಹ್ನ ಮಂಜೇಶ್ವರದ ಉದ್ಯಾವರದಲ್ಲಿ, ಸ್ಥಳೀಯ ಹಿರಿಯ ಗಣ್ಯ ಅಹ್ಮದಿಯಾದ ಜನಾಬ್ ಎಂ. ಅಬ್ದುಲ್ ರಶೀದ್ ಸಾಹೇಬ್ ರವರು ಕೊಡುಗೆಯಾಗಿತ್ತ ನಿವೇಶನದಲ್ಲಿ ಮಸೀದಿಗೆ ಶಂಕು ಸ್ಥಾಪನೆ ಮಾಡಿದರು.

ಕೇರಳ ಅಹ್ಮದಿಯಾ ಅಮೀರ್ ಜ। ಸಿದ್ದೀಖ್ ಅಮೀರ್ ಅಲಿ ಸಾಹೇಬ್, ಉಪ ಅಮೀರ್ ಡಾ। ಮನ್‌ಸೂರ್ ಅಹ್ಮದ್ ಸಾಹೇಬ್, ಕೇರಳ ಚೀಫ್ ಮಿಶನರಿ ಮೌಲ್ವಿ ಮುಹಮ್ಮದ್ ಅಬುಲ್ ವಫಾ ಸಾಹೇಬ್ ಮೊದಲಾದ ಗಣ್ಯ ವ್ಯಕ್ತಿಗಳು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಜ। ಎಂ. ಅಬ್ದುಲ್ ರಶೀದ್ ಸಾಹೇಬರ ವಸತಿಯಲ್ಲಿ, ಸಮಾರಂಭದಲ್ಲಿ ಭಾಗವಹಿಸಿ

ದವರಿಗೆ ಉಪಾಹಾರವನ್ನು ನೀಡಲಾಯಿತು. ಅನಾರೋಗ್ಯ ಪೀಡಿತರಾದ ಜ। ಅಬ್ದುಲ್ ರಶೀದ್ ಸಾಹೇಬರೊಡನೆ ಹಝ್ರತ್ ವಸೀಂ ಅಹ್ಮದ್ ಸಾಹೇಬರು ತುಸುಕಾಲ ಮಾತುಕತೆ ನಡೆಸಿ ಜಮಾಅತಿಗಾಗಿ ಅವರು ಮಾಡಿದ ತ್ಯಾಗಗಳನ್ನು ಶ್ಲಾಘಿಸಿದರು.

## ಕೆನಡಾದಲ್ಲಿ ಪ್ರಥಮ ಅಹ್ಮದಿಯಾ ಮಸೀದಿಗೆ ಶಂಕುಸ್ಥಾಪನೆ

ಕಳೆದ ಸೆಪ್ಟಂಬರ್ 20ರಂದು ಕೆನಡಾದಲ್ಲಿ ಅಹ್ಮದಿಯಾ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಪ್ರಥಮ ಅಹ್ಮದಿಯಾ ಮಸೀದಿಗೆ ಅಡಿಗಲ್ಲು ಹಾಕಿದರು.

ತನ್ನ ಭಾಷಣದಲ್ಲಿ ಖಲೀಫರು ಅಹ್ಮದಿಯಾ ಜಮಾಅತಿನ ಧ್ಯೇಯ ಧೋರಣೆಗಳನ್ನೂ ಮಸೀದಿ ನಿರ್ಮಿಸುವ ಉದ್ದೇಶವನ್ನೂ ವಿವರಿಸಿದರು. ಪವಿತ್ರ ಖುರ್ಆನಿನ ಅಧ್ಯಾಪನ ಪ್ರಕಾರ ಮಾತ್ರವೇ ತಾವು ಮಸೀದಿ ನಿರ್ಮಿಸುತ್ತಿದ್ದೇವೆಂದು ಅವರು ಹೇಳಿದರು. ವೈರವನ್ನೂ ಹಗೆಯನ್ನೂ ಅಶಾಂತಿಯನ್ನೂ ಭೀತಿಯನ್ನೂ ಸೃಷ್ಟಿಸುವುದಲ್ಲ ಮಸೀದಿ ನಿರ್ಮಾಣದ ಉದ್ದೇಶವೆಂದು ಅವರು ನುಡಿದರು. ಇಸ್ಲಾಂ ದ್ವೇಷವನ್ನು ಬೋಧಿಸುವುದಿಲ್ಲ; ಮನುಕುಲದ ಮೇಲೆ ಹಾಗೂ ಅಲ್ಲಾಹನೊಡನೆ ಪ್ರೀತಿಯನ್ನು ತೋರ್ಪಡಿಸಲಿಕ್ಕೆ ಇಸ್ಲಾಂ ಕಲಿಸುತ್ತದೆ ಎಂದು ಅವರು ಹೇಳಿದರು.

ಸಮಾರಂಭಕ್ಕೆ ಆಗಮಿಸಿದ ಅನೇಕ ಗಣ್ಯ ವ್ಯಕ್ತಿಗಳು ಶುಭಾಶಂಸಾ ಭಾಷಣ ಮಾಡಿದರು.

ಕೊನೆಯಲ್ಲಿ ಕೆನಡಾದ ಉಪ ಅಮೀರ್ ಜ। ಖಲೀಫ ಅಬ್ದುಲ್ ಅಝೀಝ್ ಸಾಹೇಬರು ಕೃತಜ್ಞತೆ ಸಲ್ಲಿಸಿದರು.

25 ಲಕ್ಷ ಡಾಲರ್ ವೆಚ್ಚದಲ್ಲಿ ಈ ಮಸೀದಿಯನ್ನು ನಿರ್ಮಿಸಲಾಗುತ್ತಿದೆ.

## ಖಾದಿಯಾನಿನಲ್ಲಿ ಸೀರತ್ ಸಭೆ

ಕಳೆದ ನವೆಂಬರ್ 11ರಂದು ಖಾದಿಯಾನಿನ ದಾರುಲ್ ಅಮಾನ್‌ನಲ್ಲಿ ಸದರ್ ಅಂಜುಮನ್ ಅಹ್ಮದಿಯಾ ವತಿಯಿಂದ ಸೀರುತುನ್ನಬೀ (ಸ) ದಿನವನ್ನು ಆಚರಿಸಲಾಯಿತು.

ನಾಝಿರ್ ಆಅ್‌ಲಾ ಜನಾಬ್ ಮಲಿಕ್ ಸಲಾಹುದ್ದೀನ್ ಸಾಹೇಬ್ ಎಂ. ಎ. ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾರಂಭದಲ್ಲಿ ಖಾರೀ ನವಾಬ್ ಅಹ್ಮದ್ ಸಾಹೇಬ್ ಖುರ್ಆನ್ ಪಾರಾಯಣ ಮಾಡಿದರು. ಅನಂತರ, ಹಝ್ರತ್ ಮಸೀಹ್ ಮೌಊದ್‌ರವರು ಉರ್ದುವಿನಲ್ಲಿ ವಿರಚಿಸಿದ ಮುಹಮ್ಮದ್ ಪೈಗಂಬರರ ಸ್ತುತಿಗಾನವನ್ನು ರಫೀಕ್ ಅಹ್ಮದ್ ಸಾಹೇಬ್ ಮದರಾಸಿ ಸುಶ್ರಾವ್ಯವಾಗಿ ಹಾಡಿದರು.

ಮುಹಮ್ಮದ್ ಪೈಗಂಬರರ ಅಧ್ಯಾಪನಗಳನ್ನು ಅನುಸರಿಸುವುದೇ ದೇವಸಂಪ್ರೀತಿಯನ್ನು ಗಳಿಸಲು ಏಕಮಾತ್ರ ಮಾರ್ಗವೆಂದು ಮೌಲ್ವಿ ಮುಹಮ್ಮದ್ ಕರೀಮುದ್ದೀನ್ ಸಾಹೇಬ್ ತನ್ನ ಭಾಷಣದಲ್ಲಿ ಹೇಳಿದರು.

ನೈತಿಕವಾಗಿ ಅಧಃಪತನ ಹೊಂದಿದ್ದ ಜನತೆಯನ್ನು ಮುಹಮ್ಮದ್ ಪೈಗಂಬರರು ಸುಧಾರಣೆಗೊಳಿಸಿ ಆಧ್ಯಾತ್ಮಿಕತೆಯೆಡೆಗೆ ಹೇಗೆ ಕೊಂಡೊಯ್ದರೆಂದು ಹಕೀಂ ಮುಹಮ್ಮದುದ್ದೀನ್ ಸಾಹೇಬ್ ವಿವರಿಸಿದರು.

ಮಕ್ಕಳಿಗೆ ಉತ್ತಮ ಶಿಕ್ಷಣವನ್ನೂ ತರಬೇತಿಯನ್ನೂ ನೀಡುವರೆ ಮುಹಮ್ಮದ್ ಪೈಗಂಬರರು ನೀಡಿದ ನಿರ್ದೇಶನಗಳ ಕುರಿತು ಮೌಲ್ವಿ ಅಬ್ದುಲ್ ಹಕ್ ಸಾಹೇಬರು ವಿಶದಪಡಿಸಿದರು.

ಮುಹಮ್ಮದ್ ಪೈಗಂಬರರ ಆದೇಶಗಳನ್ನೂ ಉತ್ತಮ ಸ್ವಭಾವಗಳನ್ನೂ ಮುಂದಿಟ್ಟು ಜೀವನವನ್ನು ನಡೆಸಬೇಕೆಂದು ಅಧ್ಯಕ್ಷರು ಉಪದೇಶವಿತ್ತರು.

## ಲಂಡನಿನಲ್ಲಿ ಸರ್ವಧರ್ಮ ಸಮ್ಮೇಳನ

ಲಂಡನಿನ ಅಹ್ಮದಿಯಾ ಘಟಕದ ವತಿಯಿಂದ ಕಳೆದ ಅಕ್ಟೋಬರ್ 20ರಂದು ಸೌತ್‌ಫೀಲ್ಡ್ ವೈಟ್ ಲೇಂಡ್ ಕಾಲೇಜಿನಲ್ಲಿ ಸರ್ವಧರ್ಮ ಸಮ್ಮೇಳನವು ಜರಗಿತು. ವಿವಿಧ ಧರ್ಮಗಳ ವಿದ್ವಾಂಸರು ತಂತಮ್ಮ ಧರ್ಮಗಳ ಕುರಿತು ಭಾಷಣ ಮಾಡಿದರು. ಅನೇಕ ಗಣ್ಯ ವ್ಯಕ್ತಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು.

ವಾಂಡ್ಸ್‌ವರ್ತ್ ಮೇಯರ್ ಮಿ। ಕ್ಲಿಫೊರ್ಡ್ ಜೇಸ್‌ಮನ್ ಸಭೆಯ ಅಧ್ಯಕ್ಷತೆ ವಹಿಸಿದರು. ಅಹ್ಮದಿಯಾ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಸಹ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಬುದ್ಧಸನ್ಯಾಸಿ ಮಿ। ಸುಸಿಟ್ಟೊ ಮಹಾತ್ಮ ಬುದ್ಧರ ಅಧ್ಯಾಪನಗಳ ಕುರಿತು ಮಾತನಾಡಿದರು. ಮಿ। ಜೋಶಿ ಮಹಾತ್ಮ ಶ್ರೀ ಕೃಷ್ಣರ ಉಪದೇಶಗಳ ಕುರಿತು ವಿವರಿಸಿದರು. ಪ್ರೊಫೆಸರ್ ಹರ್ಮಿಂದರ್ ಸಿಂಘ್ ಸಿಖ್ಖ್ ಧರ್ಮದ ಕುರಿತು ಮಾತಾಡಿದರು.

ಅನಂತರ ಚೀನೀ ಅಹ್ಮದಿ ಮಿ। ಉಸ್ಮಾನ್ ಮಹಾತ್ಮ ಕನ್‌ಫ್ಯೂಶಿಯಸ್‌ರವರ ಜೀವಿತ ಮತ್ತು ಉಪದೇಶಗಳ ಬಗ್ಗೆ ಭಾಷಣ ಮಾಡಿದರು.

ಸೌತ್‌ಹಾಲ್ ಬಿಷಪ್ ಚಾರ್ಲ್ಸ್ ಹೆಡ್‌ಸನ್ ಕ್ರೈಸ್ತ ಮತದ ಕುರಿತು ಭಾಷಣವಿತ್ತರು.

ಮಿ। ಮುಸ್ತಫಾ ಸಾಬಿತ್ ಹಝ್ರತ್ ಮುಹಮ್ಮದ್ ಪೈಗಂಬರರ ಜೀವಿತ ಮತ್ತು ಅಧ್ಯಾಪನಗಳ ಕುರಿತು ವಿವರಿಸಿದರು. ಪೈಗಂಬರರು ಸೈರಣೆಯ ಉಪದೇಶವನ್ನು ನೀಡಿದ್ದರು; ಅಕ್ರಮವನ್ನು ಸಹಿಸಿ ಅದನ್ನು ತಡೆಯಲು ಪ್ರಯತ್ನಿಸಿದ್ದರು. ಇಂದು ಇಸ್ಲಾಮೀ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಅಕ್ರಮಗಳು ಇಸ್ಲಾಮಿನ ಉಪದೇಶಗಳಿಗೆ ವಿರುದ್ಧವಾಗಿವೆ ಎಂದು ಅವರು ನುಡಿದರು.

ಎಲ್ಲಾ ಧರ್ಮೀಯರನ್ನು ಒಂದೇ ಕಡೆಯಲ್ಲಿ ಒಟ್ಟುಗೂಡಿಸಿ ವಿವಿಧ ಧರ್ಮಗಳ ಬಗ್ಗೆ ಪರಸ್ಪರ ಅರಿತುಕೊಳ್ಳುವ ಸಂದರ್ಭವನ್ನು ಒದಗಿಸಿಕೊಟ್ಟ ಸಂಘಟಕರನ್ನು ಮೇಯರ್ ಅಭಿನಂದಿಸಿದರು. ★

---

## ಜನಾಬ್ ಯು. ಸೈದಾಲಿ ಸಾಹೇಬ್ ನಿಧನ

ಮೂಲತಃ ಮಂಜೇಶ್ವರದವರಾದ ಜನಾಬ್ ಯು. ಸೈದಾಲಿ ಸಾಹೇಬರು ಕಳೆದ ಅಕ್ಟೋಬರ್ 31ರಂದು ಪುತ್ತೂರಿನಲ್ಲಿ ನಿಧನ ಹೊಂದಿದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್)

ಮರಣ ಕಾಲದಲ್ಲಿ ಅವರಿಗೆ ಸುಮಾರು 82 ವರ್ಷ ವಯಸ್ಸಾಗಿತ್ತು. 1944ನೇ ಇಸವಿಯಲ್ಲಿ ಅವರು ಅಹ್ಮದಿಯಾ ಜಮಾಅತಿಗೆ ಸೇರಿದರು. ಅಹ್ಮದಿ ಆದ ಕಾರಣದಿಂದ ಅವರಿಗೆ ಅನೇಕ ಕಷ್ಟನಷ್ಟಗಳನ್ನು ಅನುಭವಿಸಬೇಕಾಗಿ ಬಂದಿತ್ತು. ಸುಮಾರು ಹತ್ತುವರ್ಷಗಳ ಮೊದಲು ಅವರು ಪುತ್ತೂರಿನ ಕಬಕದಲ್ಲಿ ತನ್ನ ಪುತ್ರ ಜ। ಯು. ಎಸ್. ಮಾಹಿನ್ ಕುಞ್ಞಿ ಸಾಹೇಬರೊಂದಿಗೆ ವಾಸಮಾಡಲು ತೊಡಗಿದ್ದರು. ಒಬ್ಬ ಪುತ್ರನನ್ನೂ ಇಬ್ಬರು ಪುತ್ರಿಯರನ್ನೂ ಅನೇಕ ಬಂಧುಮಿತ್ರರನ್ನೂ ಅವರು ಅಗಲಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತನ್ನು ದಯಪಾಲಿಸಲಿ. ಆಮೀನ್.

# ಜನಾಬ್ ಎಂ. ಅಬ್ದುಲ್ ರಶೀದ್ ಸಾಹೇಬ್ ನಿಧನ



ಅಹ್ಮದಿಯಾ ಜಮಾಅತಿನ ಮಂಗಳೂರು, ಮಂಜೇಶ್ವರ, ಮೊಗ್ರಾಲ್ ಘಟಕಗಳಿಗೆ ಸುದೀರ್ಘಕಾಲ ಅಧ್ಯಕ್ಷರಾಗಿದ್ದ ಹಾಗೂ "ಯುಗರಶ್ಮಿ" ಸಂಪಾದಕರ ತಂದೆಯವರಾದ ಜ। ಎಂ. ಅಬ್ದುಲ್ ರಶೀದ್ ಸಾಹೇಬರು ಕಳೆದ ನವೆಂಬರ್ 30ರಂದು ತನ್ನ 84ನೇ ವಯಸ್ಸಿನಲ್ಲಿ ಮಂಜೇಶ್ವರದಲ್ಲಿರುವ ಸ್ವಗೃಹದಲ್ಲಿ ನಿಧನ ಹೊಂದಿದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್".

1903ನೇ ಇಸವಿ ಜುಲಾಯಿ 15ರಂದು ಅವರು ಉಳ್ಳಾಲದಲ್ಲಿ ಹಿಂದೂ ಕುಟುಂಬದಲ್ಲಿ ಹುಟ್ಟಿದರು. ಪ್ರಾಥಮಿಕ ಶಾಲಾ ವಿದ್ಯಾಭ್ಯಾಸವನ್ನು ಅವರು ಮಂಗಳೂರಿನಲ್ಲಿ ಗಳಿಸಿದರು. ಅವರು ಆಟದಲ್ಲೂ ಪಾಠದಲ್ಲೂ ಮುಂದಿದ್ದರು. ತನ್ನ ಬಾಲ್ಯದಲ್ಲಿಯೇ ಧರ್ಮದ ಬಗ್ಗೆ ಅವರು ಜಿಜ್ಞಾಸೆಯನ್ನು ಪ್ರಕಟಿಸಿ ತನ್ನ ತಂದೆಯವರೊಡನೆ, ಜನರಿಂದ ಪೂಜಿಸಲ್ಪಡುವ ಅನೇಕ ದೇವರುಗಳ ಪೈಕಿ ನಿಜ ದೇವರು ಯಾರೆಂದು ಪ್ರಶ್ನಿಸಿದ್ದರು. ಸತ್ಯಾನ್ವೇಷಣೆಯಲ್ಲಿ ತೊಡಗಿದ ಅವರು ಹಿಂದೂ. ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಬಗ್ಗೆ ಅಧ್ಯಯನ ಮಾಡಲು ಆರಂಭಿಸಿದರು. ಕೊನೆಗೆ ಅವರು 1930ನೇ ಇಸವಿ ಜನವರಿ 23ರಂದು ಇಸ್ಲಾಂ ಧರ್ಮಕ್ಕೆ ಮತಾಂತರವಾದರು. ಅನಂತರ ಉರ್ದು, ಅರಬಿ ಭಾಷೆಗಳನ್ನು ಕಲಿಯಲಿಕ್ಕಾಗಿ ಅವರು ಹೈದರಾಬಾದಿಗೆ ಹೋದರು. ಅಲ್ಲಿ ಅವರಿಗೆ ಪ್ರಖ್ಯಾತ ಅಹ್ಮದಿಯಾ ಮಿಶನರಿ ಮೌಲಾನ ಅಬ್ದುರ್ರಹೀಂ ನಯ್ಯರ್ ಸಾಹೇಬ್ ಮತ್ತು ಸರ್ ಅಕ್ಬರ್ ಯಾರ್ ಜಂಗ್ ಬಹಾದುರ್ ಸಾಹೇಬರ ಪರಿಚಯವಾಯಿತು. 1932ರಿಂದಲೇ ಅಹ್ಮದಿಯಾ ವಿಶ್ವಾಸವನ್ನು ಹೊಂದಿದ ಅವರು ಇನ್ನೂ ಹೆಚ್ಚು ಅಧ್ಯಯನ ಮಾಡಿದ ಬಳಿಕ 1935ರಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದರು. ಮಂಜೇಶ್ವರದ ಪ್ರಥಮ ಅಹ್ಮದಿ ಅವರೇ ಆಗಿದ್ದಾರೆ.

1935ರಿಂದ 1942ರ ವರೆಗೆ ಮಂಜೇಶ್ವರದಲ್ಲಿ ಒಬ್ಬನೇ ಒಬ್ಬ ಅಹ್ಮದಿಯಾಗಿದ್ದ ಅವರು ಊರಿನ ಜನರ ಅನೇಕ ಕಿರುಕುಳಗಳನ್ನು ಸಹಿಸಿದರು. ಹಲವು ವಿಧ ಕಷ್ಟನಷ್ಟಗಳನ್ನು ಅನುಭವಿಸಿದರು. ತನ್ನ ವಿಶ್ವಾಸವನ್ನು ರಕ್ಷಿಸಲಿಕ್ಕೋಸ್ಕರ ಅವರು ಅತಿ ಧೀರತೆಯನ್ನು ತೋರಿಸಿದ್ದಾರೆ: ಅನೇಕ ತ್ಯಾಗಗಳನ್ನು ಮಾಡಿದ್ದಾರೆ.

1941ರಿಂದ 1983ರ ಕಾಲಾವಧಿಯಲ್ಲಿ ಅವರು ಅಹ್ಮದಿಯಾ ಜಮಾಅತಿನ ಮಂಗಳೂರು, ಮಂಜೇಶ್ವರ, ಮೊಗ್ರಾಲ್ ಘಟಕಗಳ ವಿವಿಧ ಹುದ್ದೆಗಳಿಗೆ ಚುನಾಯಿಸಲ್ಪಟ್ಟಿದ್ದರು. 3 ವರ್ಷಕಾಲ ಅವರು ಸೆಕ್ರೆಟರಿ ಉಮೂರೆ ಆಮಾ ಆಗಿಯೂ ಅರ್ಧ ವರ್ಷಕಾಲ ಉಪಾಧ್ಯಕ್ಷರಾಗಿಯೂ ಸುಮಾರು 39 ವರ್ಷಕಾಲ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರ ಮನೆಯ ಒಂದು ಭಾಗವು ಅಹ್ಮದಿಯರ ಜುಮಾ ಪ್ರಾರ್ಥನೆ, ಈದ್ ಪ್ರಾರ್ಥನೆಗಳಿಗಾಗಿ ಉಪಯೋಗಿಸಲಾಗುತ್ತಿತ್ತು. 1972ನೇ ಇಸವಿಯಲ್ಲಿ ಅವರು ಪ್ರಾರ್ಥನೆಗೋಸ್ಕರ ವಿಶಾಲವಾದೊಂದು ಹಾಲ್‌ಅನ್ನು ಕಟ್ಟಿಸಿದರು. ಮಂಜೇಶ್ವರದಲ್ಲಿ ಅಹ್ಮದಿಯರಿಗೆ ಕಬರಸ್ತಾನವಿಲ್ಲದಿದ್ದಾಗ ಅವರು ಸ್ಥಳವನ್ನು ನೀಡಿದ್ದಾರೆ. ಅಲ್ಲಿ ಒಂದು ಮಸೀದಿಯನ್ನು ಕಟ್ಟಲಿಕ್ಕೆ ಕೂಡ ಅವರು ನಿವೇಶನವನ್ನು ಇತ್ತೀಚೆಗೆ ಕೊಡುಗೆಯಾಗಿ ಇತ್ತಿದ್ದಾರೆ. ತನ್ನ ಸಂಪಾದನೆಯ ಒಂದು ನಿರ್ದಿಷ್ಟ ಅಂಶವನ್ನು ಜಮಾಅತಿಗೆ ಕೊಡಲು ವಸೀಯತ್ ಮಾಡಿದ "ಮೂಸಿ" ಕೂಡ ಆಗಿದ್ದರು ಅವರು. ಅತಿಥಿ ಸತ್ಕಾರದಲ್ಲಿ ಅವರು ಆಸಕ್ತಿಯನ್ನು ತೋರಿಸುವವರಾಗಿದ್ದರು. ಅಹ್ಮದಿಯಾ ಜಮಾಅತಿನ ಸ್ಥಾಪಕರ ಪೌತ್ರ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರನ್ನು ನಾಲ್ಕು ಬಾರಿ (ಎರಡು ಬಾರಿ ಕುಟುಂಬ ಸಮೇತ) ಅವರು ಮಂಜೇಶ್ವರದಲ್ಲಿರುವ ತನ್ನ ಮನೆಗೆ ಆಮಂತ್ರಿಸಿ ಸತ್ಕರಿಸಿದ್ದಾರೆ. ಲಂಡನಿನ ಅಹ್ಮದಿಯಾ ಮಿಶನರಿ ಜನಾಬ್ ಬಶೀರ್ ಅಹ್ಮದ್ ಆರ್ಚರ್ಡ್ ಸಾಹೇಬ್ ಮತ್ತು ಸಿರಿಯಾದ ಮಿಶನರಿ ಜನಾಬ್ ಅಸ್ಸಯ್ಯದ್ ಸಲೀಮುಲ್

ಹಸನುಲ್ ಜಾಬಿ ಸಾಹೇಬರಿಗೆ ಜೊತೆಯಲ್ಲಿ ಅವರು ತನ್ನ ಮನೆಯಲ್ಲಿ ಸತ್ಕಾರ ನೀಡಿದ್ದರು. (ಅದೇ ದಿನ – 1958 ಮಾರ್ಚ್ 2 – ಮಂಜೇಶ್ವರದ ಎಸ್. ಎ. ಟಿ. ಹೈಸ್ಕೂಲಿನಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು). ಜಮಾಅತಿನ ಇತರ ಅನೇಕ ಮುಬಲ್ಲಿಗರನ್ನೂ ಗಣ್ಯ ವ್ಯಕ್ತಿಗಳನ್ನೂ ಮನೆಗೆ ಅವರು ಆಮಂತ್ರಿಸಿ ಆತಿಥ್ಯವನ್ನು ಕೊಟ್ಟಿದ್ದಾರೆ. ಮಲಬಾರಿನ ಅಗ್ರಗಣ್ಯ ಅಹ್ಮದಿಯಾ ಮಿಶನರಿ ಮೌಲಾನ ಬಿ. ಅಬ್ದುಲ್ಲಾ ಸಾಹೇಬ್ ಎಚ್. ಎ. ಅವರನ್ನು ಅವರು ತನ್ನ ಮನೆಗೆ ಪದೇ ಪದೇ ಆಹ್ವಾನಿಸುತ್ತಿದ್ದರು. ಅದೇ ಸಮಯದಲ್ಲಿ ತನ್ನ ಬಂಧು ಮಿತ್ರಾದಿಗಳನ್ನೂ ಕರೆಯುತ್ತಿದ್ದರು. ಮೌಲ್ವಿ ಸಾಹೇಬರೊಡನೆ ಅನೇಕ ಪ್ರಶ್ನೆಗಳನ್ನು ಕೇಳಿ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದರು.

ಅಹ್ಮದಿಯಾ ಕನ್ನಡ ಸಾಹಿತ್ಯದಲ್ಲಿಯೂ ಅವರು ತನ್ನ ಸೇವೆ ಸಲ್ಲಿಸಿದ್ದಾರೆ. ಹಿಂದಿನ "ಸೌತ್ ಕೆನರಾ"ದಲ್ಲಿ ಅಹ್ಮದೀ ಕನ್ನಡ ಬರಹಗಾರ ಮತ್ತು ಭಾಷಣಗಾರ ಅವರೊಬ್ಬರೇ ಇದ್ದರೆಂದು ಹೇಳಬಹುದು. "ಇದು ಈಮಾನಿಗೆ ಅರ್ಹವಲ್ಲವೋ?" ಎಂಬ ಅನುವಾದ ಕೃತಿಯನ್ನು ಅವರು ರಚಿಸಿದ್ದಾರೆ. ಹುಬ್ಬಳ್ಳಿಯಿಂದ ಪ್ರಕಾಶಿತವಾದ "ಅಹ್ಮದಿಯಾ ಸಂದೇಶ"ದ ಕನ್ನಡಾನುವಾದದ ಕೆಲವು ಅಂಶಗಳನ್ನು ಅವರು ಬರೆದಿದ್ದಾರೆ. ಅನೇಕ ವರ್ಷಗಳ ಮೊದಲು ಶಿವಮೊಗ್ಗದಲ್ಲಿ ನಡೆದ ಅಹ್ಮದಿಯಾ ಸಮ್ಮೇಳನದಲ್ಲಿ ಅವರು ಕನ್ನಡ ಭಾಷಣ ಮಾಡಿರುವರು. "ಯುಗರಶ್ಮಿ" ಪತ್ರಿಕೆಯನ್ನು ಆರಂಭಿಸಲು ಕಾರಣಕರ್ತರಲ್ಲಿ ಓರ್ವರು ಅವರಾಗಿದ್ದಾರೆ. ಯುಗರಶ್ಮಿಗೆ ಅವರು ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಆರಂಭ ಕಾಲದಲ್ಲಿ ಯುಗರಶ್ಮಿ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದ್ದಾಗ ಸಾಲ ರೂಪದಲ್ಲಿಯೂ ದೇಣಿಗೆಯಾಗಿಯೂ ಅನೇಕ ಸಲ ಅವರು ನೆರವನ್ನಿತ್ತಿದ್ದಾರೆ. ಯುಗರಶ್ಮಿ ಬಳಗದ ಜನಾಬ್ ಎಂ. ಉಬೈದುಲ್ಲಾ ಸಾಹೇಬ್ ಬಿ. ಎ. ಎಲ್ ಎಲ್ ಬಿ. ಅವರು ಅವರ ಹಿರಿಯ ಪುತ್ರರಾಗಿದ್ದಾರೆ. ಸಾಹಿತ್ಯರಂಗದಲ್ಲಿ ಮಾತ್ರವಲ್ಲ ಎಲ್ಲಾ ವಿಧದಲ್ಲೂ ಜಮಾಅತಿಗೆ ಸೇವೆಸಲ್ಲಿಸಲು ಅವರು ತನ್ನ ಸಂತಾನಗಳಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದರು. ತನ್ನ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡುವರೆ ಅವರು ಬಹಳ ಕಳಕಳಿ ವಹಿಸಿದ್ದಾರೆ. ಮಂಜೇಶ್ವರದಲ್ಲಿ ಹೈಸ್ಕೂಲು ವಿದ್ಯಾಭ್ಯಾಸಕ್ಕೆ ಹೋದ ಪ್ರಪ್ರಥಮ ಮುಸ್ಲಿಂ ಹುಡುಗಿ ಅವರ ದ್ವಿತೀಯ ಪುತ್ರಿ.


ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದ್ದರೂ ಅವರು ತನ್ನ ಹಿಂದೂ ಬಾಂಧವರೊಡನೆ ಸಂಬಂಧವನ್ನು ಕಡಿದುಕೊಂಡಿರಲಿಲ್ಲ. ತನ್ನ ತಂದೆ, ತಾಯಿ ಮತ್ತು ಹಿಂದಿನ ಪತ್ನಿಯ ಮರಣ ಕಾಲದ ವರೆಗೆ ಅವರು ಉತ್ತಮ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಎಲ್ಲಾ ಸುಖದುಃಖಗಳಲ್ಲಿ ಅವರು ಪರಸ್ಪರ ಪಾಲುಗೊಳ್ಳುತ್ತಿದ್ದರು. ಅವರ ಹಿರಿಯ ಸಹೋದರಿಯೂ ಮಕ್ಕಳೂ ಇತರ ಸಂಬಂಧಿಗಳೂ ಈಗಲೂ ಅವರ ಮುಸ್ಲಿಂ ಬಂಧುಗಳೊಡನೆ ಬಹಳ ಅನ್ಯೋನ್ಯತೆಯಲ್ಲಿದ್ದಾರೆ. ಮತಾಂತರ ಹೊಂದಿದ ಒಬ್ಬ ವ್ಯಕ್ತಿಗೆ ತನ್ನ ಪೂರ್ವ ಸಂಬಂಧಿಕರೊಡನೆ ಬಾಂಧವ್ಯವಿರುವ ಉದಾಹರಣೆ ಕಾಣಸಿಗುವುದು ಬಲು ಅಪರೂಪ.

ಪ್ರಸಿದ್ಧ ಆಯುರ್ವೇದ ವೈದ್ಯರಾಗಿದ್ದ ಅವರು ಊರಿನ ಗಣ್ಯವ್ಯಕ್ತಿಗಳ ಪೈಕಿ ಒಬ್ಬರಾಗಿದ್ದರು. ತಮ್ಮ ಸುಖ ದುಃಖಗಳನ್ನು ಹೇಳಲಿಕ್ಕೂ ತಮ್ಮ ತಂಟೆ ತಕರಾರುಗಳನ್ನು ಪರಿಹರಿಸಲಿಕ್ಕೂ ಜನರು ಅವರ ಬಳಿಗೆ ಬರುತ್ತಿದ್ದರು. ಅವರು ಮಾಡಿದ ತೀರ್ಮಾನಗಳನ್ನು ಜನರು ಗೌರವದಿಂದ ಅಂಗೀಕರಿಸುತ್ತಿದ್ದರು. ಸಂಕಷ್ಟದಲ್ಲಿರುವವರಿಗೆ ತನ್ನ ಕೈಲಾದಷ್ಟು ನೆರವನ್ನು ಅವರು ನೀಡುತ್ತಿದ್ದರು. ಹಿಂದೊಮ್ಮೆ ಊರಿನಲ್ಲಿ ಆಹಾರ ಕ್ಷಾಮ ತಲೆದೋರಿದಾಗ ಸರಕಾರದಿಂದ ಕೂಡಲೇ ಆಹಾರ ಸರಬರಾಜು ಆಗುವರೆ ಸಾಕಷ್ಟು ಪ್ರಯತ್ನಿಸಿ ಕಂಗಾಲಾದ ಜನರಿಗೆ ಅವರು ನೆರವಾಗಿದ್ದರು.

ಪ್ರಥಮ ಮುಸ್ಲಿಂ ಪತ್ನಿಯನ್ನು ವರಿಸಿ ಎರಡು ವರ್ಷಗಳಾಗುವಷ್ಟರಲ್ಲೇ ಆಕೆ ಮಡಿದಾಗ, ತನ್ನ ತಂದೆಯ ಸಲಹೆಯ ಮೇರೆಗೆ ಅವರು ಆ ಮಹಿಳೆಯ ತಂಗಿಯನ್ನೇ ಮದುವೆಯಾದರು. ಅವರು ಪತ್ನಿಯನ್ನೂ ಇಬ್ಬರು ಪುತ್ರರನ್ನೂ ಮೂವರು ಪುತ್ರಿಯರನ್ನೂ ಅನೇಕ ಮೊಮ್ಮಕ್ಕಳು ಮರಿಮಕ್ಕಳನ್ನೂ ಅಸಂಖ್ಯಾತ ಬಂಧುಮಿತ್ರರನ್ನೂ ಅಗಲಿದ್ದಾರೆ.

ಅಲ್ಲಾಹನು ಅವರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲಿ. ಅವರಿಗೆ ಉನ್ನತ ಸ್ಥಾನವನ್ನೂ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ. ಆಮೀನ್.

★




ಕಲ್ಲಿಕೋಟೆಯಲ್ಲಿ ಇತ್ತೀಚೆಗೆ ಉದ್ಘಾಟಿಸಲ್ಪಟ್ಟ ಅಹ್ಮದಿಯಾ ಮಸೀದಿ
(ವರದಿ 35ನೇ ಪುಟದಲ್ಲಿ)


## Ahmadiyya English Literature

1. Introduction to the Study of the Holy Quran
   By Hazrath Mirza Bashiruddin Mahmud Ahmad
2. The Philosophy of the Teachings of Islam
   By Hazrath Mirza Ghulam Ahmad
3. Characteristics of the Quranic Teachings
   By Hazrath Mirza Bashiruddin Mahmud Ahmad
4. The Holy Prophet Muhammad
   By Hazrath Mirza Bashiruddin Mahmud Ahmad
5. Ahmadiyya Movement
   By Hazrath Mirza Bashiruddin Mahmud Ahmad
6. Truth About Khatme Nabuwath
   By Hazrath Mirza Bashir Ahmad M. A.
7. An Interpretaticn of Islam — By Laura Veccia Vaglieri
8. Muhammad the Most Successful Prophet
   By Moulana Sharif Ahmad Amini
9. Jesus in India — By Hazrath Mirza Ghulam Ahmad
10. Where Did Jesus Die? — By J. D. Shams

Write to : **Secretary for Mission Works**
Sadr Anjuman Ahmadiyya, Qadian - 143 516 (Punjab)

Regd. with the Registrar of Newspapers for India Regd. No. R. N. 27354/75
**YUGARASHMI Kannada Quarterly, January 1987 / Sulh 1366**




English Translation of the
HOLY QURAN
with Arabic Text &
Extensive Index

**Price : Rs. 20-00**
**Postage Extra**

Write to:
**NAZIR DAWAT-O-TABLIGH**
Sadr Anjuman Ahmadiyya
Qadian - 143 516 (Punjab)

ಸ್ಟ್ಯಾಂಡರ್ಡ್ ಟೈಲರಿ
ಕಡೂರು, ಚಿಕ್ಕಮಗಳೂರು ಜಿಲ್ಲೆ
ರಾಜಾ ಮಾರ್ಕಿನ ಹಂಚುಗಳು

**ಚಾವಣಿ ಹಂಚು, ಮೂಲೆ ಹಂಚು, ಗೋಡೆ ಹಂಚು, ಹಾಸು ಹಂಚು, ಮೆತ್ತಡ ಹಂಚು, ಅಲಂಕಾರಿಕ ಹಂಚು, ಮೊದಲಾದ ಎಲ್ಲಾ ತರದ ಆವೆಮಣ್ಣಿನ ಉತ್ಪನ್ನಗಳು ದೊರೆಯುತ್ತವೆ.**

**STANDARD TILERY**
KADUR
CHICKMAGALUR DIST

Edited and Published by Muhammad Yusuf on behalf of Jamath Ahmadiyya at 10-23-1008, Ansari Road, Bunder, Mangalore-575 001. Phone: 32039
Printed at Jubilee Printing Press, Ansari Road, Bunder, Mangalore-575 001.